ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ನವೆಂಬರ್ 23 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ
ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 216 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕೆಆರ್‌ಎಸ್ ಜಲಾಶಯದ ಸುತ್ತ ಕಲ್ಲು ಗಣಿಗಾರಿಕೆ ವರದಿ ನೀಡಲು 6 ತಿಂಗಳ ಗಡುವು ನೀಡಿದ ಹೈಕೋರ್ಟ್

ಬೆಂಗಳೂರು, ನ.22– ಕೆಆರ್‌ಎಸ್ ಜಲಾಶಯದ ಸುತ್ತ 20 ಕಿಮೀ ವ್ಯಾಪ್ತಿಯಲ್ಲಿ ಕಲ್ಲು ಕ್ವಾರಿ, ಜೊತೆಗೆ ಸ್ಫೋಟಕ ಚಟುವಟಿಕೆ ನಡೆಸುತ್ತಿರುವ ಘಟಕಗಳನ್ನು ಪರಿಶೀಲಿಸಿ ಸಮಗ್ರ ವರದಿ ಸಲ್ಲಿಸಲು ಹೈಕೋರ್ಟ್, ಜಲಾಶಯ ಸುರಕ್ಷತಾ ಸಮಿತಿಗೆ ಆರು ತಿಂಗಳ ಕಾಲಾವಕಾಶ ನೀಡಿದೆ. ಕಲ್ಲು ಗಣಿಗಾರಿಕೆ ಕುರಿತಂತೆ ಸಿ.ಜಿ.ಕುಮಾರ್ ಸಲ್ಲಿಸಿರುವ ಮೂಲ ಅರ್ಜಿಯಲ್ಲಿ ಸಲ್ಲಿಕೆಯಾಗಿರುವ ಹಲವು ಮಧ್ಯಂತರ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎನ್. ಅಂಜಾರಿಯಾ ಮತ್ತು ನ್ಯಾಯಮೂರ್ತಿ ಕೆ.ವಿ.ಅರವಿಂದ್ ● 9ನೇ ಪುಟಕ್ಕೆ

ಚನ್ನಪಟ್ಟಣ, ಶಿಗ್ಗಾಂವಿ, ಸಂಡೂರು
ಇಂದು ಫಲಿತಾಂಶ


ನಿಖಿಲ್ ಕುಮಾರಸ್ವಾಮಿ ಎನ್‌ಡಿಎ


ಸಿ.ಪಿ.ಯೋಗೇಶ್ವರ್ ಕಾಂಗ್ರೆಸ್


ಭರತ್ ಬೊಮ್ಮಾಯಿ ಎನ್‌ಡಿಎ


ಯಾಸೀರ್ ಪಠಾಣ್ ಕಾಂಗ್ರೆಸ್


ಇ.ಅನ್ನಪೂರ್ಣ ಕಾಂಗ್ರೆಸ್


ಹನುಮಂತು ಎನ್‌ಡಿಎ

ಬೆಂಗಳೂರು, ನ.22(ಕೆಎಂಶಿ)– ಪ್ರಭಾವೀ ರಾಜಕಾರಣಿಗಳ ಕುಟುಂಬಗಳವರು ಕಣದಲ್ಲಿರುವ ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣಾ ಫಲಿತಾಂಶಕ್ಕೆ ಕ್ಷಣಗಣನೆ ಆರಂಭವಾಗಿದೆ.

ಚನ್ನಪಟ್ಟಣ, ಶಿಗ್ಗಾಂವಿ ಹಾಗೂ ಸಂಡೂರು ವಿಧಾನಸಭಾ ಕ್ಷೇತ್ರಗಳಿಗೆ ನವೆಂಬರ್ 13ರಂದು ಮತದಾನ ನಡೆದಿದ್ದು, ನಾಳೆ (ನ.23) ಈ ಕ್ಷೇತ್ರಗಳ ಮತಎಣಿಕೆ ಆಯಾ ಜಿಲ್ಲಾ ಕೇಂದ್ರಗಳಲ್ಲಿ ನಡೆಯಲಿದೆ. ನಾಳೆ ಮಧ್ಯಾಹ್ನದ ವೇಳೆಗೆ ಮೂರು ಕ್ಷೇತ್ರಗಳ ಫಲಿತಾಂಶ ಹೊರಬೀಳಲಿದ್ದು, ಕಣದಲ್ಲಿರುವ ಒಟ್ಟು 45 ಅಭ್ಯರ್ಥಿಗಳ ರಾಜಕೀಯ ಹಣೇಬರಹ ನಿರ್ಧಾರವಾಗಲಿದೆ.

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಸಚಿವ ಇ.ತುಕಾರಾಂ ಅವರು ಲೋಕಸಭೆಗೆ ಆಯ್ಕೆಗೊಂಡಿದ್ದರಿಂದ ಈ ಕ್ಷೇತ್ರಗಳು ತೆರವಾಗಿದ್ದವು. ತಮ್ಮಿಂದ ತೆರವಾದ ಕ್ಷೇತ್ರಗಳಲ್ಲಿ ಮೂರೂ ಮಂದಿಯೂ ವಿವಿಧ ಪಕ್ಷಗಳಿಂದ ತಮ್ಮ ಕುಟುಂಬದವರನ್ನೇ ಕಣಕ್ಕಿಳಿಸಿದ್ದಾರೆ.

ಕುಮಾರಸ್ವಾಮಿ ತಮ್ಮ ಪುತ್ರ ನಿಖಿಲ್ ಕುಮಾರಸ್ವಾಮಿಯನ್ನು ಎನ್‌ಡಿಎ ಅಭ್ಯರ್ಥಿಯಾಗಿ ಚನ್ನಪಟ್ಟಣದಲ್ಲಿ ಕಣಕ್ಕಿಳಿಸಿದ್ದರೆ, ಅವರ ಪ್ರತಿಸ್ಪರ್ಧಿ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ ಸಿ.ಪಿ.ಯೋಗೇಶ್ವರ್ ಕಣದಲ್ಲಿದ್ದಾರೆ. ಶಿಗ್ಗಾಂವಿಯಲ್ಲಿ ಬಸವರಾಜ ಬೊಮ್ಮಾಯಿ, ಪುತ್ರ ಭರತ್ ಬೊಮ್ಮಾಯಿ ಅವರನ್ನು ಕಣಕ್ಕಿಳಿಸಿದ್ದರೆ, ● 9ನೇ ಪುಟಕ್ಕೆ

ಚನ್ನಪಟ್ಟಣದಲ್ಲಿ ನಮದೇ ಗೆಲುವು

ಬೆಂಗಳೂರು, ನ.22(ಕೆಎಂಶಿ)–ಮತದಾನೋತ್ತರ ಸಮೀಕ್ಷೆ ಫಲಿತಾಂಶಗಳೆಲ್ಲಾ (ಎಕ್ಸಿಟ್ ಪೋಲ್) ತಲೆಕೆಳಗಾಗಲಿದ್ದು, ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಲಿದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.


ಡಿ.ಕೆ.ಶಿವಕುಮಾರ್


ಸುದ್ದಿಗಾರರೊಂದಿಗೆ ಮಾತನಾಡಿ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಚನ್ನಪಟ್ಟಣ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ 16 ಸಾವಿರ ಮತಗಳು ದೊರೆತಿದ್ದವು. ಆದರೆ ಈ ಬಾರಿ ಗೆದ್ದೇ ಗೆಲ್ಲುತ್ತೇವೆ ಎನ್ನುವ ಆತ್ಮವಿಶ್ವಾಸ ವಿದೆ. ರಾಮನಗರದಲ್ಲಿ ಇಕ್ಬಾಲ್ ಹುಸೇನ್, ಮಾಗಡಿಯಲ್ಲಿ ಬಾಲಕೃಷ್ಣ, ಕನಕಪುರದಲ್ಲಿ ನಾನು ಗೆದ್ದಿದ್ದೆವು. ಚನ್ನಪಟ್ಟಣದಲ್ಲಿ ಮಾತ್ರ ಗೆದ್ದಿರಲಿಲ್ಲ, ಈ ಬಾರಿ ಅಲ್ಲಿಯೂ ಗೆಲುವು ಖಂಡಿತ ಎಂದರು. ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲೂ ನಾವು ಗೆದ್ದೇ ಗೆಲ್ಲುತ್ತೇವೆ. ನನಗೆ ಮಹಾರಾಷ್ಟ್ರದ ● 6ನೇ ಪುಟಕ್ಕೆ

ಮಹಾರಾಷ್ಟ್ರ, ಜಾರ್ಖಂಡ್ ವಿಧಾನಸಭೆ, ವಯ್‌ನಾಡ್ ಸೇರಿ ಹಲವು ಉಪ ಚುನಾವಣೆ ಫಲಿತಾಂಶಕ್ಕೂ ಕ್ಷಣಗಣನೆ

ನವದೆಹಲಿ, ನ.22–ಮಹಾರಾಷ್ಟ್ರ, ಜಾರ್ಖಂಡ್ ರಾಜ್ಯಗಳ ವಿಧಾನಸಭಾ ಚುನಾವಣೆ ಫಲಿತಾಂಶ ಸೇರಿದಂತೆ ದೇಶದ ವಿವಿಧ ರಾಜ್ಯಗಳಲ್ಲಿನ ವಿಧಾನಸಭೆ ಮತ್ತು ಲೋಕಸಭೆ ಉಪಚುನಾವಣೆಯ ಫಲಿತಾಂಶಕ್ಕೆ ಕ್ಷಣಗಣನೆ ಆರಂಭವಾಗಿದೆ.

ಶನಿವಾರ ಬೆಳಗ್ಗೆ 8 ಗಂಟೆಗೆ ಮಹಾರಾಷ್ಟ್ರ ಹಾಗೂ ಜಾರ್ಖಂಡ್ ರಾಜ್ಯಗಳ ವಿಧಾನಸಭೆಯ ಚುನಾವಣೆ ಮತ ಎಣಿಕೆ ನಡೆಯಲಿದೆ. ಮಹಾರಾಷ್ಟ್ರಕ್ಕೆ ನ.20ರಂದು ಏಕಕಾಲಕ್ಕೆ ಚುನಾವಣೆ ನಡೆದಿತ್ತು. ಜಾರ್ಖಂಡ್ ರಾಜ್ಯದಲ್ಲಿ ನ.13 ಮತ್ತು 20ರಂದು ಎರಡು ಹಂತದಲ್ಲಿ ಮತದಾನ ನಡೆದಿತ್ತು.

ಕೇರಳದ ವಯನಾಡು ಮತ್ತು ಮಹಾರಾಷ್ಟ್ರದ ನಾಂದೇಡ್ ಲೋಕಸಭಾ ಕ್ಷೇತ್ರಕ್ಕೆ ಉಪಚುನಾವಣೆ ನಡೆದಿತ್ತು. ವಯನಾಡ್ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿ ಸ್ಪರ್ಧೆ ಮಾಡಿರುವುದರಿಂದ ಈ ಕ್ಷೇತ್ರ ● 9ನೇ ಪುಟಕ್ಕೆ


ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಸಹಜ ಸಮೃದ್ಧಿ ಮತ್ತು ಅಕ್ಷಯ ಕಲ್ಪ ಆರ್ಗಾನಿಕ್ಸ್ ವತಿಯಿಂದ ಆಯೋಜಿಸಿರುವ 3 ದಿನಗಳ ಬಾಳೆ ಮೇಳದಲ್ಲಿ ಕೇರಳಾದ ತಿರುವನಂತಪುರಂನ ವಿನೋದ್ ನಾಯರ್ ಪ್ರದರ್ಶನಕ್ಕೆ ತಂದಿರುವ ಸಹಸ್ರ ಬಾಳೆಯ(ಪಿಸಾಂಗ್ ಸೆರಿಬು ಅಥವಾ ಆಯಿರಂ ಪೂವಂ) ತಳಿಯ ಗೊನೆಯೂ ಎಲ್ಲರ ಗಮನ ಸೆಳೆಯುತ್ತಿದೆ.

ನಾಲ್ಕನೇ ಪ್ರಕರಣದಲ್ಲೂ ಪ್ರಜ್ವಲ್ ಜಾಮೀನು ಅರ್ಜಿ ವಜಾ

ಬೆಂಗಳೂರು. ನ.22– ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ಜಾಮೀನು ಅರ್ಜಿ ವಜಾಗೊಂಡಿದೆ. ನಾಲ್ಕನೇ ಪ್ರಕರಣದಲ್ಲಿ ಜಾಮೀನು ಕೋರಿ ಪ್ರಜ್ವಲ್ ರೇವಣ್ಣ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕ ಸದಸ್ಯ ಪೀಠ, ಜಾಮೀನು ಅರ್ಜಿ ವಜಾ ಮಾಡಿದೆ.


ಪ್ರಜ್ವಲ್

ಇನ್ನು ಕಳೆದ ಅಕ್ಟೋಬರ್‌ನಲ್ಲಿ ಮೂರು ಕೇಸ್ ವಿಚಾರಣೆ ನಡೆಸಿದ್ದ ಹೈಕೋರ್ಟ್, ಆ ಮೂರೂ ಜಾಮೀನು ಅರ್ಜಿ ವಜಾಗೊಳಿಸಿತ್ತು ಇದೀಗ 4ನೇ ಪ್ರಕರಣದಲ್ಲೂ ಜಾಮೀನು ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಜಾ ಮಾಡಿದೆ.

ಏನಿದು 4ನೇ ಪ್ರಕರಣ : ಹಾಸನ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಮೇಲಿನ ಅತ್ಯಾಚಾರ ಪ್ರಕರಣ ಇದಾಗಿದೆ. ಸಂತ್ರಸ್ತೆಗೆ ಗನ್ ತೋರಿಸಿ ಅತ್ಯಾಚಾರ ಮಾಡಿದ್ದ ಆರೋಪ ಪ್ರಜ್ವಲ್ ರೇವಣ್ಣ ಮೇಲಿದೆ. ಅತ್ಯಾಚಾರದ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದರು. ಆನಂತರ ಹಲವು ಬಾರಿ ವಿಡಿಯೋ ಕರೆ ಮಾಡಿ ನಗ್ನವಾಗುವಂತೆ ಸೂಚಿಸಿ, ವಿಡಿಯೋ ರೆಕಾರ್ಡ್ ಮಾಡಿಕೊಂಡಿದ್ದರು. ಈ ವಿಚಾರವನ್ನು ಬಹಿರಂಗಪಡಿಸದಂತೆ ಬೆದರಿಕೆ ಹಾಕಿದ್ದರು ಎಂದು ಸಂತ್ರಸ್ತೆ ದೂರಿನಲ್ಲಿ ಆರೋಪಿಸಿದ್ದರು. ● 6 ನೇ ಪುಟಕ್ಕೆ

ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ಸಹಾಯಧನ ಮುಂದಿನ ವರ್ಷದಿಂದ 2000ಕ್ಕೆ ಹೆಚ್ಚಳ

● ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ● ಕನಕದಾಸ ಜಯಂತ್ಯೋತ್ಸವದಲ್ಲಿ ಪ್ರತಿಭಾ ಪುರಸ್ಕಾರ ● ತಮ್ಮ ಸರ್ಕಾರದ ಯೋಜನೆಗಳಿಗೆ ಪ್ರೇರಣೆಯಾದ ಸನ್ನಿವೇಶಗಳ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟ ಸಿಎಂ ● ಪ್ರತಿಭೆ ಯಾರ ಸ್ವತ್ತಲ್ಲ; ಜಾತಿಗೆ ಜೋತು ಬೀಳಬೇಡಿ...!


ಮೈಸೂರಿನ ಸಂತ ಶ್ರೀ ಕನಕದಾಸರ ಜಯಂತ್ಯೋತ್ಸವ ಸಮಿತಿ ವತಿಯಿಂದ ಶ್ರೀ ಭಕ್ತ ಕನಕದಾಸರ ಜಯಂತ್ಯೋತ್ಸವದ ಅಂಗವಾಗಿ ಶುಕ್ರವಾರ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಹಾಗೂ ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಾಂಕೇತಿಕವಾಗಿ ಕೆಲ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

ಮೈಸೂರು, ನ.22(ಎಸ್‌ಬಿಡಿ)– ವಿದ್ಯಾಸಿರಿ ಯೋಜನೆಯಡಿ ವಿದ್ಯಾರ್ಥಿಗಳಿಗೆ ನೀಡುವ ಮಾಸಿಕ ಸಹಾಯಧನವನ್ನು ಮುಂದಿನ ವರ್ಷದಿಂದ 2 ಸಾವಿರ ರೂ.ಗೆ ಹೆಚ್ಚಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ಮೈಸೂರಿನ ಸಂತ ಶ್ರೀ ಕನಕದಾಸರ ಜಯಂತ್ಯೋತ್ಸವ ಸಮಿತಿ ವತಿಯಿಂದ ಶ್ರೀ ಭಕ್ತ ಕನಕದಾಸರ ಜಯಂತ್ಯುತ್ಸವದ ಅಂಗವಾಗಿ ಸಿದ್ಧಾರ್ಥನಗರದ ಕನಕ ಭವನ ಆವರಣದಲ್ಲಿ ಶುಕ್ರವಾರ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಹಾಗೂ ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ ಸಮಾರಂಭದಲ್ಲಿ ಸಾಂಕೇತಿಕವಾಗಿ ಕೆಲ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪುರಸ್ಕರಿಸಿ, ಅವರು ಮಾತನಾಡಿದರು. ಸರ್ಕಾರಿ ಹಾಗೂ ಅನುದಾನಿತ ವಿದ್ಯಾರ್ಥಿ ನಿಲಯ ಅಥವಾ ವಸತಿ ಕಾಲೇಜುಗಳಲ್ಲಿ ಪ್ರವೇಶ ದೊರೆಯದ ಮೆಟ್ರಿಕ್ ನಂತರದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯಕ್ಕೆ ಸಹಾಯವಾಗಲೆಂದು 'ವಿದ್ಯಾಸಿರಿ' ಯೋಜನೆಯಡಿ ಮಾಸಿಕ 1,500 ರೂ. ನೀಡಲಾಗುತ್ತಿದೆ. ಈ ಸಹಾಯಧನವನ್ನು ಮುಂದಿನ ವರ್ಷದಿಂದ 2 ಸಾವಿರಕ್ಕೆ ಹೆಚ್ಚಿಸಲಾಗುವುದು ಎಂದರು.

ಜೀವಾನಾನುಭವ ಪ್ರೇರಣೆ: ಎಲ್ಲಾ ಜನಪರ ಕಾರ್ಯಕ್ರಮಗಳಿಗೂ ನನ್ನ ಜೀವನಾನುಭವವೇ ಪ್ರೇರಣೆ. ಹಬ್ಬ, ನೆಂಟರಿಷ್ಟರು ಬಂದಾಗಲಷ್ಟೇ ಅನ್ನ ಮಾಡುವ ಪರಿಸ್ಥಿತಿ ಇತ್ತು. ಪಕ್ಕದ ಮನೆಯವರು ಮಕ್ಕಳಿಗೆ ಹುಷಾರಿಲ್ಲದಿದ್ದಾಗ ನಮ್ಮ ಮನೆಗೆ ಅನ್ನ ಕೇಳಲು ಬರುತ್ತಿದ್ದರು. ● 6ನೇ ಪುಟಕ್ಕೆ

ಮೈಸೂರಲ್ಲಿ ಕನಕ ಪ್ರತಿಮೆ

ಸಂತ ಶ್ರೀ ಕನಕದಾಸರ ಜಯಂತ್ಯುತ್ಸವ ಸಮಿತಿ ಬೇಡಿಕೆಯಂತೆ ಮೈಸೂರಿನಲ್ಲಿ ಕನಕದಾಸರ ಪ್ರತಿಮೆ ನಿರ್ಮಾಣ ಸಂಬಂಧ ಸಚಿವ ಮಹದೇವಪ್ಪ ಅವರಿಗೆ ಸೂಚನೆ ನೀಡಿದ್ದೇನೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು. ಇದೇ ವೇಳೆ ಸಮಿತಿ ಸಂಚಾಲಕ ಎಂ.ಶಿವಣ್ಣ ಸಿಎಂ ಬಳಿ ಬಂದು, ಗ್ರಾಮಾಂತರ ಬಸ್ ನಿಲ್ದಾಣಕ್ಕೆ ಸಂಗೊಳ್ಳಿ ರಾಯಣ್ಣ ಹೆಸರಿಡಬೇಕು ಎಂದಾಗ ಸಿಟ್ಟಿಗೆದ್ದ ಸಿಎಂ, ಕೂತ್ಕೋಳಯ್ಯಾ ನೀನು, ಬೆಂಗಳೂರು ರೈಲ್ವೆ ನಿಲ್ದಾಣಕ್ಕೇ ನಾಮಕರಣ ಮಾಡಿದ್ದೀವಿ, ಬಸ್ ನಿಲ್ದಾಣಕ್ಕೆ ಮಾಡಿ ಅಂತಾ ಬಂದಿದ್ದೀಯಾ. ಅಲ್ಲಿ ಕನಕ ಹಾಗೂ ಸಂಗೊಳ್ಳಿ ರಾಯಣ್ಣನ ಪ್ರತಿಮೆ ಮಾಡಿದ್ದು ಯಾರು, ನಾವೇ ಅಲ್ವಾ ಎಂದು ಪ್ರಶ್ನಿಸಿದರು.

ಮೈಸೂರಲ್ಲಿ ಬಾಳೆ ಮೇಳ

ಮೂರು ದಿನಗಳ ಮೇಳದಲ್ಲಿ 130ಕ್ಕೂ ಹೆಚ್ಚು ತಳಿಗಳ ಪ್ರದರ್ಶನ; ಮಾರಾಟ

ಮೈಸೂರು, ನ.22(ಜಿಎ)–ಇಂದಿನಿಂದ ಮೈಸೂರಲ್ಲಿ ಆರಂಭಗೊಂಡಿರುವ ಬಾಳೆ ಮೇಳದಲ್ಲಿ 16 ಅಡಿ ಉದ್ದದ ಜೊತೆಗೆ 1,000 ಬಾಳೆ ಹಣ್ಣುಳ್ಳ ಬೃಹತ್ ಗಾತ್ರದ ಬಾಳೆ ಗೊನೆಯೂ ಎಲ್ಲರ ಗಮನ ಸೆಳೆಯುತ್ತಿದೆ.

ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಸಹಜ ಸಮೃದ್ಧಿ ಮತ್ತು ಅಕ್ಷಯ ಕಲ್ಪ ಆರ್ಗಾನಿಕ್ಸ್ ವತಿಯಿಂದ ಆಯೋಜಿಸಿರುವ 3 ದಿನಗಳ ಬಾಳೆ ಮೇಳದಲ್ಲಿ 130ಕ್ಕೂ ಹೆಚ್ಚು ತಳಿಗಳಿದ್ದು, ಅವುಗಳಲ್ಲಿ ಪ್ರಮುಖವಾಗಿ ಕೇರಳಾದ ತಿರುವನಂತಪುರಂನ ವಿನೋದ್ ನಾಯರ್ ಪ್ರದರ್ಶನಕ್ಕೆ ತಂದಿರುವ ಸಹಸ್ರ ಬಾಳೆಯ (ಪಿಸಾಂಗ್ ಸೆರಿಬು ಅಥವಾ ಆಯಿರಂ ಪೂವಂ) ತಳಿಯ ಗೊನೆಯೂ ಪ್ರಮುಖ ಆಕರ್ಷಣೆಯಾಗಿದೆ. ಮೇಳದಲ್ಲಿ ಕೇವಲ ಬಾಳೆ ಹಣ್ಣು, ಸಸಿಗಳು ಮಾತ್ರವಲ್ಲದೇ ಬಾಳೆ ನಾರಿನಿಂದ ತಯಾರಿಸಿರುವ ಬ್ಯಾಗುಗಳು, ಮಹಿಳೆಯರ ಪರ್ಸ್, ಚೌಕಬಾರ ಆಟದ ಆಟಿಕೆ, ಮ್ಯಾಟ್‌ಗಳು, ಚಾಪೆ, ಗೃಹ ಅಲಂಕಾರಿಕ ವಸ್ತುಗಳು ಸೇರಿದಂತೆ ಸಾಕಷ್ಟು ಉತ್ಪನಗಳು ಪ್ರದರ್ಶನ ಮತ್ತು ಮಾರಾಟದಲ್ಲಿದೆ.

ಬಾಳೆ ಮೇಳಕ್ಕೆ ಚಾಲನೆ ನೀಡಿದ ಚಲನಚಿತ್ರ ನಿರ್ದೇಶಕಿ ಸುಮನ ಕಿತ್ತೂರ್ ಮಾತನಾಡಿ, ನಾವು ಮೂಲತಃ ಪಿರಿಯಾಪಟ್ಟಣದ ಕಿತ್ತೂರಿನವರಾಗಿದ್ದು, ಅಲ್ಲಿ ಮೊದಲು ಬಾಳೆ, ಮೆಣಸು ಬೆಳೆಯುತ್ತಿದ್ದೆವು. ಆದರೆ, ಈಗ ಅಲ್ಲಿ ಬರೀ ಹೊಗೆ ಸೊಪ್ಪು ಬೆಳೆಯುತ್ತಿದ್ದಾರೆ. ಇದು ಬದಲಾಗ ಬೇಕಿದೆ ಎಂದರು. ಹಿಂದಿನ ಕಾಲದಲ್ಲಿ ಹರಳು ಎಣ್ಣೆಯನ್ನು ಮನೆಯಲ್ಲಿ ತಯಾರು ಮಾಡುತ್ತಿದ್ದರು. ಆದರೆ, ಇಂದು ಇದನ್ನು ಕೊಂಡುಕೊಳ್ಳುವ ಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ನಾವು ಒಂದು ತಂಡ ಮಾಡಿಕೊಂಡು ದೇಸಿ ತಳಿಗಳ ಬಗ್ಗೆ ಅರಿವು ಮೂಡಿಸುತ್ತಿದ್ದೇವೆ. ಈ ರೀತಿಯ ಮೇಳಗಳಿಂದ ರೈತರು ಮತ್ತು ಜನರಿಗೂ ಸಾಕಷ್ಟು ಅನುಕೂಲವಾಗಲಿದೆ ಎಂದು ತಿಳಿಸಿದರು.

ಬಗೆ ಬಗೆಯ ತಳಿ: ಮೂರು ದಿನಗಳ ಬಾಳೆ ಮೇಳದಲ್ಲಿ 130 ಕ್ಕೂ ಹೆಚ್ಚಿನ ಬಾಳೆ ತಳಿಗಳು ● 6ನೇ ಪುಟಕ್ಕೆ

❝ ಅಲಂಕಾರಕ್ಕೆ ಚಂದ ಸಹಸ್ರ ಬಾಳೆ

ಕೇರಳದ ವಿನೋದ್ ನಾಯರ್ ಮತ್ತು ಶಿರಸಿಯ ಪ್ರಸಾದ್ ರಾಮ ಹೆಗಡೆ ಬೆಳೆದಿರುವ 16 ಅಡಿ ಉದ್ದದ 1,000 ಬಾಳೆ ಹಣ್ಣನ್ನು ಎಲ್ಲಾ ತಳಿಯ ಬಾಳೆ ಬೆಳೆಯುವಂತೆಯೇ ಬೆಳೆಯುತ್ತಾರೆ. ಇದರಲ್ಲಿ ಹಣ್ಣುಗಳು 1.5, 2 ಇಂಚುಗಳು ಇರುತ್ತವೆ. ಇವುಗಳಲ್ಲಿ ಸುಮಾರು 100 ಹಣ್ಣುಗಳನ್ನು ಮಾತ್ರ ತಿನ್ನಲು ಸಾಧ್ಯ. ಸಹಸ್ರ ಬಾಳೆ ಗೊನೆಯನ್ನು ತಿನ್ನುವ ಬದಲು ಶ್ರೀಮಂತರ ಮನೆಗಳಲ್ಲಿ ನಡೆಯುವ ಶುಭ ಸಮಾರಂಭಗಳಿಗೆ ಸ್ವಾಗತ ಕಮಾನುಗಳಾಗಿ, ಚಪ್ಪರದ ಅಲಂಕಾರಕ್ಕೆ ಬಳಸುತ್ತಾರೆ. ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಸಾಗಿಸುವಾಗ ಸಾಕಷ್ಟು ಹುಷಾರಾಗಿ ಗೊನೆಯನ್ನು ಒಂದು ಸುತ್ತು ಸುತ್ತಿಕೊಂಡು ಸಾಗಿಸುತ್ತಾರೆ.

ಕಡೇ ಕಾರ್ತಿಕ ಸೋಮವಾರದ ಕಾರ್ಯಕ್ರಮ

ಮೈಸೂರು, ನ.22– ಮೈಸೂರಿನ ಹೆಬ್ಬಾಳು ಬಡಾವಣೆ 2ನೇ ಹಂತದಲ್ಲಿರುವ ಆಶಾಮಂದಿರ ನಿವೇಶನ ಮತ್ತು ವಸತಿದಾರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಶ್ರೀ ವಿನಾಯಕ ಸ್ವಾಮಿ, ಶ್ರೀ ಉಮಾಮಹೇಶ್ವರಿ, ಶ್ರೀ ಆಂಜನೇಯಸ್ವಾಮಿ, ನವಗ್ರಹ ದೇವಸ್ಥಾನ ಹಾಗೂ ಪಂಚಗೋಪುರದಲ್ಲಿ ಕಡೇ ಕಾರ್ತಿಕ ಸೋಮವಾರದ ಅಂಗವಾಗಿ ನ.25ರಂದು ಬೆಳಗ್ಗೆ 8ರಿಂದ ಅಭಿಷೇಕ, ಪೂಜಾ ಕಾರ್ಯಕ್ರಮ, ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಅನ್ನಸಂತರ್ಪಣೆ ಮತ್ತು ಸಂಜೆ 6.30ಕ್ಕೆ ದೀಪೋತ್ಸವ ಕಾರ್ಯಕ್ರಮ ಏರ್ಪಡಿಸಲಾಗಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಕೆ.ಹರೀಶ್‌ಗೌಡ ವಹಿಸುವರು. ಮುಖ್ಯ ಅತಿಥಿಗಳಾಗಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಜಿ.ಟಿ.ದೇವೇಗೌಡ, ಮಾಜಿ ಸಂಸದ ಪ್ರತಾಪ್ ಸಿಂಹ, ಶಾಸಕರಾದ ಡಿ.ಹರೀಶ್‌ಗೌಡ, ಕೆ. ವಿವೇಕಾನಂದ, ಮಾಜಿ ಶಾಸಕ ಎಲ್.ನಾಗೇಂದ್ರ ಮತ್ತು ಬಿಜೆಪಿ ಮುಖಂಡ ಕವೀಶ್ ಗೌಡ ಭಾಗವಹಿಸುವರು. ವಿಶೇಷ ಅತಿಥಿಗಳಾಗಿ ನಗರ ಪಾಲಿಕೆ ಮಾಜಿ ಸದಸ್ಯರಾದ ಶ್ರೀಮತಿ ಪ್ರೇಮಾ ಶಂಕರೇಗೌಡ, ಚೆಲುವೇಗೌಡ, ಶಿವಣ್ಣ, ಕೆ.ವಿ.ಶ್ರೀಧರ್, ಪೈಲ್ವಾನ್ ಶ್ರೀನಿವಾಸ್, ನಂದೀಶ್ ಪ್ರೀತಮ್, ಎಸ್.ಬಿ.ಎಂ.ಮಂಜುನಾಥ್ ಭಾಗವಹಿಸಲಿದ್ದಾರೆ.

ನಾಳೆ ರಾಮಾನುಜ ವಿಶ್ವ ವಿಜಯೋತ್ಸವ; ಮೈಸೂರಿನ 2000 ಬ್ರಾಹ್ಮಣರು ಭಾಗಿ

ನಮ್ಮ ನಡೆ ರಾಮಾನುಜರ ಕಡೆಗೆ



ಮೈಸೂರು, ನ. 22– ಬೆಂಗಳೂರಿನ ಅರಮನೆ ಮೈದಾನದ ತ್ರಿಪುರ ವಾಸಿನಿ ಆವರಣದಲ್ಲಿ ನವೆಂಬರ್ 24ರಂದು ರಾಮಾನುಜ ವಿಶ್ವವಿಜಯೋತ್ಸವ ನಮ್ಮ ನಡೆ ರಾಮಾನುಜರ ಕಡೆಗೆ 108 ಶಂಖನಾದ ಮೊಳಗಿಸುವ ಮೂಲಕ ಧಾರ್ಮಿಕ ವೇದಘೋಷ ನಡೆಯಲಿದೆ ಎಂದು ಸಮಿತಿಯ ಸಂಚಾಲಕ ಯೋಗ ನರಸಿಂಹ (ಮುರುಳಿ) ತಿಳಿಸಿದ್ದಾರೆ.

ಮೈಸೂರು ನಗರದ ಕಾಳಿದಾಸ ರಸ್ತೆಯಲ್ಲಿರುವ ಶ್ರೀ ಲಕ್ಷ್ಮಿ ನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಸಮಾವೇಶ ಯಶಸ್ವಿಗೊಳ್ಳಲಿ ಎಂದು ಪೂಜೆ ನೆರವೇರಿಸಿ, ಅನಂತರ ರಾಮಾನುಜರ ಧ್ವಜ ಹಿಡಿದು ಬ್ರಾಹ್ಮಣ ಸಮುದಾಯದ ಮುಖಂಡರನ್ನು ಆಹ್ವಾನಿಸಿ ಮಾತನಾಡಿದ ಅವರು, ಅಖಿಲ ಕರ್ನಾಟಕ ಶ್ರೀ ವೈಷ್ಣವ ಮಹಾ ಸಭಾದಿಂದ ಶ್ರೀ ಯದುಗಿರಿ ಯತಿರಾಜ ರಾಮಾನುಜಾ ಜಿಯರ್ ಶ್ರೀಗಳ ನೇತೃತ್ವದಲ್ಲಿ ಈ ಕಾರ್ಯಕ್ರಮ ನಡೆಯುತ್ತಿದ್ದು ಶ್ರೀವೈಷ್ಣವ ಸಮಾಜದ ಯಾವುದೇ ಒಳಪಂಗಡಗಳು ಇದ್ದರೂ ಅವೆಲ್ಲವನ್ನು ಒಂದೇ ವೇದಿಕೆಯಡಿಯಲ್ಲಿ ತಂದು ಅವರ ಶೈಕ್ಷಣಿಕ ಪ್ರಗತಿಗೆ ಈ ಮಹಾಸಭಾ ಮುಂದಾಗಿದೆ. ಶ್ರೀವೈಷ್ಣವ ಜನಾಂಗದ ಯಾವುದೇ ಸಮಸ್ಯೆಗಳಿದ್ದರೂ ಸರ್ಕಾರದ ಗಮನಕ್ಕೆ ತಂದು, ಸೂಕ್ತವಾದ ಪರಿಹಾರ ಕಂಡುಕೊಳ್ಳುವುದು ಇದರ ಉದ್ದೇಶವಾಗಿದೆ ಎಂದರು. ಇದಕ್ಕೂ ಮೊದಲು ಶುಕ್ರವಾರ ಹಾಗೂ ಶನಿವಾರ ಶ್ರೀ ವೈಷ್ಣವ ಸಂಪ್ರದಾಯದಂತೆ ಧಾರ್ಮಿಕ ಕೈಂಕರ್ಯಗಳು ನಡೆಯಲಿದ್ದು ಭಾನುವಾರ ಬೆಳಗ್ಗೆ ನಡೆಯುವ ಬೃಹತ್ ಧಾರ್ಮಿಕ ಸಮಾರಂಭದಲ್ಲಿ 108 ಶಂಖಗಳಿಂದ ಏಕಕಾಲದಲ್ಲಿ ಶಂಖನಾದದ ಮೂಲಕ ಕಾರ್ಯಕ್ರಮ ಉದ್ಘಾಟನೆಯಾಗಲಿದೆ ಎಂದರು. ಈ ಕಾರ್ಯಕ್ರಮಕ್ಕೆ ಮೈಸೂರಿನಿಂದ 2000ಕ್ಕೂ ಹೆಚ್ಚು ಜನ ಹಾಗೂ ರಾಜ್ಯದ ನಾನಾ ಮೂಲೆಗಳಿಂದ ಸುಮಾರು 80,000ಕ್ಕೂ ಅಧಿಕ ಭಕ್ತರು ಆಗಮಿಸಲಿದ್ದು ಅವರಿಗೆ ಸಂಘ ಸಂಸ್ಥೆಗಳ ಮೂಲಕ ಬಸ್ಸುಗಳು, ತಿಂಡಿ, ಊಟದ ವ್ಯವಸ್ಥೆ ಮಾಡಲಾಗಿದೆ ಎಂದರು. ಅರ್ಚಕ ಸಂಘದ ಅಧ್ಯಕ್ಷ ವಿದ್ವಾನ್ ಕೃಷ್ಣಮೂರ್ತಿ, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್, ಚಕ್ರಪಾಣಿ, ಬಾಲಾಜಿ, ಆನಂದ್, ಶಂತಾರಾಮ್, ಪಾರ್ಥ ಸಾರಥಿ, ಮುರಳಿ ಇನ್ನಿತರರು ಹಾಜರಿದ್ದರು.

ಪಿಎಚ್.ಡಿ ಪದವಿ



ಮೈಸೂರು, ನ. 22– ಡಾ. ಶ್ರೀಕಂಠ ಅವರ ಮಾರ್ಗದರ್ಶನದಲ್ಲಿ ವಿನುತಾ ವೈ.ಎಂ. ಅವರು ಇತಿಹಾಸ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರ ಪಡಿಸಿದ ಮಹಾ ಪ್ರಬಂಧ'ವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ರಾಜಯೋಗಿನಿ ಬ್ರಹ್ಮಾಕುಮಾರಿ ಸೀತಾಲಕ್ಷ್ಮಿ ಬೆಹೆಂಜೀ ನಿಧನ



ಮೈಸೂರು, ನ. 22– ಮೈಸೂರು ಅಂತಾರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ ಗಾಂಧಿನಗರ ಸೇವಾಕೇಂದ್ರದ ಮುಖ್ಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಸೀತಾಲಕ್ಷ್ಮಿ ಬೆಹೆಂಜೀ (75) ನಿನ್ನೆ ರಾತ್ರಿ ನಿಧನ ಹೊಂದಿದರು. ಇವರು ಈಶ್ವರೀಯ ವಿಶ್ವವಿದ್ಯಾಲಯದಲ್ಲಿ 50 ವರ್ಷಗಳಿಂದ ಸಮರ್ಪಿತರಾಗಿ ರಾಜಯೋಗ ಶಿಕ್ಷಕಿಯಾಗಿ, ಸಂಚಾಲಕರಾಗಿ ಮೈಸೂರು, ಮಂಡ್ಯ, ಹಾಸನ, ಮಡಿಕೇರಿ, ಚಾಮರಾಜನಗರ ಜಿಲ್ಲೆಗಳ ಸೇವಾ ಕೇಂದ್ರಗಳಲ್ಲಿ ಸೇವೆ ಸಲ್ಲಿಸಿ ಅಪಾರ ರಾಜಯೋಗ ವಿದ್ಯಾರ್ಥಿಗಳನ್ನು ಹೊಂದಿದ್ದರು. ಇವರ ಪಾರ್ಥಿವ ಶರೀರವನ್ನು ಹುಣಸೂರು ರಸ್ತೆಯಲ್ಲಿರುವ ಓಂಶಾಂತಿ ರಿಟ್ರೀಟ್ ಸೆಂಟರ್‌ನಲ್ಲಿ ದರ್ಶನಕ್ಕಾಗಿ ಇಡಲಾಗಿದೆ. ಮೃತರ ಅಂತ್ಯಕ್ರಿಯೆಯನ್ನು ಹೂಟಗಳ್ಳಿಯಲ್ಲಿರುವ ವಿದ್ಯುತ್ ಚಿತಾಗಾರದಲ್ಲಿ ನೆರವೇರಿಸಲಾಗುವುದು ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ. ಉಪವಲಯದ ಮುಖ್ಯಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜೀ, ಪ್ರಭಾಮಣೀಜೀ, ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜೀ, ಪ್ರಾಂಶುಪಾಲರಾದ ಬಿಕೆ ರಂಗನಾಥ ಶಾಸ್ತ್ರೀಜೀ, ಗಾಯತ್ರೀಜೀ, ಶಾರದಾಜೀ, ರತ್ನಾಜೀ ಸೇರಿದಂತೆ ಸಮಸ್ತ ರಾಜಯೋಗ ಶಿಕ್ಷಕಿಯರು, ರಾಜಯೋಗ ವಿದ್ಯಾರ್ಥಿಗಳು ಸಂತಾಪ ಸೂಚಿಸಿದ್ದಾರೆ.

ಸಿ.ಎನ್.ಗುರುಸ್ವಾಮಿ



ಮೈಸೂರು, ನ.22–ಮೈಸೂರು ವಿಜಯನಗರ ನಾಲ್ಕನೇ ಹಂತದ ನಿವಾಸಿ, ಮೂಲತಃ ಗುಂಡ್ಲುಪೇಟೆ ತಾಲೂಕು ಚಿಕ್ಕಾಟಿ ಯವರಾದ ಸಿ.ಎನ್.ಗುರುಸ್ವಾಮಿ(44) ಅವರು ಇಂದು ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದರು. ಮೃತರು ತಾಯಿ, ಪತ್ನಿ, ಇಬ್ಬರು ಪುತ್ರಿಯರು, ಸಹೋದರ, ಸಹೋದರಿ, ಅಪಾರ ಬಂಧು–ಮಿತ್ರರ ಅಗಲಿದ್ದಾರೆ. ಇವರು ಜೆಡಿಎಸ್ ಮುಖಂಡ ಟಿ.ಸೋಮು ಅವರ ಆಪ್ತ ಸಹಾಯಕರು ಆಗಿದ್ದರು. ಇವರ ಅಂತ್ಯಕ್ರಿಯೆ ನಾಳೆ (ಶನಿವಾರ) ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮ ಚಿಕ್ಕಾಟಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿ.ಲಕ್ಷ್ಮಣ್ ಲುತ್‌ರಿಯಾ



ಮೈಸೂರು, ನ.22–ಮೈಸೂರು ಸಿದ್ಧಾರ್ಥನಗರ ನೀತಿ ಮಾರ್ಗದ ನಿವಾಸಿ ಹಾಗೂ ದಿವಂಗತ ಕೆ.ಬಿಜನ್‌ದಾಸ್ ಲುತ್‌ರಿಯಾ ಅವರ ಪುತ್ರ ಬಿ.ಲಕ್ಷ್ಮಣ್ ಲುತ್‌ರಿಯಾ(72) ಅವರು ಇಂದು ಬೆಳಿಗ್ಗೆ ನಿಧನರಾದರು. ಮೃತರು ಅವಿವಾಹಿತರಾಗಿದ್ದು, ಸಹೋದರರು, ಸಹೋದರಿ, ಅಪಾರ ಬಂಧು–ಮಿತ್ರರ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಮಧ್ಯಾಹ್ನ ಚಾಮುಂಡಿಬೆಟ್ಟ ತಪ್ಪಲಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೃಷ್ಣಮೂರ್ತಿ



ಮೈಸೂರು, ನ.22–ಐಡಿಯಲ್ ಜಾವ ಮಾಜಿ ನೌಕರ ಹಾಗೂ ವಿವಿ ಮೊಹಲ್ಲಾ ನಿವಾಸಿ ಕೃಷ್ಣಮೂರ್ತಿ(75) ಅವರು ನಿನ್ನೆ ನಿಧನರಾದರು. ಮೃತರು ಪತ್ನಿ ಶಾಂತ ಕೃಷ್ಣಮೂರ್ತಿ, ಪುತ್ರರಾದ ಸುಧೀರ್ ಕೃಷ್ಣಮೂರ್ತಿ, ಸುನಿಲ್ ಕೃಷ್ಣಮೂರ್ತಿ, ಅಪಾರ ಬಂಧು–ಮಿತ್ರರ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಮಧ್ಯಾಹ್ನ ಗೋಕುಲಂ ಚಿರಶಾಂತಿ ಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ನ.26ರಿಂದ 30ರವರೆಗೆ ಲಕ್ಷ ದೀಪೋತ್ಸವ

ನ.29ರಂದು ಸರ್ವಧರ್ಮ ಸಮ್ಮೇಳನ, ನ.30ರಂದು ಸಾಹಿತ್ಯ ಸಮ್ಮೇಳನ



(ಸಂಗ್ರಹ ಚಿತ್ರ)





ಧರ್ಮಸ್ಥಳ, ನ. 22–ದಕ್ಷಿಣ ಕನ್ನಡ ಜಿಲ್ಲೆಯ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ನ. 26 ರಿಂದ 30ರವರೆಗೆ ಭಗವಾನ್ ಶ್ರೀ ಮಂಜುನಾಥಸ್ವಾಮಿಯ ಲಕ್ಷ ದೀಪೋತ್ಸವ ಜರುಗಲಿದೆ. ನ.29ರಂದು ಸರ್ವಧರ್ಮ ಸಮ್ಮೇಳನ, ನ.30ರಂದು ಸಾಹಿತ್ಯ ಸಮ್ಮೇಳನ ಏರ್ಪಡಿಸಲಾಗಿದೆ.

ನ. 26ರಂದು ಬೆಳಗ್ಗೆ 10.30ಕ್ಕೆ ವಸ್ತುಪ್ರದರ್ಶನ ಮಂಟಪದಲ್ಲಿ ಲಕ್ಷ ದೀಪೋತ್ಸವದ ಅಂಗವಾಗಿ ರಾಜ್ಯ ಮಟ್ಟದ ವಸ್ತು ಪ್ರದರ್ಶನ ಆಯೋಜಿಸಲಾಗಿದ್ದು, ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಉದ್ಘಾಟಿಸಲಿದ್ದಾರೆ.

ಲಕ್ಷ ದೀಪೋತ್ಸವ ಕಾರ್ಯಕ್ರಮಗಳು

ನ.26: ಹೊಸ ಕಟ್ಟೆ ಉತ್ಸವ, ರಾಜ್ಯ ಮಟ್ಟ ವಸ್ತುಪ್ರದರ್ಶನ ಉದ್ಘಾಟನೆ ಮತ್ತು ವಸ್ತು ಪ್ರದರ್ಶನ ವೇದಿಕೆಯಲ್ಲಿ ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ.

ನ. 27ರಂದು ಕೆರೆ ಕಟ್ಟೆ ಉತ್ಸವ, ನ.28ರಂದು ಲಲಿತೋದ್ಯಾನ ಉತ್ಸವ, ಅಮೃತವರ್ಷಿಣೀ ವೇದಿಕೆಯಲ್ಲಿ ಲಲಿತಕಲಾ ಗೋಷ್ಠಿ, ಸಾಂಸ್ಕೃತಿಕ ಕಾರ್ಯಕ್ರಮ, ನ.29ರಂದು ಕಂಚಿಮಾರು ಕಟ್ಟೆ ಉತ್ಸವ, ಅಮೃತ ವರ್ಷಿಣಿ ವೇದಿಕೆಯಲ್ಲಿ ಸರ್ವಧರ್ಮ ಸಮ್ಮೇಳನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ, ನ.30ರಂದು ಗೌರಿಮಾರು ಕಟ್ಟೆ ಉತ್ಸವ, ಅಮೃತವರ್ಷಿಣಿ ವೇದಿಕೆಯಲ್ಲಿ ಸಾಹಿತ್ಯ ಸಮ್ಮೇಳನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಡಿ.1ರಂದು ಶ್ರೀ ಚಂದ್ರನಾಥ ಸ್ವಾಮಿಯ ಸಮವಸರಣ ಪೂಜೆ ನಡೆಯಲಿವೆ.

ವಸ್ತುಪ್ರದರ್ಶನ ಮಂಟಪ

ನ.26: ಸಂಜೆ 6.30ರಿಂದ ಮುಂಡ್ರುಪ್ಪಾಡಿ ಶ್ರೀಮತಿ ಶ್ರೀದೇವಿ ಸಚಿನ್ ಅವರಿಂದ ಸುಗಮ ಸಂಗೀತ; ರಾತ್ರಿ 7.30ರಿಂದ ವಿದುಷಿ ಶ್ರೀಮತಿ ಚೈತ್ರಾ ಸತ್ಯಕುಮಾರ್ ಮತ್ತು ತಂಡ, ಗೀತಾ ನೃತ್ಯಾಲಯ, ಧರ್ಮಸ್ಥಳ ಅವರಿಂದ ಸಮೂಹ ನೃತ್ಯ; ರಾತ್ರಿ 8.30ರಿಂದ ಬೆಂಗಳೂರಿನ ಸೃಷ್ಟಿ ಅಭಿನಯ ಕಲಾವಿದರ ಕೇಂದ್ರದಿಂದ ಮಹಾನ್ ಬುದ್ಧ ಡ್ಯಾನ್ಸ್ ಡ್ರಾಮಾ; ರಾತ್ರಿ 9.30ರಿಂದ ಕೆರೆಮೂಲೆ ಶ್ರೀ ಪದ್ಮನಾಭ ಜೈನ್, ಪದ್ಮಾಂಬನಿಲಯ ಅವರಿಂದ ಯಕ್ಷಗಾನ–ಜನ ಜಾಗೃತಿ ಧರ್ಮಸ್ಥಳ (ಮದ್ಯವರ್ಜನ).

ನ.27: ಸಂಜೆ 6.30ರಿಂದ ವಿದುಷಿ ಎಂ.ಎಸ್. ಕೀರ್ತನಾ ಮತ್ತು ಎಂ.ಎಸ್. ಪ್ರಾರ್ಥನಾ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ; ರಾತ್ರಿ 7.30 ರಿಂದ ವಿದ್ವಾನ್ ಹೆಚ್.ಎಲ್.ಶಿವ ಶಂಕರಸ್ವಾಮಿ ಮತ್ತು ತಂಡದಿಂದ ಲಹಲಹರಿ–ತಾಳವಾದ್ಯ ಸಂಗೀತ ಮೇಳ; ರಾತ್ರಿ 8.30ರಿಂದ ಶ್ರೀಮತಿ ಕೌಸಲ್ಯಾ ನಿವಾಸ್ ಎಂ.ಎಸ್.ನಾಟ್ಯ ಕ್ಷೇತ್ರ ಬೆಂಗಳೂರು ಅವರಿಂದ ರಾಮ ಪ್ರಿಯ ತುಲಸೀದಾಸ ನೃತ್ಯರೂಪಕ; ರಾತ್ರಿ 9.30ರಿಂದ ಎಸ್‌ಡಿಎಂ ಪ್ರೌಢ ಶಾಲಾ ವಿದ್ಯಾರ್ಥಿಗಳಿಂದ ಯಕ್ಷಗಾನ–ಹಿಡಿಂಬಾ ವಿವಾಹ–ಬಕಾಸುರ ವಧೆ.

ನ.28: ಕು.ಆತ್ಮಶ್ರೀ ಮತ್ತು ಕು.ಆದಿಶ್ರೀ ಸಹೋದರಿಯರು, ಮಂಗಳೂರು ಅವರಿಂದ ಗಾನಸಂಭ್ರಮ; ರಾತ್ರಿ 7.15ರಿಂದ ನೃತ್ಯ ವಿದುಷಿ ಮಂಗಳಾ ಶೇಖರ್, ಉಜ್ಜಿಲ ಅವರಿಂದ ಭರತನಾಟ್ಯ ಮತ್ತು ಕೂಚಿಪುಡಿ; ರಾತ್ರಿ 8.30ರಿಂದ ವಿದುಷಿ ಶ್ರೀಮತಿ ದೀಪಾ ಭಟ್, ಬೆಂಗಳೂರು ಅವರಿಂದ ನೃತ್ಯರೂಪಕ; ರಾತ್ರಿ 9.45ರಿಂದ ಶ್ರೀ ಆಂಜನೇಯ ಮಹಿಳಾ ಯಕ್ಷಗಾನ ಸಂಘ, ಪುತ್ತೂರು ಅವರಿಂದ ಯಕ್ಷಗಾನ ತಾಳಮದ್ದಳೆ.

ನ.29: ಅನ್ವಿತ್‌ಕುಮಾರ್ ಸಿ.ವಿ. ಮತ್ತು ಬಳಗ, ಗೋಣಿಕೊಪ್ಪಲು ಅವರಿಂದ ಸಂಗೀತ ರಸಸಂಜೆ; ಸಂಜೆ 6.30ರಿಂದ ಲೀಲಾ ನಾಟ್ಯಕಲಾ ವೃಂದ, ಬೆಂಗಳೂರು ಅವರಿಂದ ಭರತನಾಟ್ಯ; ರಾತ್ರಿ 7.30 ರಿಂದ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪಟ್ಟಾಭಿ ರಾಮ, ಸುಳ್ಯ ಅವರಿಂದ ನಗೆಹಬ್ಬ; ರಾತ್ರಿ 8.15ರಿಂದ ಕು.ಅನನ್ಯಾ ಎನ್.ಜಿ. ಮತ್ತು ತಂಡ, ಬೆಂಗಳೂರು ಅವರಿಂದ ಭರತನಾಟ್ಯ; ರಾತ್ರಿ 9.30 ರಿಂದ ಸತೀಶ್ ಹೆಮ್ಮಾಡಿ ನೇತೃತ್ವದ ಭ್ರಮಾಲೋಕ ಜಾದೂ ತಂಡದಿಂದ ಜಾದು ಜಾತ್ರೆ.

ನ.30: ಸಂಜೆ 5.30ರಿಂದ ಪಂಡಿತ್ ಬಾಲಚಂದ್ರ ನಾಕೋಡ್, ಹುಬ್ಬಳ್ಳಿ ಅವರಿಂದ ಹಿಂದೂಸ್ಥಾನಿ ಸಂಗೀತ; ಸಂಜೆ 6.30ರಿಂದ ವಿದುಷಿ ವಿದ್ಯಾಶ್ರೀ ರಾಧಾಕೃಷ್ಣ ಗಾನ ನೃತ್ಯ ಅಕಾಡೆಮಿ, ಮಂಗಳೂರು ಅವರಿಂದ ನೃತ್ಯ ಸಂಗಮ; ರಾತ್ರಿ 7.30ರಿಂದ ವಿದ್ವಾನ್ ಎ.ವಿ. ದತ್ತಾತ್ರೇಯ ಮತ್ತು ವೃಂದ, ಮೈಸೂರು ಅವರಿಂದ ವಾದ್ಯ ಸಂಗೀತ; ರಾತ್ರಿ 8.30ರಿಂದ ವಿದುಷಿ ಡಾ. ತೇಜಸ್ವಿನಿ ಎಲ್.ಎನ್., ಬೆಂಗಳೂರು ಅವರಿಂದ ಭರತನಾಟ್ಯ; ರಾತ್ರಿ 9.30ರಿಂದ ಜಿತೇಂದ್ರ ಮತ್ತು ತಂಡದ, ಗಾನನಿನಾದ, ಬೆಂಗಳೂರ ಸಂಗೀತ ರಸಧಾರೆ.

ಲಲಿತಾಕಲಾ ಗೋಷ್ಠಿ, ಅಮೃತವರ್ಷಿಣೀ ಸಭಾಭವನ

ನ.28: ಸಂಜೆ 5.30ರಿಂದ ನಾಗಸ್ವರ ವಾದನ; ರಾತ್ರಿ 7ರಿಂದ ಜೈ ಜೈ ಹನುಮಾನ್ ಖ್ಯಾತಿಯ ಶ್ರೀ ಶಂಕರ್ ಶಾನ್‌ಬಾಗ್ ಮತ್ತು ತಂಡ, ಬೆಂಗಳೂರು ಅವರಿಂದ ಸಾತ್ವಿಕ ಸಂಗೀತ; ರಾತ್ರಿ 8.30ರಿಂದ ವಿದುಷಿ ಶ್ರೀಮತಿ ಸುಮಂಗಳಾ ರತ್ನಾಕರರಾವ್ ನಾಟ್ಯಾರಾಧನಾ ಕಲಾ ಕೇಂದ್ರ, ಮಂಗಳೂರು ಅವರಿಂದ ನೃತ್ಯಾರ್ಚನೆ ಮತ್ತು ಮಾಯಾವಿಲಾಸ ನೃತ್ಯ ರೂಪಕ.

ಅಮೃತವರ್ಷಿಣಿ ಸಭಾ ಭವನ

ನ. 29:ಸಂಜೆ5ರಿಂದ ನಡೆಯುವ ಸರ್ವ ಧರ್ಮ ಸಮ್ಮೇಳನವನ್ನು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಉದ್ಘಾಟಿಸುವರು. ಬೆಂಗಳೂರು ಶ್ರೀ ಕೈಲಾಸ ಆಶ್ರಮ ಮಹಾಸಂಸ್ಥಾನದ ಶ್ರೀ ಜಯೇಂದ್ರ ಪುರಿ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಡಾ.ಜಿ.ಬಿ. ಹರೀಶ, ಡಾ.ಎನ್.ಎಂ.ಜೋಸೆಫ್ ಮತ್ತು ಬಿಜಾಪುರದ ರಾಷ್ಟ್ರೀಯ ಬಸವ ಭೂಷಣ ಪ್ರಶಸ್ತಿ ಪುರಸ್ಕೃತರಾದ ಮೆಹತಾಬ ಇಬ್ರಾಹಿಮ್ ಸಾಬ ಕಾಗವಾಡ ಉಪನ್ಯಾಸ ನೀಡುವರು. ರಾತ್ರಿ 8.30 ರಿಂದ ಶೀಜಿತ್ ಮತ್ತು ಪಾರ್ವತಿ ತಂಡ, ಚೆನ್ನೈ ಅವರಿಂದ ಭರತನಾಟ್ಯ ಕಾರ್ಯಕ್ರಮವಿದೆ.

ಸಾಹಿತ್ಯ ಸಮ್ಮೇಳನ

ನ. 30: ಸಂಜೆ 5ರಿಂದ ನಡೆಯುವ ಸಾಹಿತ್ಯ ಸಮ್ಮೇಳನದ ಉದ್ಘಾಟನೆಯನ್ನು ಬೆಂಗಳೂರಿನ ಬಹುಶ್ರುತ ವಿದ್ವಾಂಸ ಶತಾವಧಾನೀ ಡಾ.ರಾ. ಗಣೇಶ್ ಉದ್ಘಾಟಿಸುವರು. ಸಂಶೋಧಕ ಡಾ. ಪಾದೇಕಲ್ಲು ವಿಷ್ಣು ಭಟ್ಟ ಅಧ್ಯಕ್ಷತೆ ವಹಿಸಲಿದ್ದು, ಡಾ.ಪ್ರಮೀಳಾ ಮಾಧವ, ಡಾ.ಬಿ.ವಿ.ವಸಂತಕುಮಾರ್, ಪ್ರೊ. ಮೊರಬದ ಮಲ್ಲಿಕಾರ್ಜುನ ಉಪನ್ಯಾಸ ನೀಡುವರು. ಸಂಜೆ 8.30ರಿಂದ ರಾಜ್ಯಪ್ರಶಸ್ತಿ ಪುರಸ್ಕೃತ ಗಾನ ಗಾರುಡಿಗ ರಾಜೇಶ್ ಕೃಷ್ಣನ್ ಮತ್ತು ತಂಡದಿಂದ ಸಂಗೀತ ಸಂಜೆ ಏರ್ಪಡಿಸಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.11.2024 ಶನಿವಾರ, ಮಳೆ ನಕ್ಷತ್ರ: ಅನೂರಾಧ, 19.11.2024 ರಿಂದ 01.12.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ,
ತಿಥಿ: ಅಷ್ಟಮಿ, ನಕ್ಷತ್ರ: ಮಖ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಶ್ರವಣ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ಗಂಟೆಗೆ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಕಾನೂನು ಕಾಲೇಜು :** ಬೌದ್ಧಿಕ ಆಸ್ತಿ ಹಕ್ಕುಗಳು ಕುರಿತು ವಿಚಾರ ಸಂಕಿರಣ, ಮುಖ್ಯ ಅತಿಥಿಗಳು: ಹೈಕೋರ್ಟ್ ನ್ಯಾಯಮೂರ್ತಿ ವಿ.ಎಂ. ಶ್ಯಾಮ್‌ಕುಮಾರ್, ಚೀಫ್ ಎಕ್ಸಿಕ್ಯೂಟಿವ್ ಪ್ರೊ. ಕೆ.ಎಸ್. ಸುರೇಶ್, ಪ್ರಿನ್ಸಿಪಾಲ್ ಡಾ.ಎನ್. ವಾಣಿಶ್ರೀ, ಸ್ಥಳ: ಸಿಲ್ವರ್ ಜ್ಯೂಬಿಲಿ ಹಾಲ್, ಬೆಳಗ್ಗೆ 9.30ಕ್ಕೆ.

■ **ನವ ಕರ್ನಾಟಕ ಪಬ್ಲಿಕೇಷನ್ ಪ್ರೈವೇಟ್ ಲಿಮಿಟೆಡ್ :** ಕನ್ನಡ ರಾಜ್ಯೋತ್ಸವದ ಪ್ರಯುಕ್ತ ವಿಶೇಷ ರಿಯಾಯಿತಿ ಪುಸ್ತಕ ಮಾರಾಟ, ಸ್ಥಳ: ಚಾಮರಾಜ ಜೋಡಿ ರಸ್ತೆ ರಾಮಸ್ವಾಮಿ ಸರ್ಕಲ್ ಬೆಳಗ್ಗೆ 9.30 ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆಯ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ಗಂಟೆಯಿಂದ.

■ **ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ, ಮೈಸೂರು :** ವಸುಂಧರೋತ್ಸವ–2024, ನೃತ್ಯ ಕಾರ್ಯಕ್ರಮ, ಬೆಳಗ್ಗೆ 9.30ಕ್ಕೆ ವಿಚಾರ ಸಂಕಿರಣ, ಉದ್ಘಾಟನೆ : ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ಗೌರವ ಅತಿಥಿಗಳು : ಕಲಾ ಇತಿಹಾಸ ತಜ್ಞ ಆಶಿಷ್ ಮೋಹನ್ ಖೋಕರ್, ಡಾ. ವಸುಂಧರಾ ದೊರೆಸ್ವಾಮಿ ಅವರಿಂದ (ವಸುಂಧರ ಬಾನಿಯಲ್ಲಿ ಭರತನಾಟ್ಯ), ಸನ್ಮಾನ : ವೀಣಾ ವಿದ್ವಾನ್ ಪ್ರೊ. ಡಾ. ಆರ್. ವಿಶ್ವೇಶ್ವರನ್, ಬೆಳಗ್ಗೆ 11ಕ್ಕೆ ವಿಚಾರ ಗೋಷ್ಠಿ–1, ಅಧ್ಯಕ್ಷತೆ : ಕಲಾ ವಿಮರ್ಶಕ ಡಾ. ಎಂ. ಸೂರ್ಯಪ್ರಸಾದ್, ವಿಚಾರ ಮಂಡನೆ : ವಿಷಯ : ಮೈಸೂರು ನೆಲದಲ್ಲಿ ನೃತ್ಯಕಲೆಯನ್ನು ಅರಳಿಸಿದ ಪ್ರತಿಭೆಗಳು, ನಾಟ್ಯಾಚಾರ್ಯ ಪ್ರೊ. ಕೆ. ರಾಮಮೂರ್ತಿರಾವ್, ಬೆಳಗ್ಗೆ 11.45ಕ್ಕೆ ವಿಚಾರ ಗೋಷ್ಠಿ–2, ವಿಷಯ : ನೃತ್ಯ ಕ್ಷೇತ್ರಕ್ಕೆ ಡಾ. ವಸುಂಧರಾ ದೊರೆಸ್ವಾಮಿ ಅವರ ಕೊಡುಗೆ, ಉಪಸ್ಥಿತರು : ಡಾ. ಎಂ. ಸೂರ್ಯಪ್ರಸಾದ್ (ಕಲಾ ವಿಮರ್ಶಕ), ಡಾ. ನಾಗಮಣಿ ಶ್ರೀನಾಥ್ (ಕರ್ನಾಟಕ ಸಂಗೀತ ಕಲಾವಿದ), ಡಾ. ವೀಣಾಮೂರ್ತಿ ವಿಜಯ (ನಿರ್ದೇಶಕರು, ಸಾಯಿ ರಾಜರಾಜೇಶ್ವರಿ ಕಲಾನಿಕೇತನ, ಬೆಂಗಳೂರು), ಪ್ರೊ. ಡಾ. ಶೀಲಾ ಶ್ರೀಧರ್ (ನಿರ್ದೇಶಕರು, ಭರತಾಂಜಲಿ ನೃತ್ಯ ಶಾಲೆ, ಮೈಸೂರು), ಡಾ. ಕೃಪಾ ಫಡ್ಕೆ (ನಿರ್ದೇಶಕರು, ನೃತ್ಯಗಿರಿ, ಮೈಸೂರು), ಶ್ರೀಮತಿ ಪೂರ್ಣಿಮಾ ಗುರುರಾಜ್ (ನಿರ್ದೇಶಕರು, ಕಲಾಸಿಂಧು ಅಕಾಡೆಮಿ ಆಫ್ ಡ್ಯಾನ್ಸ್, ಬೆಂಗಳೂರು), ಸ್ಥಳ: ವಸುಂಧರ ಭವನ, ಕಲಾಂಧಿಕ ಅಕಾಡೆಮಿ ಆಫ್ ಆರ್ಟ್ಸ್, ಸರಸ್ವತಿಪುರಂ.

■ **ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು :** ಮೈಸೂರು ನಗರ ಮಟ್ಟದ ಅಂತರ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲಾ 15ನೇ ವರ್ಷದ ಶ್ರೀಮದ್ಭಗವದ್ಗೀತಾ ಕಂಠಪಾಠ ಸ್ಪರ್ಧೆ ಬಹುಮಾನ ವಿತರಣಾ ಸಮಾರಂಭ, ಅಧ್ಯಕ್ಷತೆ : ಸದ್ವಿದ್ಯಾ ಶಿಕ್ಷಣ ಸಂಸ್ಥೆ ಅಧ್ಯಕ್ಷ ಪ್ರೊ. ಎಂ.ಎಸ್.ಕೆ. ನರಹರಿಬಾಬು, ಮುಖ್ಯ ಅಭ್ಯಾಗತರು : ಹೆಚ್.ಆರ್.ನಾಗೇಂದ್ರರಾವ್, ಸಹಾಯಕ ಪ್ರಾಧ್ಯಾಪಕ ಡಾ. ಎಂ.ಎನ್. ಪ್ರವೀಣ್‌ಕುಮಾರ್, ಮುಖ್ಯ ಅತಿಥಿಗಳು : ಸದ್ವಿದ್ಯಾ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಎಂ.ಡಿ. ಗೋಪಿನಾಥ್, ಸ್ಥಳ: ಟಿ.ಪಿ. ಕೈಲಾಸಂ ರಂಗ ಮಂಟಪ, ಬೆಳಗ್ಗೆ 9.30ಕ್ಕೆ.

■ **ಜಿಲ್ಲಾ ಗವರ್ನರ್ ಮತ್ತು ಸೆಕ್ರೆಟರಿಯೇಟ್, ರೋಟರಿ ಮೈಸೂರು ಉತ್ತರ :** ನಮ್ಮ ನಾಡು–ನಮ್ಮ ಭಾಷೆ ಜಿಲ್ಲಾ ಕಾರ್ಯಕ್ರಮ, ಉದ್ಘಾಟನೆ : ಜಿಲ್ಲಾ ಗವರ್ನರ್ ರೊ. ವಿಕ್ರಮದತ್ತ, ಮುಖ್ಯ ಭಾಷಣಕಾರರು : ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಡಾ. ಮಾನಸ, ಮಾಜಿ ಜಿಲ್ಲಾ ಗವರ್ನರ್ ಜಿ.ಕೆ. ಬಾಲಕೃಷ್ಣ, ಮುಖ್ಯ ಅತಿಥಿಗಳು : ರಿತೇಶ್ ಬಾಳಿಗ, ಲೇಖಕ ಅಕ್ಷಯ್ ವಾಸು, ಕೇಶವಪ್ರಕಾಶ್, ಸಿ.ವೈ. ಗಣೇಶ್ ಲಾಡ್, ಅಧ್ಯಕ್ಷತೆ : ರೋಟರಿ ಮೈಸೂರು ಉತ್ತರ ಅಧ್ಯಕ್ಷ ಪಿ. ಪ್ರಭಾಕರ್, ಸ್ಥಳ: ರೋಟರಿ ಭವನ, ವಿಜಯನಗರ 2ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಸಂವಹನ ಟ್ರಸ್ಟ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ :** ಸುವರ್ಣ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಹಿರಿಯ ಸಾಹಿತಿಗಳಿಗೆ ಸನ್ಮಾನ, ಸಂವಹನ ಸಿರಿ ಯುವ ಸಾಹಿತ್ಯ ಪ್ರಶಸ್ತಿ ಪ್ರದಾನ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಸಮಾರಂಭ, ಸನ್ಮಾನಿತರು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ವಿಶ್ರಾಂತ ನಿರ್ದೇಶಕ ಡಾ. ಡಿ.ಕೆ. ರಾಜೇಂದ್ರ, ಸಂವಹನ ಸಿರಿ ಯುವ ಸಾಹಿತ್ಯ ಪ್ರಶಸ್ತಿ ಪುರಸ್ಕೃತರು : ಮಹಾರಾಣಿ ಸರ್ಕಾರಿ ಪದವಿಪೂರ್ವ ಕಾಲೇಜು ಅಧ್ಯಾಪಕ ಡಾ.ಎನ್.ಎನ್. ಚಿಕ್ಕಮಾದು, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು: ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ. ಪದ್ಮಾಶೇಖರ್, ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತರಾದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಡಾ.ಧರಣೀದೇವಿ ಮಾಗಲತ್ತಿ, ಸನ್ಮಾನಿತರನ್ನು ಕುರಿತು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಡಾ.ಎನ್.ಕೆ.ಲೋಲಾಕ್ಷಿ ಮತ್ತು ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ, ಅಧ್ಯಕ್ಷತೆ : ಹಿರಿಯ ವಿದ್ವಾಂಸ ಡಾ.ರಮೇಗೌಡ (ರಾಗೌ), ಮುಖ್ಯ ಅತಿಥಿಗಳು : ಹಿರಿಯ ವಿಜ್ಞಾನ ಲೇಖಕ ಎಸ್.ರಾಮಪ್ರಸಾದ್, ಪ್ರಾಸ್ತಾವಿಕ ಭಾಷಣ : ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಉಪಸ್ಥಿತರು : ಸಂಹವನ ಟ್ರಸ್ಟ್ ಅಧ್ಯಕ್ಷ ಡಿ.ಎನ್.ಲೋಕಪ್ಪ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಬಡವರ ಬಂಧು ಅಭಿಮಾನಿಗಳ ಸಂಘ, ಪಡುವಾರಹಳ್ಳಿ :** ಕನ್ನಡ ರಾಜ್ಯೋತ್ಸವ, ಮುಖ್ಯ ಅತಿಥಿಗಳು : ಶಾಸಕ ಹರೀಶ್‌ಗೌಡ, ಶ್ರೀಮತಿ ಗೌರಿ ಹರೀಶ್, ಅಧ್ಯಕ್ಷತೆ : ನಗರ ಪಾಲಿಕೆ ಮಾಜಿ ಸದಸ್ಯೆ ಶ್ರೀಮತಿ ಭಾಗ್ಯ ಮಾದೇಶ್, ಉಪಸ್ಥಿತರು : ಶ್ರೀಮತಿ ರಾಜೇಶ್ವರಿ ಪುಟ್ಟಸ್ವಾಮಿ, ತ್ರೀಮೂರ್ತಿ, ಸೋಮು, ಎಸ್.ಆರ್. ರವಿ, ಮೋಹನ್‌ಕುಮಾರ್‌ಗೌಡ, ಶಿವಪ್ರಕಾಶ್, ರಾಜಣ್ಣ, ರಮೇಶ್‌ಬಾಬು, ಕೃಪಾನಂದನ್, ಸ್ಥಳ:ಸುಬ್ಬಲಕ್ಷ್ಮಿ ಸಭಾಂಗಣ ಮಹಾಜನ ಪ್ರೌಢಶಾಲೆ, ಜಯಲಕ್ಷ್ಮಿಪುರಂ, ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾ ಬಿಸಿಎಂ ವಿದ್ಯಾರ್ಥಿ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘ :** ಕನ್ನಡ ರಾಜ್ಯೋತ್ಸವ, ಉದ್ಘಾಟನೆ: ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷತೆ: ಬಿ.ಶಿವಸ್ವಾಮಿ, ಮುಖ್ಯ ಅತಿಥಿಗಳು: ಡಾ.ಪಿ.ಕೆ. ರಾಜಶೇಖರ, ಡಾ. ವೆಂಕಟೇಶಯ್ಯ, ಸ್ಥಳ: ಶತಮಾನೋತ್ಸವ ಭವನ, ಮಹಾರಾಜ ಕಾಲೇಜು ಬೆಳಗ್ಗೆ 11ಕ್ಕೆ.

■ **ಶ್ರೀರಾಮಮಂದಿರ :** ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯುವ ಸುವರ್ಣ ಸಂಭ್ರಮ–11ನೇ ಬ್ರಾಹ್ಮಣ ಮಹಾಸಮ್ಮೇಳನದ ಪೂರ್ವಭಾವಿ ಸಭೆ, ಉದ್ಘಾಟನೆ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯಾಧ್ಯಕ್ಷ ಅಶೋಕ ಹಾರನಹಳ್ಳಿ, ಅಧ್ಯಕ್ಷತೆ : ಮಹಾರಾಜ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ. ಎಸ್. ಮುರಳಿ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ವಿಪ್ರ ಮಹಿಳಾ ಸಂಗಮದ ಅಧ್ಯಕ್ಷರಾದ ಡಾ. ಕೆ.ವಿ. ಲಕ್ಷ್ಮೀದೇವಿ, ಸ್ಥಳ: ಶ್ರೀರಾಮಮಂದಿರ, ಕೃಷ್ಣಮೂರ್ತಿಪುರಂ, ಸಂಜೆ 4ಕ್ಕೆ.

■ **ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ:** ರಾಜ್ಯ ಮಟ್ಟದ ಜಾನಪದ ಸಮೂಹ ನೃತ್ಯ ಸ್ಪರ್ಧೆ, ಉದ್ಘಾಟನೆ: ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ಬೆಟ್ಟಕೋಟೆ, ಅಧ್ಯಕ್ಷತೆ: ಶಾಸಕ ತನ್ವೀರ್ ಸೇಠ್, ಉಪಸ್ಥಿತರು: ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಎಂ.ಲಕ್ಷ್ಮಣ್, ಪುಷ್ಪಲತಾ ಚಿಕ್ಕಣ್ಣ, ಪಾಲಿಕೆ ಆಯುಕ್ತ ಅಸಾದ್ ಉರ್ ರೆಹಮಾನ್ ಷರೀಫ್, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ರುದ್ರೇಶ್, ಸ್ಥಳ: ಗಾನಕೋಗಿಲೆ ಪಿ.ಕಾಳಿಂಗರಾವ್ ಸಭಾಂಗಣ, ಸಂಜೆ 5.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇಧಾನಂದ ಅವರಿಂದ ಸರ್ವೀಸ್ ಅಂಡ್ ಸಾಲ್ವೇಷನ್–ಲೆಟರ್ಸ್ ಆಫ್ ಸ್ವಾಮಿ ವಿವೇಕಾನಂದ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವನಾಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ದಿವ್ಯ ಜೀವನ ಸಂಘ ಮಹಿಳಾ ಶಾಖೆ :** ಸುಂದರ ಕಾಂಡ ರಾಮಾಯಣ ಸಪ್ತಾಹ ಪ್ರವಚನ, ಸ್ಥಳ: ಶಿವಾನಂದ ಜ್ಞಾನಾಲಯ, ಜೆಎಲ್‌ಬಿ ರಸ್ತೆ, ಸಂಜೆ 6.30 ರಿಂದ 7.30 ರವರೆಗೆ

■ **ಶಿವರಾಂಪೇಟೆಯ ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್:** ನವೆಂಬರ್ ತಿಂಗಳ ಸಾಂಸ್ಕೃತಿಕ ಕಾರ್ಯಕ್ರಮದ ಪ್ರಯುಕ್ತ ಕು. ಪ್ರಿಯ ಲಿಖಿತಾಗೌಡ, ಸುಕೃತ್ ಮತ್ತು ಮನೋಜ್ ಅವರಿಂದ ದೇವರನಾಮ ಹಾಡುಗಾರಿಕೆ ಕಾರ್ಯಕ್ರಮ, ವಿದ್ವಾನ್ ಚೇತನ್–ಪಿಟೀಲು, ವಿದ್ವಾನ್ ನಾಗರಾಜ್–ಮೃದಂಗ, ಸ್ಥಳ: ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್, ಶಿವರಾಂಪೇಟೆ, ಸಂಜೆ 6.30ಕ್ಕೆ.

■ **ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ (ಶ್ರೀ ಸುತ್ತೂರು ಕ್ಷೇತ್ರ, ಮೈಸೂರು ಜಿಲ್ಲೆ) :** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಕರ್ತೃ ಗದ್ದುಗೆ, ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳು, ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಸ್ಥಳ: ಮಠದ ಆವರಣ, ಸಂಜೆ.

■ **ರಂಗಾಯಣ :** ರಂಗಾಯಣದ ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ 'ಅಗ್ನಿ ಮತ್ತು ಮಳೆ' ನಾಟಕ ಪ್ರದರ್ಶನ, ರಚನೆ : ಗಿರೀಶ್ ಕಾರ್ನಾಡ್, ನಿರ್ದೇಶನ : ಸಾಲಿಯಾನ ಉಮೇಶ್ ನಾರಾಯಣ, ಸಂಗೀತ : ದಿಗ್ವಿಜಯ ಹೆಗ್ಗೋಡು, ಸ್ಥಳ: ವನರಂಗ, ರಂಗಾಯಣ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI ಶೋಧ – ಅನುಶೋಧ – ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು : CSIR, CFTRI, Mysuru, 6.40 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ : ಶಭಾನ ಮತ್ತು ಕೀರ್ತಿ. ಎಸ್. ಬೈಂದೂರು, ಪರಿಕಲ್ಪನೆ : ಅಬ್ದುಲ್ ರಶೀದ್, 6.50 ರೈತರಿಗೆ ಸಲಹೆ, 7.15 ಜೀವನ ಜೋಪಾನ–ಹೆಚ್‌ಐವಿ–ಅಂದು ಇಂದು, ಪ್ರಾಯೋಜಕರು – ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಮಂಡಳಿ, 8.30 'ಹಾದಿಯಲ್ಲಿ ಕಂಡ ಮುಖ'–ಬಾನುಲಿ ಸರಣಿ, ಪ್ರಸ್ತುತಿ : ಅಬ್ದುಲ್ ರಶೀದ್, 9.00 ಚಿತ್ರಗೀತೆಗಳು, 10.05 ಪ್ರಸಾರ ಭಾರತಿ ಸಂಸ್ಥಾಪನಾ ದಿನ–ವಿಶೇಷ ಕಾರ್ಯಕ್ರಮ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು', ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.35 ಆಯುಷ್‌ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.40 ದೇವರನಾಮ, 12.45 ಜನಪದ ಸಂಗೀತ, 1.20 ಕೋಮು ಏಕತಾ ಸಪ್ತಾಹ, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ–ಪ್ರತಿಭಾ ಪಲ್ಲವ–ಕರಾಟೆ ಪಟುಗಳಾದ ಹೆಚ್. ಸಮರ್ಥ ಹಾಗೂ ಹೆಚ್. ಯಾದವಿ ಪರಿಚಯ, 4.00 ನಾಟಕ– ಅಪೂರ್ಣ ರಾಮಾಯಣ, ರಚನೆ–ಎಸ್. ಕೃಷ್ಣಮೂರ್ತಿ, ನಿರ್ದೇಶನ – ಯಮುನಾ ಮೂರ್ತಿ, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ : ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ ಸೊಪ್ಪು ಹಾಗೂ ತರಕಾರಿ ಬೇಸಾಯ ಕುರಿತು ಸಂವಾದ. ಭಾಗವಹಿಸುತ್ತಾರೆ. ಮಂಡ್ಯ ತಾಲೂಕು ಕೆರೆಮೇಗಲದೊಡ್ಡಿ ಗ್ರಾಮದ ಕೃಷಿಕ ದಂಪತಿ ವಸಂತಾ ಹಾಗೂ ಶಂಕರ್ ಪ್ರಸ್ತುತಿ : ಎನ್. ಕೇಶವಮೂರ್ತಿ, 8.00 ಸವಿನೆನಪು –ಹಳೆಯ ಕನ್ನಡ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ವಿದ್ವಾನ್. ಮಹದೇವ ಶರ್ಮ ಮತ್ತು ವಿದ್ವಾನ್. ರಾಜಶ್ರೀ–ಯುಗಳ ವೈಯೋಲಿನ್ ವಾದನ

ಮೈಸೂರು ಮಿತ್ರ

ಶನಿವಾರ 23 ನವೆಂಬರ್ 2024

ಗ್ಯಾರಂಟಿಗೆ ಗ್ಯಾರಂಟಿ ಕೊಡಲಾಗದೇ ಬಡವರ ಮೇಲೆ ಸರ್ಕಾರ 'ಪ್ರಹಾರ'

• ಬಿಪಿಎಲ್ ಕಾರ್ಡ್ ಪರಿಷ್ಕರಣೆ ಹೆಸರಲ್ಲಿ ಬಡವರಿಗೆ ಬರೆ • ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕಿಡಿ

ಬೆಂಗಳೂರು, ನ.22(ಕೆಎಂಶಿ)–ಗ್ಯಾರಂಟಿ ಯೋಜನೆಗಳ ಈಡೇರಿಕೆ ಸಾಧ್ಯವಾಗದೆ ಬಡವರ ಮೇಲೆ ಪ್ರಹಾರ ಮಾಡುವುದನ್ನು ಬಿಟ್ಟು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದ ಜನರ ಕ್ಷಮೆ ಕೇಳಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿದ್ದಾರೆ.



ಬಿ.ವೈ.ವಿಜಯೇಂದ್ರ

ಬಿಪಿಎಲ್ ಕಾರ್ಡ್ ವಿಷಯದಲ್ಲಿ ಒಂದೇ ಕಲ್ಲಿಗೆ ಎರಡು ಹಕ್ಕಿ ಹೊಡೆಯುವ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ. ಅನರ್ಹರ ಕಾರ್ಡ್ ಬದಲಿಸಲು ಆಕ್ಷೇಪವಿಲ್ಲ ಆದರೆ, ಸಮರ್ಪಕ ಮಾನದಂಡವೇ ಇಲ್ಲದೆ ಪಾನ್ ಕಾರ್ಡ್, ಆದಾಯ ತೆರಿಗೆ ವಿಚಾರಗಳನ್ನು ಮುಂದಿಟ್ಟುಕೊಂಡು 10ರಿಂದ 20 ಲಕ್ಷ ಬಿಪಿಎಲ್ ಕಾರ್ಡ್‌ಗಳನ್ನು ವಜಾ ಮಾಡಿದೆ.

ಬಿಪಿಎಲ್ ಕಾರ್ಡ್‌ಗೆ ಕತ್ತರಿ ಹಾಕಿದರೆ, ಗೃಹಲಕ್ಷ್ಮಿ ಹಣ ಉಳಿತಾಯ ಆಗುತ್ತೆ, 5 ಕೆಜಿ ಅಕ್ಕಿಗೆ ಕೊಡುವ ಹಣವೂ ಉಳಿಯಲಿದೆ, ಸಾವಿರಾರು ಕೋಟಿ ರೂ. ಉಳಿತಾಯಕ್ಕಾಗಿ ಈ ಕುತಂತ್ರಕ್ಕೆ ಮುಂದಾಗಿದ್ದಾರೆ.

ಬಿಪಿಎಲ್ ಕಾರ್ಡ್ ರದ್ದು ಮಾಡಿ ವಂಚನೆ ಮಾಡುವ ಸರ್ಕಾರ ಇದು, ಮನುಷ್ಯತ್ವ ಇದ್ದಿದ್ದರೆ ಬಡವರಿಗೆ ಬರೆ ಎಳೆಯಲು ಮುಂದಾಗುತ್ತಿರಲಿಲ್ಲ.

ಭರವಸೆ ಈಡೇರಿಸಲು ಸಾಧ್ಯವಾಗದೆ, ಹಣ ಕ್ರೋಢೀಕರಣ ಮಾಡಲಾಗದೆ ಮುಖ್ಯಮಂತ್ರಿ ಅಸಹಾಯಕರಾಗಿ ಭಾಗ್ಯಲಕ್ಷ್ಮಿ ಯೋಜನೆಗೆ ಕತ್ತರಿ ಹಾಕಿದ್ದಾರೆ, ಹಾಲಿನ ಪ್ರೋತ್ಸಾಹ ಧನ ಸುಮಾರು ಒಂದು ಸಾವಿರ ಕೋಟಿ ರೂ.ಗಳಿಗೂ ಹೆಚ್ಚು ಬಾಕಿ ಇದೆ, ಯಡಿಯೂರಪ್ಪ ಆಡಳಿತದಲ್ಲಿ ರೈತರಿಗೆ ನೀಡುತ್ತಿದ್ದ ಕಿಸಾನ್ ಸಮ್ಮಾನ್ ಯೋಜನೆಯ 4 ಸಾವಿರ ರೂ. ನಿಲ್ಲಿಸಿದ್ದಾರೆ.

ಸಿದ್ದರಾಮಯ್ಯ ಸರ್ಕಾರಕ್ಕೆ ಬಡವರ ಬಗ್ಗೆ ಕಾಳಜಿ ಇಲ್ಲ, ಬಡವರ ಹೊಟ್ಟೆ ಮೇಲೆ ಹೊಡೆಯುತ್ತಿದೆ, ತಮ್ಮ ಹುಳುಕು ಮುಚ್ಚಿ ಹಾಕಲು ಎಲ್ಲ ವಿಚಾರದಲ್ಲೂ ಕೇಂದ್ರ ಸರ್ಕಾರವನ್ನು ದೂರುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಸಚಿವರು ಭ್ರಷ್ಟಾಚಾರದ ವಿರುದ್ಧ ಮಾತನಾಡುತ್ತಾರೆ. ಕಾಂಗ್ರೆಸ್ ಆಡಳಿತದಲ್ಲಿ ವಾಲ್ಮೀಕಿ ನಿಗಮದ ಹಗರಣ ನಡೆದಿದೆ. ನೂರಾರು ಕೋಟಿ ರೂ. ಕೊಳ್ಳೆ ಹೊಡೆದು ಚುನಾವಣೆ ನಡೆಸಿ, ತನಿಖೆ ಎದುರಿಸುತ್ತಿದ್ದಾರೆ.

ಹಗರಣದ ಹಿನ್ನೆಲೆಯಲ್ಲಿ ಸಚಿವರು ರಾಜೀನಾಮೆ ಕೊಟ್ಟು ಜೈಲಿಗೆ ಹೋಗಿ ಬಂದಿದ್ದಾರೆ. 600 ಕೋಟಿ ರೂ. ಲಿಕ್ಕರ್ ಹಗರಣ ಬೆಳಕಿಗೆ ಬರುತ್ತಿದೆ. ಸ್ವತಃ ಮುಖ್ಯಮಂತ್ರಿಯೇ ತೇಪೆ ಹಚ್ಚುವ ಕೆಲಸ ಮಾಡಿದ್ದಾರೆ.

ಮೈಸೂರಿನ ಮುಡಾ ಹಗರಣದಲ್ಲಿ ಕಾಂಗ್ರೆಸ್‌ಗೆ ಅನುಕೂಲವಾಗುವಂತೆ ತನಿಖಾ ಸಮಿತಿ, ಆಯೋಗ ನೇಮಿಸಲಾಗುತ್ತಿದೆ. ಲೋಕಾಯುಕ್ತ ದುರುಪಯೋಗ ಮಾಡುತ್ತಿದ್ದಾರೆ. ಸಚಿವ ಬೈರತಿ ಸುರೇಶ್ ಹೆಲಿಕಾಪ್ಟರ್‌ನಲ್ಲಿ ಮೈಸೂರಿಗೆ ಹೋದದ್ದು, ಅಮಾನತು ಆಗಬೇಕಾದ ಅಧಿಕಾರಿಗಳ ವರ್ಗಾವಣೆ ಮಾಡಿದ್ದು, ವೆಂಕಟಾಚಲಪತಿ ತಂಡದಿಂದ ತನಿಖೆ, ದಾಖಲಾತಿ ಭಸ್ಮ ಮಾಡಲಾಗಿದೆ, ಪ್ರಾಮಾಣಿಕ ತನಿಖೆ ನಡೆದಿಲ್ಲ ಎಂದರು.

ಮುಖ್ಯಮಂತ್ರಿ ಅವರ ಬಾಮೈದ, ಲೋಕಾಯುಕ್ತ ಅಧಿಕಾರಿಗಳನ್ನು ರಾತ್ರೋರಾತ್ರಿ ಭೇಟಿ ಮಾಡಿದ್ದಾರೆ, ಆರೋಪಿ ನಂ.1 ಸ್ಥಾನದಲ್ಲಿರುವ ಸಿದ್ದರಾಮಯ್ಯ ನಿಜವಾಗಿ ಪ್ರಾಮಾಣಿಕರಾಗಿದ್ದರೆ, ಮುಖ್ಯಮಂತ್ರಿ ಸ್ಥಾನದ ಘನತೆ, ಗೌರವ ಉಳಿಸುವ ಕಾಳಜಿ ಕಿಂಚಿತ್ತಾದರೂ ಇದ್ದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡಬೇಕಿತ್ತು.

ಅಧಿಕಾರ ದುರುಪಯೋಗಪಡಿಸಿಕೊಂಡು ತನಿಖಾ ಸಂಸ್ಥೆಗಳ ಮೇಲೆ ಒತ್ತಡ ಹೇರಿ, ಅವರಿಗೆ ಬೇಕಾದಂತಹ ವರದಿ, ಕ್ಲೀನ್‌ಚಿಟ್ ಪಡೆಯುವ ಪ್ರಯತ್ನವನ್ನು ಸ್ವತಃ ಮುಖ್ಯಮಂತ್ರಿ ಮಾಡುತ್ತಿದ್ದಾರೆ, ಶೀಘ್ರದಲ್ಲೇ ಕ್ಲೀನ್ ಚಿಟ್ ಸಿಗಲಿದೆ ಎಂದರು.

ನಬಾರ್ಡ್ ವಿಷಯದಲ್ಲಿ ಸಿದ್ದರಾಮಯ್ಯನವರು ಕಪಟ ನಾಟಕ ಮಾಡುತ್ತಿದ್ದಾರೆ. ಹಣಕಾಸಿನ ಖಾತೆಯನ್ನೂ ಹೊಂದಿರುವ ಅವರು, ಕೇಂದ್ರ ಸರ್ಕಾರದಿಂದ ಬರುವ ಹಣದ ಕುರಿತು ಜನರಿಗೆ ತಪ್ಪು ಮಾಹಿತಿ ಕೊಡುತ್ತಿದ್ದಾರೆ. ಬ್ಯಾಂಕ್‌ಗಳು ಶೇ.40ರಷ್ಟು ಮೊತ್ತವನ್ನು ಆದ್ಯತಾ ವಲಯವಾದ ಕೃಷಿ ಕ್ಷೇತ್ರಕ್ಕೆ ಕೊಡುತ್ತಿರುವುದು ಸಿದ್ದರಾಮಯ್ಯನವರಿಗೆ ತಿಳಿದಿಲ್ಲವೇ? ಹಿಂದೆಂದೂ ಈ ಪ್ರಮಾಣದಲ್ಲಿ ನೀಡುತ್ತಿರಲಿಲ್ಲ, ಶೇ.58 ಕಡಿತ ಆಗಿದೆ ಎನ್ನುತ್ತಾರೆ, ಗುಜರಾತ್ ಸೇರಿ ಅನೇಕ ರಾಜ್ಯಗಳಿಗೂ ಇದೇ ರೀತಿ ಕಡಿತ ಮಾಡಲಾಗಿದೆ. ಎಲ್ಲ ಸತ್ಯ ಗೊತ್ತಿದ್ದರೂ ನಬಾರ್ಡ್‌ನಿಂದ ಅನ್ಯಾಯ ಆಗುತ್ತಿದೆ ಎಂಬುದಾಗಿ ಕೇಂದ್ರದ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿದ್ದು, ಇಂತಹ ಹೇಳಿಕೆಗಳಿಂದ ಮುಖ್ಯಮಂತ್ರಿ ಸ್ಥಾನಕ್ಕೆ ಗೌರವ ಬರುವುದಿಲ್ಲ ಎಂದರು.

ಕಾಂಗ್ರೆಸ್ ಸರ್ಕಾರ ಉರುಳಿಸುವಲ್ಲಿ ಬಿಜೆಪಿ ಆಸಕ್ತಿ ಹೊಂದಿಲ್ಲ, ನಿಮ್ಮ ನಡವಳಿಕೆಯಿಂದ ಕಾಂಗ್ರೆಸ್ ಶಾಸಕರೇ ನಿಮ್ಮ ಸರ್ಕಾರದ ವಿರುದ್ಧ ದಂಗೆ ಏಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಭಿವೃದ್ಧಿ ಇಲ್ಲದ ಆಡಳಿತ ವೈಖರಿಯೇ ಇದಕ್ಕೆ ಕಾರಣ. ಆಡಳಿತ ಪಕ್ಷದ ಸಚಿವರು, ಶಾಸಕರಲ್ಲಿ ಮುಖ್ಯಮಂತ್ರಿಗಳ ಮೇಲಿನ ಭರವಸೆ ಕುಸಿದಿದೆ. ಶಾಸಕರ ಅಸಮಾಧಾನ ಭುಗಿಲೆದ್ದಿದ್ದು, ಈ ಸರಕಾರ ಬಹಳ ದಿನ ಉಳಿಯುವುದಿಲ್ಲ ಎಂಬುದು ಗೃಹ ಸಚಿವ ಪರಮೇಶ್ವರ್ ಅವರಿಗೂ ಅನಿಸಿದೆ. ಅದನ್ನೇ ಅವರು ಮೈಸೂರಿನಲ್ಲಿ ವ್ಯಕ್ತಪಡಿಸಿದ್ದಾರೆ ಎಂದರು.

ಡಿ.5ರಂದು ಸಿಎಂ ಸಿದ್ದರಾಮಯ್ಯ ಮೇಲ್ಮನವಿ ವಿಚಾರಣೆ

ಬೆಂಗಳೂರು, ನ.22–ತಮ್ಮ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಅನುಮತಿ ನೀಡಿದ್ದ ಕ್ರಮವನ್ನು ಎತ್ತಿ ಹಿಡಿದಿದ್ದ ಹೈಕೋರ್ಟ್ ಏಕ ಸದಸ್ಯ ಪೀಠದ ಆದೇಶವನ್ನು ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ ವಿಭಾಗೀಯ ಪೀಠ ಡಿ.5ಕ್ಕೆ ಮುಂದೂಡಿದೆ.

ಈ ಅರ್ಜಿ ವಿಚಾರಣೆ ನಾಳೆ (ಶನಿವಾರ) ನಡೆಯಬೇಕಿತ್ತು. ಆದರೆ ಇಂದು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಅವರಿದ್ದ ವಿಭಾಗೀಯ ಪೀಠ ಪ್ರಾರಂಭವಾಗುತ್ತಿದ್ದಂತೆ ವೀಡಿಯೋ ಕಾನ್ಫರೆನ್ಸ್ ಮೂಲಕ ಹಾಜರಾದ ಸಾಲಿಸೇಟರ್ ಜನರಲ್ ತುಷಾರ್ ಮೆಹ್ತಾ ಅವರು, ಶನಿವಾರ ತಾವು ಖಾಸಗಿ ಕಾರ್ಯಕ್ರಮದಲ್ಲಿ ಭಾಗಿಯಾಗಬೇಕಾಗಿರುವುದರಿಂದ ಅರ್ಜಿ ವಿಚಾರಣೆಯನ್ನು ಮತ್ತೊಂದು ದಿನಕ್ಕೆ ನಿಗದಿಪಡಿಸಬೇಕೆಂದು ಮನವಿ ಮಾಡಿದರು. ಅವರ ಮನವಿ ಪುರಸ್ಕರಿಸಿದ ಹೈಕೋರ್ಟ್ ವಿಭಾಗೀಯ ಪೀಠ ವಿಚಾರಣೆಯನ್ನು ಡಿ.5ಕ್ಕೆ ಮುಂದೂಡಿದೆ.

ಅಕ್ರಮವಾಗಿ ಗ್ಯಾಸ್ ರೀಫಿಲ್ಲಿಂಗ್; ಸಿಸಿಬಿ ಪೊಲೀಸರಿಂದ ಆರೋಪಿ ಬಂಧನ

119 ಸಿಲಿಂಡರ್, 2 ಆಪೆ ಆಟೋ, ಇತರೆ ಪರಿಕರ ಜಪ್ತಿ

ಮೈಸೂರು, ನ.22(ಎಸ್‌ಪಿಎನ್)–ಅಕ್ರಮವಾಗಿ ಸಿಲಿಂಡರ್‌ಗೆ ರಿಫಿಲ್ಲಿಂಗ್ ಮಾಡುತ್ತಿದ್ದ ವ್ಯಕ್ತಿಯನ್ನು ಮೈಸೂರು ನಗರ ಸಿಸಿಬಿ ಘಟಕದ ಪೊಲೀಸರು ಬಂಧಿಸಿ, ಈತನಿಂದ ಸಿಲಿಂಡರ್ ಹಾಗೂ ಇತರೆ ಪರಿಕರಗಳನ್ನು ವಶ ಪಡಿಸಿಕೊಂಡಿದ್ದಾರೆ.

ಮೈಸೂರು ರಿಂಗ್ ರೋಡ್‌ನ ರಾಜರಾಜೇಶ್ವರಿ ನಗರ 2ನೇ ಹಂತದ ಬೆಮೆಲ್ ಬಡಾವಣೆ ತೋಟದಲ್ಲಿ ಕಾನೂನು ಬಾಹಿರವಾಗಿ ಅಕ್ರಮವಾಗಿ ವಿವಿಧ ಕಂಪನಿಗಳ ಗ್ಯಾಸ್ ಸಿಲಿಂಡರ್‌ಗಳನ್ನು ದಾಸ್ತಾನು ಮಾಡಿಕೊಂಡು ಗ್ಯಾಸ್ ರೀಫಿಲ್ಲಿಂಗ್ ಮಾಡುತ್ತಿರುವ ಖಚಿತ ಮಾಹಿತಿ ಮೇರೆಗೆ ಸಿಸಿಬಿ ಘಟಕದ ಪೊಲೀಸರು ದಾಳಿ ನಡೆಸಿ, ಆರೋಪಿಯನ್ನು ಬಂಧಿಸಿದ್ದಾರೆ.

ಈತನಿಂದ 119 ಸಿಲಿಂಡರ್, 2 ಆಪೆ ಆಟೋ, ರೀಫಿಲ್ಲಿಂಗ್‌ಗೆ ಬಳಸುವ 6 ರಾಡು ಮತ್ತು ಇತರೆ ಪರಿಕರಗಳನ್ನು ವಶಪಡಿಸಿಕೊಂಡಿದ್ದು, ಈ ಬಗ್ಗೆ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ ತನಿಖೆ ಮುಂದುವರೆಸಿದ್ದಾರೆ. ಈ ಕಾರ್ಯಾಚರಣೆಯನ್ನು ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಸಿಸಿಬಿ ಘಟಕದ ಅಧಿಕಾರಿ ಮತ್ತು ಸಿಬ್ಬಂದಿ ಕೈಗೊಂಡಿದ್ದರು ಎಂದು ಪೊಲೀಸ್ ಆಯುಕ್ತರ ಕಚೇರಿ ಪ್ರಕಟಣೆ ತಿಳಿಸಿದೆ.

ಸನ್ಮಾನ..



ಮೈಸೂರು ಹೋಟೆಲ್ ಮಾಲೀಕರ ಸಂಘ ಮತ್ತು ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ವತಿಯಿಂದ 'ಮೈಸೂರು ಮಿತ್ರ' ಮುಖ್ಯ ವರದಿಗಾರರೂ ಆದ ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಅವರನ್ನು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಸಮ್ಮುಖದಲ್ಲಿ ಸನ್ಮಾನಿಸಲಾಯಿತು. ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಕಾಂಗ್ರೆಸ್ ಮುಖಂಡ ಹೆಚ್.ಎ.ವೆಂಕಟೇಶ್ ಇನ್ನಿತರರಿದ್ದರು.

ಡಾ. ಯತೀಂದ್ರ ಸಿದ್ದರಾಮಯ್ಯ ವಿರುದ್ಧ ಹೈಕೋರ್ಟ್‌ನಲ್ಲಿ ನ್ಯಾಯಾಂಗ ನಿಂದನೆ ಅರ್ಜಿ

ಬೆಂಗಳೂರು, ನ.22–ಕೇಂದ್ರೀಯ ತನಿಖಾ ಸಂಸ್ಥೆಗಳು ಮತ್ತು ನ್ಯಾಯಾಲಯಗಳು ಕೇಂದ್ರ ಸರ್ಕಾರದ ಮಾತನ್ನು ಕೇಳುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಿಕೆ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ, ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ವಿರುದ್ಧ ಬೆಂಗಳೂರಿನ ವಸಂತ ಕುಮಾರ್ ಎಂಬುವರು ಹೈಕೋರ್ಟ್‌ನಲ್ಲಿ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದ್ದಾರೆ.

ಡಾ. ಯತೀಂದ್ರ ಅವರು ನ.13ರಂದು ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಕೇಂದ್ರ ಸರ್ಕಾರವು ತನಿಖಾ ಸಂಸ್ಥೆಗಳಾದ ಇಡಿ, ಐಟಿ ಮತ್ತು ಸಿಬಿಐಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿವೆ. ನ್ಯಾಯಾಲಯಗಳೂ ಕೂಡ ಕೇಂದ್ರ ಸರ್ಕಾರ ಹೇಳುವ ಮಾತನ್ನು ಕೇಳಬೇಕಾಗಿದೆ ಎಂದಿದ್ದಾರೆ ಎಂದು ತಮ್ಮ ಅರ್ಜಿಯಲ್ಲಿ ವಸಂತ ಕುಮಾರ್ ಉಲ್ಲೇಖಿಸಿದ್ದಾರೆ.

ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ

ಮೈಸೂರು, ನ.22– ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಮುಲಕ ನಾಡು ಭವನದಲ್ಲಿ ನ. 24 ರಂದು ಸಂಜೆ 4 ಗಂಟೆಗೆ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ನಡೆಯಲಿದೆ. ಈ ಸಂದರ್ಭದಲ್ಲಿ ಖ್ಯಾತ ಹಾಸ್ಯಸಾಹಿತಿ ಎಂ ಎಸ್ ನರಸಿಂಹ ಮೂರ್ತಿ ಅವರನ್ನು ಸನ್ಮಾನಿಸಲಾಗುವುದು. ನಾಡೋಜ ಡಾ ಟಿ ವಿ ವೆಂಕಟಾಚಲ ಶಾಸ್ತ್ರಿಗಳು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಮಂಡ್ಯ ನುಡಿ ಹಬ್ಬಕ್ಕೆ ಹಿರಿಯ ಸಾಹಿತಿ ಡಾ.ಎಸ್.ಎಲ್.ಭೈರಪ್ಪರಿಗೆ ಆಹ್ವಾನ

ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಮಹೇಶ್ ಜೋಶಿ ಖುದ್ದು ಭೇಟಿ



ಹಿರಿಯ ಸಾಹಿತಿ ಎಸ್.ಎಲ್.ಭೈರಪ್ಪ ಅವರನ್ನು ಕಸಾಪ ರಾಜ್ಯಾಧ್ಯಕ್ಷ ಮಹೇಶ್ ಜೋಶಿ ಖುದ್ದು ಭೇಟಿ ಮಾಡಿ ಮಂಡ್ಯ ನುಡಿಹಬ್ಬಕ್ಕೆ ಆಹ್ವಾನಿಸಿದರು.

ಮೈಸೂರು, ನ.22(ಎಸ್‌ಪಿಎನ್)–ಮಂಡ್ಯದಲ್ಲಿ ಡಿ.20ರಿಂದ 22ರವರೆಗೆ ನಡೆಯುವ 87ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮೈಸೂರಿನ ಖ್ಯಾತ ಕಾದಂಬರಿಗಾರ ಡಾ.ಎಸ್.ಎಲ್.ಭೈರಪ್ಪ ಹಾಗೂ ಸಾಹಿತಿ ಕೆ.ಎಸ್.ಭಗವಾನ್ ಅವರನ್ನು ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಮಹೇಶ್ ಜೋಶಿ ಆಹ್ವಾನಿಸಿದರು.

ಕುವೆಂಪುನಗರದ ನಿವಾಸದಲ್ಲಿ ಡಾ.ಎಸ್.ಎಲ್.ಭೈರಪ್ಪ ಹಾಗೂ ಲೇಖಕ ಪ್ರೊ.ಕೆ.ಎಸ್.ಭಗವಾನ್ ಅವರನ್ನು ಶುಕ್ರವಾರ ಭೇಟಿ ಮಾಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕನ್ನಡ ಸಾಹಿತ್ಯ, ಭಾಷೆಗೆ ಮಂಡ್ಯ ಚಿಗುರಾದರೆ, ಮೈಸೂರು ಬೇರು. ಕನ್ನಡ ಮಾತನಾಡುವ ಅತೀ ಹೆಚ್ಚು ಜನರು ಮಂಡ್ಯ ಜಿಲ್ಲೆಯಲ್ಲಿದ್ದಾರೆ. ಆ ಜಿಲ್ಲೆಯೂ ಮೊದಲು ಮೈಸೂರು ಜಿಲ್ಲೆಯ ಭಾಗವಾಗಿತ್ತು. ನಾಲ್ವಡಿ ಕೃಷ್ಣರಾಜ ಒಡೆಯರ್ ಆಡಳಿತಾವಧಿಯಲ್ಲಿ ಮಂಡ್ಯ ಅಭಿವೃದ್ಧಿಗೊಳಿಸಿದ್ದಾರೆ. ಮಂಡ್ಯದ ಮಾತೃ ಜಿಲ್ಲೆಗೆ ಬಂದು ಎಲ್ಲಾ ಕನ್ನಡ ಪ್ರೇಮಿಗಳು, ಸಾಹಿತಿಗಳಿಗೆ ಆಹ್ವಾನಿಸಲಾಗುತ್ತಿದೆ ಎಂದರು.

ಮಂಡ್ಯದಲ್ಲಿ ನಡೆಯುತ್ತಿರುವ ಕನ್ನಡ ಸಾಹಿತ್ಯ ಸಮ್ಮೇಳನದ ಮೇಲೆ ಎಲ್ಲರ ನಿರೀಕ್ಷೆ ಹೆಚ್ಚಿದೆ. ಹಾವೇರಿ ಸಮ್ಮೇಳನಕ್ಕಿಂತಲೂ ಅದ್ದೂರಿಯಾಗಿ ಮಾಡಲಾಗುವುದು. ಕನ್ನಡದ ಅಸ್ಮಿತೆ, ಸಂಸ್ಕೃತಿ, ಜಾನಪದದ ಬೆಳಕನ್ನು ಈ ಸಮ್ಮೇಳನದಲ್ಲಿ ಅನಾವರಣಗೊಳಿಸಲಾಗುವುದು. ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಈ ವೇಳೆ ಹಿರಿಯ ಸಾಹಿತಿಗಳಾದ ಡಾ.ಸಿ.ಪಿ.ಕೃಷ್ಣಕುಮಾರ್, ವೆಂಕಟಾಚಲ ಶಾಸ್ತ್ರಿ, ಪ್ರೊ.ಪ್ರಧಾನ ಗುರುದತ್, ಇತಿಹಾಸ ತಜ್ಞೆ ವಸುಂಧರಾ ಫಿಲಿಯೋಜಾ ಸೇರಿದಂತೆ ಪ್ರಮುಖ ಲೇಖಕರ ನಿವಾಸಕ್ಕೆ ಭೇಟಿ ನೀಡಿ ಆಹ್ವಾನಿಸುತ್ತೇನೆ ಎಂದರಲ್ಲದೆ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕಾರ್ಯದರ್ಶಿ ಭೇರ್ಯ ರಾಮ್ ಕುಮಾರ್, ಈ ವೇಳೆ ಹಾಜರಿದ್ದರು.

ಶ್ರೀ ನಾಗಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜಾ ಕಾರ್ಯಕ್ರಮ

ಮೈಸೂರು, ನ.22–ಮೈಸೂರಿನ ತೊಣಚಿಕೊಪ್ಪಲಿನಲ್ಲಿರುವ ಶ್ರೀ ನಾಗಲಿಂಗೇಶ್ವರ ಸ್ವಾಮಿ ದೇವಸ್ಥಾನ ವಾರ್ಷಿಕೋತ್ಸವದ ವಿಶೇಷ ಪೂಜಾ ಕಾರ್ಯಕ್ರಮಗಳು ನ.24 ಮತ್ತು 25ರಂದು ನಡೆಯಲಿದೆ. ನ.24ರಂದು ಬೆಳಿಗ್ಗೆ 9ಕ್ಕೆ ಶುದ್ಧಿ ಪುಣ್ಯಾಹ, ಕಲಶ ಸ್ಥಾಪನೆ, ಗಣಪತಿ ಹೋಮ, ನವಗ್ರಹ ಹೋಮ, ಶನಿ ಶಾಂತಿ ಹೋಮ, ದುರ್ಗಾ ಹೋಮ, ಪೂರ್ಣಾಹುತಿ, ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ. ಅಂದು ಸಂಜೆ 6 ಗಂಟೆಗೆ ದೇವಸ್ಥಾನದಲ್ಲಿ ವಾಸ್ತು ಹೋಮ, ವಾಸ್ತು ಬಲಿ, ದಿಗ್ಬಲಿ, ಮಹಾಮಂಗಳಾರತಿ ನಡೆಯಲಿದೆ.

ನ.25ರಂದು ಬೆಳಿಗ್ಗೆ 7.30ಕ್ಕೆ ದೇವರಿಗೆ ಪಂಚಾಮೃತ ಅಭಿಷೇಕ, ರುದ್ರಾಭಿಷೇಕ, ಕಲಾ ಹೋಮ, 10.30ಕ್ಕೆ ಸುಬ್ರಹ್ಮಣ್ಯ ಹೋಮ, ರುದ್ರ ಹೋಮ, ಅಮೃತ ಸಂಜೀವಿನಿ ಮಹಾ ಮೃತ್ಯುಂಜಯ ಹೋಮ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, 1 ಗಂಟೆಗೆ ಅನ್ನಸಂತರ್ಪಣೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ರಾಮಕೃಷ್ಣ ನಗರದಲ್ಲಿ ಇಂದು ಕನ್ನಡ ರಾಜ್ಯೋತ್ಸವ

ಮೈಸೂರು, ನ.22–ಮೈಸೂರಿನ ರಾಮ ಕೃಷ್ಣನಗರ ಜಿ, ಹೆಚ್ ಬ್ಲಾಕ್ ಹಾಗೂ ಆರೋಗ್ಯನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಮತ್ತು ಹೆಚ್–ಬ್ಲಾಕ್‌ನ ಸುರಭಿ ಮಹಿಳಾ ಸಮಾಜದ ಸಂಯುಕ್ತಾಶ್ರಯದಲ್ಲಿ ನಾಳೆ (ನ.23) ಸಾಲುಮರದ ತಿಮ್ಮಕ್ಕ ಬಯಲು ರಂಗಮಂದಿರದಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಅಂದು ಸಂಜೆ 5 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದು, ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಂ.ದೇವದಾಸ ಕಿಣಿ ಅಧ್ಯಕ್ಷತೆ ವಹಿಸಲಿದ್ದಾರೆ. ಸಾಹಿತಿ ಮ.ನ.ಲತಾ ಮೋಹನ್, ಶ್ರೀ ಶನೇಶ್ವರ ದೇವಸ್ಥಾನ ಅಭಿವೃದ್ಧಿ ಸಮಿತಿಯ ಅಧ್ಯಕ್ಷೆ ಶ್ರೀಮತಿ ವಿಜಯಾ ನಂಜುಂಡಯ್ಯ, ಸುರಭಿ ಮಹಿಳಾ ಸಮಾಜದ ಅಧ್ಯಕ್ಷೆ ಶ್ರೀಮತಿ ಜಾನ್ಹವಿ ಶ್ರೀನಿವಾಸ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಇದಕ್ಕೂ ಮುನ್ನ ಬೆಳಿಗ್ಗೆ 9 ಗಂಟೆಗೆ ಸಾಲುಮರದ ತಿಮ್ಮಕ್ಕ ಪಾರ್ಕ್ ಆವರಣದಲ್ಲಿ ಸಂಘದ ಸದಸ್ಯರು ಮತ್ತು ಕುಟುಂಬದವರಿಗೆ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿದ್ದು, ನಂತರ ಬಹುಮಾನ ವಿತರಣೆ ನಡೆಯುವುದು ಎಂದು ಪ್ರಕಟಣೆ ತಿಳಿಸಿದೆ.

ಭಾರತೀಯ ಮೌಲ್ಯಗಳ ವಿದ್ಯಾರ್ಥಿಗಳಲ್ಲಿ ಬಿತ್ತಲು ರಂಗಭೂಮಿ ಉತ್ತಮ ವೇದಿಕೆ

ಹಿರಿಯ ರಂಗಕರ್ಮಿ ಪ್ರಸಾದ್ ಕುಂದೂರು ಅಭಿಮತ



ಜೆಎಸ್‌ಎಸ್ ರಂಗೋತ್ಸವ–2024ರ ಸಮಾರೋಪದಲ್ಲಿ ರಾಜ್ಯೋತ್ಸವ ಪುರಸ್ಕೃತರಾದ ಸರಸ್ವತಿ ಜುಲೇಖಾ ಬೇಗಂ, ವನ್ಯಜೀವಿ ಛಾಯಾಗ್ರಾಹಕ ಡಾ.ಲೋಕೇಶ್ ಮೊಸಳೆ ಉಪಸ್ಥಿತರಿದ್ದರು.

ಮೈಸೂರು, ನ.22(ಎಸ್‌ಪಿಎನ್)–ಭಾರತೀಯ ವೈವಿಧ್ಯಮಯ ಮೌಲ್ಯಗಳನ್ನು ವಿದ್ಯಾರ್ಥಿಗಳಿಗೆ ಕಲಿಸಲು ರಂಗಭೂಮಿ ಉತ್ತಮ ವೇದಿಕೆ ಎಂದು ಹಿರಿಯ ರಂಗಕರ್ಮಿ ಪ್ರಸಾದ್ ಕುಂದೂರು ಅಭಿಪ್ರಾಯಪಟ್ಟರು.

ಮೈಸೂರು ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಪದವಿ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಜೆಎಸ್‌ಎಸ್ ಕಲಾ ಮಂಟಪ, ಜೆಎಸ್‌ಎಸ್ ಮಹಾವಿದ್ಯಾಪೀಠ ಸಹಯೋಗದೊಂದಿಗೆ ಏರ್ಪಡಿಸಿದ್ದ ಜೆಎಸ್‌ಎಸ್ ರಂಗೋತ್ಸವ–2024ರ ಸಮಾರೋಪದಲ್ಲಿ ಅವರು ಮಾತನಾಡಿದರು.

ಪುಸ್ತಕಕ್ಕೆ ಸೀಮಿತವಾದ ಜ್ಞಾನದಿಂದ ವಿದ್ಯಾರ್ಥಿಗಳು ಅಂಕಗಳನ್ನು ಗಳಿಸಬಹುದು. ಇದರಿಂದ ಉತ್ತಮ ಜೀವನ ರೂಪಿಸಿಕೊಳ್ಳಲು ಸಾಧ್ಯವಿಲ್ಲ. ಹಾಗಾಗಿ ರಂಗಭೂಮಿ ಆಧಾರಿತ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಈಗಾಗಲೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರಂಗಭೂಮಿ ಶಿಕ್ಷಣಕ್ಕೆ ಆದ್ಯತೆ ನೀಡಿರುವುದು ಸಂತಸದ ವಿಷಯ ಎಂದರು.

ರಂಗಭೂಮಿ ಎಲ್ಲವನ್ನೂ, ಎಲ್ಲರನ್ನೂ ಒಳಗೊಳ್ಳುತ್ತವೆ. ಶಾಸ್ತ್ರೀಯ ಸಂಗೀತ, ಸಾಹಿತ್ಯ, ಚಿತ್ರಕಲೆ, ವಿಮರ್ಶೆ, ವಸ್ತ್ರವಿನ್ಯಾಸ ಸೇರಿದಂತೆ ಎಲ್ಲಾ ಆಯಾಮಗಳನ್ನು ಒಳಗೊಳ್ಳುತ್ತದೆ. ಹಾಗಾಗಿ ಕಾಲೇಜು ಯುವಕ, ಯುವತಿಯರು ರಂಗಭೂಮಿಯಲ್ಲಿ ತೊಡಗಿಸಿಕೊಂಡು ದೇಶಕ್ಕೆ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಿ ಎಂದು ಸಲಹೆ ನೀಡಿದರು.

ಹಲವು ವರ್ಷಗಳ ಹಿಂದೆ ಜೆಎಸ್‌ಎಸ್ ಮಹಿಳಾ ಕಾಲೇಜು ಆವರಣದಲ್ಲಿರುವ ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದೆ. ಹಿರಿಯ ಶ್ರೀಗಳಾದ ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅನೇಕ ಬಾರಿ ಆಶೀರ್ವಾದವನ್ನು ಪಡೆದಿದ್ದೇನೆ. ಅವರ ದೂರದೃಷ್ಟಿ ಫಲವಾಗಿ, ಮೈಸೂರು ಶಿಕ್ಷಣಕ್ಷೇತ್ರಕ್ಕೆ ಸುತ್ತೂರು ಮಠ ತನ್ನದೇ ಆದ ಕೊಡುಗೆ ನೀಡುತ್ತಿದೆ. ನಾನು ಸಾರ್ವಜನಿಕವಾಗಿ ಜೆಎಸ್‌ಎಸ್ ವಿದ್ಯಾರ್ಥಿ ಎಂದು ಹೇಳಲು ಹೆಮ್ಮೆ ಎನ್ನಿಸುತ್ತಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ವನ್ಯಜೀವಿ ಛಾಯಾಗ್ರಾಹಕ ಡಾ.ಲೋಕೇಶ್ ಮೊಸಳೆ, ನಾನು, ಪ್ರಸಾದ್ ಕುಂದೂರು ಒಂದೇ ಕಾಲೇಜು ವಿದ್ಯಾರ್ಥಿಗಳು. ಕಾಲೇಜು ದಿನಗಳಲ್ಲಿ ನಾಟಕದಲ್ಲಿ ಪಾತ್ರ ಮಾಡುವಾಗ ನನಗೆ ನಾಟಕದ ಡೈಲಾಂಗ್ ಹೇಳಲು ಬರುತ್ತಿರಲಿಲ್ಲ. ಆದರೆ, ಹಲವು ಸಲ ಪ್ರಾಕ್ಟೀಸ್ ಮಾಡಿ ಡೈಲಾಂಗ್ ಹೇಳುತ್ತಿದ್ದೆ. ಆ ದಿನಗಳಲ್ಲಿ ರಂಗಭೂಮಿಯಲ್ಲಿ ತೊಡಗಿಸಿಕೊಂಡ ಹಿನ್ನಲೆಯಲ್ಲಿ ನನ್ನಲ್ಲಿ ತಾಳ್ಮೆ, ಸಹನೆ ಮೂಡಲು ಸಾಧ್ಯವಾಯಿತು ಎಂದರು.

ಕಾರ್ಯಕ್ರಮದ ನಂತರ ಡಾ.ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ರಚಿತ, ಶಕುಂತಲಾ ಹೆಗಡೆ ನಿರ್ದೇಶನದ, ಗುಂಡ್ಲುಪೇಟೆ ಜೆಎಸ್‌ಎಸ್ ಪದವಿ ಕಾಲೇಜಿನ ವಿದ್ಯಾರ್ಥಿಗಳು ಅಭಿನಯಿಸಿರುವ 'ಜಂಗಮದಡೆಗೆ' ನಾಟಕ ಪ್ರದರ್ಶಿಸಿದರು. ರಂಗದ ಮೇಲೆ ರಾಜೇಶ್ವರಿ, ಸಿಂಧೂ, ಎಂ.ಮಧುಶ್ರೀ, ಎಸ್.ಮಹಾದೇವಮ್ಮ, ಪಿ.ರಂಜಿತ, ಕೆ.ದೊಡ್ಡಮ್ಮ, ಎನ್.ಎಂ.ಶಿವರತ್ನ, ಎಂ.ಗೌರಮ್ಮ, ಬಿ.ಉಷಾ, ವೈ.ನಾಗಶ್ರೀ, ದೇವಮಣಿ, ಎಸ್.ಕೆ.ಸೌಮ್ಯ, ಸಂಜನ, ಜಯಲಕ್ಷ್ಮಿ, ನಾಗಮಣಿ, ಬಿ.ಮಂಜುಳ ಅಭಿನಯಿಸಿ ಪ್ರೇಕ್ಷಕರ ಚಪ್ಪಾಳೆ ಗಿಟ್ಟಿಸಿದರು. ಈ ವೇದಿಕೆಯಲ್ಲಿ ರಾಜ್ಯೋತ್ಸವ ಪುರಸ್ಕೃತರಾದ ಸರಸ್ವತಿ ಜುಲೇಖಾ ಬೇಗಂ ಇತರರು ಉಪಸ್ಥಿತರಿದ್ದರು.

ಡಿ.8ರಂದು ಭಗವದ್ಗೀತಾ ಗಾಯನ, ಭಾಷಣ ಸ್ಪರ್ಧೆ

ಮೈಸೂರು, ನ.22–ಮೈಸೂರಿನ ಸ್ವರ್ಣವಲ್ಲೀ ಸೇವಾ ಪ್ರತಿಷ್ಠಾನದ ವತಿಯಿಂದ ಜಿಲ್ಲೆಯ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಡಿ.8 ರಂದು ಬೆಳಗ್ಗೆ 10 ಗಂಟೆಗೆ ಕುವೆಂಪುನಗರದ ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘದ ಆವರಣ ದಲ್ಲಿ ಭಗವದ್ಗೀತಾ ಗಾಯನ, ಭಗವದ್ಗೀತೆ ಕುರಿತು ಭಾಷಣ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ನೋಂದಣಿಗೆ ಡಿ.4 ಕೊನೆ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ಮೊ. 9341464106, 9448938266 ಸಂಪರ್ಕಿಸಬಹುದು.

ನಕ್ಕರೆ ಅದೇ ಸ್ವರ್ಗ

ಶಿಕ್ಷಕ : ಗಾಳಿಪಟ ಎಷ್ಟೇ ದೂರ ಹೋದರೂ ದಾರ ನಮ್ಮ ಕೈಯ್ಯಲ್ಲೇ ಇರುತ್ತದೆ. ಇದಕ್ಕೆ ಒಂದು ಉದಾಹರಣೆ ಕೊಡು?

ವಿದ್ಯಾರ್ಥಿ : ಮೆಸೇಜ್ ಎಷ್ಟೇ ದೂರ ಹೋದರೂ ಮೊಬೈಲ್ ನಮ್ಮ ಕೈಯಲ್ಲೇ ಇರುತ್ತದೆ.

ಮೈಸೂರು ಮಿತ್ರ

ಶನಿವಾರ, 23 ನವೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಎಲ್ಲರನ್ನೂ ಮೆಚ್ಚಿಸಲು ಯತ್ನಿಸುವವನು ಯಾರನ್ನೂ ಮೆಚ್ಚಿಸುವುದಿಲ್ಲ.

–ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಣದಷ್ಟು ಮಾತಿಗಿಂತ ಕಣದಷ್ಟು ಕೆಲಸ ಲೇಸು.

ನಿಮ್ಮ ಪತ್ರಗಳು

■ ಕನಕದಾಸನಗರ 'ಬಿ' ಬ್ಲಾಕ್‌ನ ಉದ್ಯಾನವನ ಅಭಿವೃದ್ಧಿಪಡಿಸಿ



ಮಾನ್ಯರೆ,

ಮೈಸೂರಿನ ದಟ್ಟಗಳ್ಳಿ 3ನೇ ಹಂತ ಕನಕದಾಸನಗರದ ಬಿ ಬ್ಲಾಕ್‌ನಲ್ಲಿರುವ ಉದ್ಯಾನವನ ಸ್ವಚ್ಛತೆ ಇಲ್ಲದೆ ಹಾಗೂ ಯಾವುದೇ ಅಭಿವೃದ್ಧಿ ಕಾಣದೆ ಅನಾಥವಾಗಿದೆ. ಪಾರ್ಕಿನಾದ್ಯಂತ ಗಿಡಗಂಟಿಗಳು, ಮುಟ್ಟಿದರೆ ಮುನಿಯಂತಹ ಮುಳ್ಳು ಗಿಡಗಳು ಬೆಳೆದಿದ್ದು, ಹಾವು, ಕಾಡು ಪ್ರಾಣಿಗಳ ಆವಾಸ ಸ್ಥಾನದಂತಿದೆ. ಇಲ್ಲಿ ನಿತ್ಯ ಬೆಳಗ್ಗೆ ಹಾಗೂ ಸಂಜೆ ಹಿರಿಯ ನಾಗರೀಕರು, ಮಹಿಳೆಯರು ವಿಹಾರಕ್ಕೆ, ವ್ಯಾಯಾಮಕ್ಕೆ ಬರುತ್ತಾರೆ. ಆದರೆ ಗಿಡಗಂಟಿಗಳು ಬೆಳೆದಿರು ವುದರಿಂದ ಮಕ್ಕಳು ಅಟವಾಡಲು ಒಳಗೆ ಬರಲು ಹೆದರುತ್ತಾರೆ.

ಉದ್ಯಾನವನ ಸ್ವಚ್ಛಗೊಳಿಸಲು ಕೋರಿ ಮುಡಾದವರಿಗೆ ಹೇಳಿದರೆ ಅವರು ನಗರ ಪಾಲಿಕೆಯವರಿಗೆ ಹೇಳಿ ಎನ್ನುತ್ತಾರೆ. ನಗರ ಪಾಲಿಕೆಯವರಿಗೆ ಹೇಳಿದರೆ ಸ್ವಚ್ಛಗೊಳಿಸಲು ಅನುದಾನ ಇಲ್ಲ ಎನ್ನುವ ಉತ್ತರ ಬರುತ್ತದೆ. ಇದರಿಂದ ಬೇಸತ್ತು ನಿತ್ಯ ವಾಕಿಂಗ್‌ಗೆ ಬರುವ ಕೆಲ ಹಿರಿಯ ನಾಗರಿಕ ಮಹಿಳೆಯರೇ ಸ್ವಂತ ಹಣ ಕೊಟ್ಟು ವಾಕಿಂಗ್ ಪಾತ್ ಅನ್ನು ಸ್ವಚ್ಛಗೊಳಿಸಿಕೊಂಡಿದ್ದಾರೆ.

ಅಲ್ಲದೆ ಪಾರ್ಕ್‌ನಲ್ಲಿ ಕುಳಿತು ವಿಶ್ರಾಂತಿ ಪಡೆಯಲು ಯಾವುದೇ ಕುರ್ಚಿ, ಬೆಂಚ್‌ಗಳ ವ್ಯವಸ್ಥೆ ಮಾಡಿಲ್ಲ. ವಾಕ್ ಮಾಡಿ ನಂತರ ಆಯಾಸ ಪರಿಹರಿಸಿಕೊಳ್ಳಲು ಸೂಕ್ತ ವ್ಯವಸ್ಥೆ ಇಲ್ಲ. ವಾಕ್ ಮಾಡಿ ಆಯಾಸದಿಂದ ಮಹಿಳೆಯರು ವ್ಯಾಯಾಮಕ್ಕೆ ಅಳವಡಿಸಿರು ಸಲಕರಣೆಗಳ ಮೇಲೆ ಕುಳಿತುಕೊಳ್ಳುತ್ತಾರೆ. ಇದರಿಂದ ಜಿಮ್ ಪರಿಕರಗಳಿಗೆ ಹಾನಿಯಾಗುತ್ತದೆ.

ಆದ್ದರಿಂದ ನಗರ ಪಾಲಿಕೆ ಆಯುಕ್ತರು ಪಾರ್ಕ್‌ನ ಗಿಡಗಂಟಿಗಳ ಸ್ವಚ್ಛಗೊಳಿಸಿ ಹಾಗೂ ಪಾರ್ಕ್‌ನಲ್ಲಿ ಕಲ್ಲು ಬೆಂಚ್, ಕುರ್ಚಿಗಳನ್ನು ಹಾಕಿಸಿ ವಿಶ್ರಾಂತಿ ಪಡೆಯಲು ಅನುಕೂಲ ಮಾಡಿಕೊಡಬೇಕೆಂದು ಮನವಿ.

–ಬಿ.ಎನ್.ಮಧುಸೂದನ್, ಎಂ ಎನ್ ನಾಗರಾಜು ಮುಳ್ಳೂರು, ಎಂ ಮಧು, ಹಿರಿಯ ನಾಗರಿಕರು

■ ಪಾರ್ಕಿಂಗ್ ಸಮಸ್ಯೆ ಸರಿಪಡಿಸಿ

ಮಾನ್ಯರೆ,



ಸಾಂಸ್ಕೃತಿಕ ನಗರಿ ಮೈಸೂರು ಇಂದು ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಒಂದಾಗಿದೆ. ಜೊತೆಗೆ ಜನಸಂಖ್ಯೆ ಏರಿಕೆಯಾಗುತ್ತಿರುವ ಕಾರಣ ನಗರೀಕರಣ, ಕೈಗಾರಿಕೆ, ಸಾರಿಗೆ ಎಲ್ಲವೂ ಬೆಳೆಯುತ್ತಿದೆ. ಮೈಸೂರಿನ ಪ್ರಮುಖ ರಸ್ತೆಗಳಾದ ಜೆ.ಪಿ.ನಗರ, ಕುವೆಂಪುನಗರ, ಬೆಮೆಲ್ ನಗರ, ವಿಜಯನಗರ, ಬಲ್ಲಾಳ್ ವೃತ್ತ, ಸೂರ್ಯ ಬೇಕರಿ ವೃತ್ತ, ಬಸವನಗುಡಿ, ವಿಶ್ವಮಾನವ ಡಬಲ್ ರಸ್ತೆ ಸೇರಿದಂತೆ ಇನ್ನಿತರ ಪ್ರಮುಖ ರಸ್ತೆಗಳಲ್ಲಿ ಸಮರ್ಪಕವಾದ ಪಾರ್ಕಿಂಗ್ ವ್ಯವಸ್ಥೆ ಇಲ್ಲದೇ, ವಾಹನಗಳನ್ನು ಅಡ್ಡಾದಿಡ್ಡಿ ಪಾರ್ಕ್ ಮಾಡಲಾಗುತ್ತಿದೆ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು ಅಪಘಾತಗಳು ಸಂಭವಿಸುವ ಸಾಧ್ಯತೆ ಇದೆ. ಮಹಿಳೆಯರಿಗೆ, ಹಿರಿಯ ನಾಗರಿಕರಿಗೆ, ಶಾಲಾ ಕಾಲೇಜು ವಿದ್ಯಾರ್ಥಿಗಳು ಓಡಾಡಲು ಕಷ್ಟವಾಗುತ್ತಿದೆ. ಆದ್ದರಿಂದ ಮೈಸೂರು ನಗರ ಪೊಲೀಸ್ ಆಯುಕ್ತರು, ಟ್ರಾಫಿಕ್ ಸಮಸ್ಯೆಗೆ ಸಂಬಂಧಪಟ್ಟ ಉನ್ನತ ಪೊಲೀಸ್ ಅಧಿಕಾರಿಗಳು, ನಗರದ ಟ್ರಾಫಿಕ್ ಸಮಸ್ಯೆಗೆ ಪರಿಹಾರ ನೀಡುವ ನಿಟ್ಟಿನಲ್ಲಿ ಮೈಸೂರಿನ ದೇವರಾಜ ಅರಸು ರಸ್ತೆಯಲ್ಲಿ ಒಂದು ಕಡೆ ದ್ವಿಚಕ್ರ, ಮತ್ತೊಂದು ಕಡೆ ನಾಲ್ಕು ಚಕ್ರದ ವಾಹನಗಳನ್ನು ನಿಲ್ಲಿಸಲು ಬಿಳಿ ಬಣ್ಣದಲ್ಲಿ ಗೆರೆಗಳನ್ನು ಹಾಕಿರುವಂತೆ ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಗೆರೆ ಹಾಕಿಜಾಗ ನಿಗದಿ ಪಡಿಸಿದರೆ, ಅನೇಕ ರೀತಿಯ ಟ್ರಾಫಿಕ್ ಸಮಸ್ಯೆಗಳ ಬಗೆಹರಿಸ ಬಹುದಾಗಿದೆ. ಆದ್ದರಿಂದ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಮುಂದಾಗಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

■ ಮತಗಟ್ಟೆಗಳ ಸಮೀಕ್ಷೆಗಳ ಅಗತ್ಯವೇನು?

ಮಾನ್ಯರೆ,

ಇತ್ತೀಚೆಗೆ ನಡೆದ ಮಹಾರಾಷ್ಟ್ರ, ಜಾರ್ಖಂಡ್ ರಾಜ್ಯ ವಿಧಾನಸಭಾ ಚುನಾವಣೆಗಳ ಫಲಿತಾಂಶಕ್ಕೆ ಸಂಬಂಧಿಸಿದಂತೆ ಮತಗಟ್ಟೆಗಳ ಸಮೀಕ್ಷೆ (Exit Poll) ಪ್ರಕಟವಾಗಿವೆ. ಈ ಸಮೀಕ್ಷೆಗಳ ಪ್ರಕಾರ, ಮೇಲೆ ಹೇಳಲಾದ ಎರಡೂ ರಾಜ್ಯಗಳಲ್ಲಿ ಕೂಡ ಭಾರತೀಯ ಜನತಾ ಪಕ್ಷ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಅಧಿಕಾರಕ್ಕೆ ಬರಲಿದೆ. 2023ರಲ್ಲಿ ರಾಜ್ಯ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದ ಹಾಗೆ ನಡೆದ ಮತಗಟ್ಟೆ ಸಮೀಕ್ಷೆಗಳು ಹಾಗೂ ಲೋಕಸಭಾ ಚುನಾವಣೆಯ ಫಲಿತಾಂಶಗಳು ಸಹ, ಮತದಾನೋತ್ತರ ಸಮೀಕ್ಷೆಗಳು ತುಂಬಾ ವಿಶ್ವಾಸಾರ್ಹವಲ್ಲ ಎಂಬುದನ್ನು ಸಾಬೀತುಪಡಿಸಿವೆ. ಅನೇಕ ರಾಜ್ಯಗಳಲ್ಲಿ ನಡೆಯುತ್ತಿರುವ ಮತದಾನೋತ್ತರ ಸಮೀಕ್ಷೆಗಳಿಗೂ ನಿಜವಾಗಿ ಹೊರಬರುತ್ತಿರುವ ಫಲಿತಾಂಶಗಳಿಗೂ ಸಾಕಷ್ಟು ವ್ಯತ್ಯಾಸಗಳಿವೆ. ಮತದಾನೋತ್ತರ ಸಮೀಕ್ಷೆ ನೂರಕ್ಕೆ ನೂರರಷ್ಟು ನಿಜವಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಇಂತಹ ಪರಿಸ್ಥಿತಿಯಲ್ಲಿ ಸಮೀಕ್ಷೆಗಳ ಅಗತ್ಯವಾದರೂ ಏನು?

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು, 9341731661

ಒಂದೆಡೆ ಕಂಡ ಕಂಡವರಿಗೆ ಇದ್ದಬದ್ದ ಸೈಟ್‌ಗಳನೆಲ್ಲಾ ಬರೆದುಕೊಟ್ಟಿದ್ದಾಯಿತು... ಈಗ

ಹೆಬ್ಬಾಳಲ್ಲಿನ ತನ್ನ ಕಲ್ಯಾಣ ಮಂಟಪದ ಗುತ್ತಿಗೆ ಬಾಕಿ 64,11 ಲಕ್ಷಕ್ಕೂ ಎಳ್ಳು–ನೀರು ಬಿಟ್ಟ ಮುಡಾ!

ಗುತ್ತಿಗೆದಾರನಿಂದ ಬಾಕಿ ವಸೂಲಿ ಮಾಡದೇ ಹೊಸದಾಗಿ ಟೆಂಡರ್ ಕರೆದ ಜಾಣ ಅಧಿಕಾರಿಗಳು

ಎಸ್.ಟಿ.ರವಿಕುಮಾರ್

ಮೈಸೂರು, ನ.22–ಶೇ.50:50ರ ಅನುಪಾತ, ಪ್ರೋತ್ಸಾಹದಾಯಕ ಯೋಜನೆಯಡಿ ಹಾಗೂ ಬದಲಿಯಾಗಿ ನಿಯಮ ಉಲ್ಲಂಘಿಸಿ ಅಕ್ರಮವಾಗಿ ಕಂಡ ಕಂಡಲ್ಲಿ ಕೋಟ್ಯಾಂತರ ರೂ. ಬೆಲೆ ಬಾಳುವ ನಿವೇಶನಗಳನ್ನು ಮಂಜೂರು ಮಾಡಿರುವ ಹಗರಣದ ತನಿಖೆ ಪ್ರಗತಿಯಲ್ಲಿರುವಾಗಲೇ ಮುಡಾ ಆಸ್ತಿಯಿಂದ ಬರಬೇಕಿದ್ದ ಬಾಕಿ 64,11,472 ರೂ. ಗುತ್ತಿಗೆ ಹಣ ವಸೂಲಿ ಮಾಡದೇ ಅಧಿಕಾರಿಗಳು ಕೈ ಚೆಲ್ಲಿರುವುದು ಬಯಲಾಗಿದೆ.

ಈ ಹಿಂದೆ ಹೆಬ್ಬಾಳು 2ನೇ ಹಂತದ ರಿಂಗ್ ರಸ್ತೆ ಸಮೀಪ ಡಾ.ಅಂಬರೀಷ್ ರಸ್ತೆಯಲ್ಲಿ ಅಂದಿನ ನಗರ ಅಭಿವೃದ್ಧಿ ವಿಶ್ವಸ್ಥ ಮಂಡಳಿ (City Improvement Trust Board) ನಿರ್ಮಿಸಿದ್ದ ಸಿಐಟಿಬಿ ಕಲ್ಯಾಣ ಮಂಟಪದ ಆವರಣದ ಖಾಲಿ ಜಾಗದಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ವು ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರಲ್ಲಿ ಸುಸಜ್ಜಿತ ಕನ್ವೆನ್ಷನ್ ಹಾಲ್ ಕಟ್ಟಡ ನಿರ್ಮಿಸಿದೆ.



ಮೈಸೂರಿನ ಹೆಬ್ಬಾಳಿನಲ್ಲಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಕನ್ವೆನ್ಷನ್ ಹಾಲ್

ಪೂರ್ವಾಭಿಮುಖವಾಗಿರುವ ಈ ಕಲ್ಯಾಣ ಮಂಟಪದಲ್ಲಿ ವಿವಾಹ, ನಿಶ್ಚಿತಾರ್ಥಗಳಂತಹ ಶುಭ ಸಮಾರಂಭಗಳನ್ನು ಮಾಡಲು ಸಾರ್ವಜನಿಕರಿಂದ ಉತ್ತಮ ಬೇಡಿಕೆ ಬರುತ್ತಿದ್ದರೂ, ಈ ಕನ್ವೆನ್ಷನ್ ಹಾಲ್ ಅನ್ನು ತಾನೇ ಬಾಡಿಗೆಗೆ ನೀಡಿ, ನಿರ್ವಹಣೆ ಮಾಡುವ ಬದಲು ಮುಡಾ ಅಧಿಕಾರಿಗಳು ವಾರ್ಷಿಕ ದರ ನಿಗದಿಪಡಿಸಿ ಐದು ವರ್ಷಗಳ ಅವಧಿಗೆ ಗುತ್ತಿಗೆ ನೀಡಿದ್ದರು.

2018ರ ಅಕ್ಟೋಬರ್ 25ರಂದು ವರ್ಷಕ್ಕೆ 36 ಲಕ್ಷ ರೂ. ನಿಗದಿಪಡಿಸಿ ಬೆಂಗಳೂರಿನ ಬಿಟಿಎಂ ಲೇಔಟ್ 1ನೇ ಹಂತ ತಾವರೆಕೆರೆ ರಸ್ತೆಯ 7ನೇ 'ಎ' ಕ್ರಾಸ್‌ನ ಮೆ। ಸರ್ಕಾರ ಕನ್‌ಸ್ಟ್ರಕ್ಷನ್ಸ್‌ನ ಎಸ್.ಸಿದ್ದರಾಜಪ್ಪ ಎಂಬುವರಿಗೆ 5 ವರ್ಷದ ಅವಧಿಗೆ ಗುತ್ತಿಗೆ ನೀಡಲಾಗಿತ್ತು. ಒಪ್ಪಂದದಂತೆ ಕಾರ್ಯಾದೇಶದೊಂದಿಗೆ ವಿದ್ಯುತ್, ಒಳ ಚರಂಡಿ, ಕುಡಿಯುವ ನೀರಿನ ಸಂಪರ್ಕ, ಸೋಲಾರ್ ವ್ಯವಸ್ಥೆ, ತಲಾ 50,000 ರೂ. ಬೆಲೆಯ 10 ಹೆವಿ ಡ್ಯೂಟಿ ಇಂಡಸ್ಟ್ರಿಯಲ್ ಫ್ಯಾನ್‌ಗಳ ಸಮೇತ ಗುತ್ತಿಗೆದಾರನಿಗೆ ಕನ್ವೆನ್ಷನ್ ಹಾಲ್ ಒಪ್ಪಿಸಲಾಗಿತ್ತು.

1.5 ಲಕ್ಷ ರೂ. ಬಾಡಿಗೆ: ವರ್ಷಕ್ಕೆ ಕೇವಲ 36 ಲಕ್ಷ ರೂ. ಗುತ್ತಿಗೆ ಹಣವನ್ನು ಮುಡಾಗೆ ಪಾವತಿಸಿ ಮದುವೆ ಸಮಾರಂಭಕ್ಕೆ 1.5 ಲಕ್ಷ ರೂ. ಬಾಡಿಗೆ ಪಡೆಯುತ್ತಿದ್ದ ಸಿದ್ದರಾಜಪ್ಪ, ಕನ್‌ವೆನ್ಷನ್ ಹಾಲ್‌ನ ವಿದ್ಯುತ್, ನೀರು, ಒಳಚರಂಡಿ ಶುಲ್ಕ ತಾನೇ ಪಾವತಿಸಿ ನಿರ್ವಹಣೆ ಮಾಡುತ್ತಿದ್ದರು. ಅಡುಗೆ ಪಾತ್ರೆ, ಗ್ಯಾಸ್, ಡೈನಿಂಗ್ ಹಾಲ್ ಪೀಠೋಪಕರಣಗಳನ್ನು ಗುತ್ತಿಗೆದಾರನೇ ಪೂರೈಸಿದ್ದರು.

ವರ್ಷದಲ್ಲಿ ಬಹುತೇಕ ದಿನ ವಿವಾಹ ಮಹೋತ್ಸವಗಳು ಬಿಡುವಿಲ್ಲದಂತೆ ನಿರಂತರವಾಗಿ ನಡೆಯುತ್ತಿದ್ದವು. ಬಾಕಿ ದಿನಗಳಲ್ಲಿ ಸೇಲ್ ಮೇಳಕ್ಕೆ ದಿನದ ಲೆಕ್ಕದಲ್ಲಿ ಹಾಲ್ ಅನ್ನು ಬಾಡಿಗೆಗೆ ನೀಡಿ ಆದಾಯ ಮಾಡಿಕೊಳ್ಳುತ್ತಿದ್ದ.

64,11,472 ರೂ. ಖೋತಾ: ನಿರಂತರವಾಗಿ ಸಂಪಾದಿಸಿದರೂ ಕೊರೊನಾ ನೆಪ ಹೇಳಿ 1 ವರ್ಷ ಕಾಲ ಹೆಚ್ಚುವರಿ ಗುತ್ತಿಗೆ ಅವಧಿಯನ್ನು ವಿಸ್ತರಿಸಿಕೊಂಡಿದ್ದ ಸಿದ್ದ ರಾಜಪ್ಪ ಅದರಂತೆ 2024ರ ಮಾರ್ಚ್ 6ಕ್ಕೆ ಅವಧಿ ಮುಗಿದಿದೆ. ಆದರೆ ಆತ ಮುಡಾಗೆ 64,11,472 ರೂ. ಗುತ್ತಿಗೆ ಹಣ ಪಾವತಿಸದೇ ಬಾಕಿ ಉಳಿಸಿಕೊಂಡಿದ್ದಾರೆ.

ನೋಟಿಸ್‌ಗೂ ಕ್ಯಾರೇ ಅನ್ನಲಿಲ್ಲ: ಬಾಕಿ ಗುತ್ತಿಗೆ ಹಣ ಪಾವತಿಸುವಂತೆ ಹಿಂದಿನ ಮುಡಾ ಕಾರ್ಯದರ್ಶಿ ಜಿ.ಡಿ. ಶೇಖರ್ 2024ರ ಮಾಚ್ 20 ಮತ್ತು ಜೂನ್ 5ರಂದು ಎರಡು ನೋಟಿಸ್ ಜಾರಿ ಮಾಡಿದರೂ ಕ್ಯಾರೇ ಅನ್ನದ ಮೆ। ಸರ್ಕಾರ ಕನ್‌ಸ್ಟ್ರಕ್ಷನ್‌ನ ಎಸ್.ಸಿದ್ದರಾಜಪ್ಪ, ಕಾಲಾವಕಾಶ ಕೋರಿ ಸಲ್ಲಿಸಿದ್ದ ರಿಟ್ ಪಿಟೀಷನ್ ಅನ್ನು ನ್ಯಾಯಾಲಯ ವಜಾ ಮಾಡಿದೆಯಾದರೂ, ಹಣ ಪಾವತಿಸಲಿಲ್ಲ.

10 ಫ್ಯಾನ್‌ಗಳೂ ನಾಪತ್ತೆ: ಗುತ್ತಿಗೆ ಬಾಕಿ ಹಣವನ್ನು ಪಾವತಿಸಲು ವಿಫಲರಾದ ಗುತ್ತಿಗೆದಾರನಿಂದ ಕನ್‌ವೆನ್ಷನ್ ಹಾಲ್ ಅನ್ನು ಮುಡಾ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಆದರೆ, ಹಾಲ್‌ನಲ್ಲಿ ಅಳವಡಿಸಿದ್ದ ತಲಾ 50,000 ರೂ. ಬೆಲೆ ಬಾಳುವ 10 ಹೆವಿಡ್ಯೂಟಿ ಇಂಡಸ್ಟ್ರಿಯಲ್ ಫ್ಯಾನ್‌ಗಳು ನಾಪತ್ತೆಯಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೊಸದಾಗಿ ಟೆಂಡರ್ ಆಹ್ವಾನ: ಹಳೇ ಗುತ್ತಿಗೆದಾರನಿಂದ 64,11,472 ರೂ. ಬಾಕಿ ವಸೂಲು ಮಾಡುವುದನ್ನು ಕೈಬಿಟ್ಟಿರುವ ಮುಡಾ ಅಧಿಕಾರಿಗಳು, ಫ್ಯಾನ್‌ಗಳು, ಇನ್ನಿತರೆ ಪದಾರ್ಥ ನಾಪತ್ತೆಯಾಗಿದ್ದರೂ ಕ್ರಮ ವಹಿಸಲು ಮುಂದಾಗಿಲ್ಲ. ಅಗ್ರಿಮೆಂಟ್‌ನಲ್ಲಿ ಯಾವ ಯಾವ ಸಲಕರಣೆಗಳಿದ್ದವು ಎಂಬು ದನ್ನೇ ನಮೂದಿಸದಿರುವುದು ಕಾನೂನು ಹೋರಾಟ ಮಾಡಲು ಅಡ್ಡಿಯಾಗಿದೆ ಎಂದು ಕಾನೂನು ಸಲಹೆಗಾರರು ತಿಳಿಸಿದ್ದಾರೆ. ಇದೀಗ ಮುಡಾ ಅಧೀಕ್ಷಕ ಇಂಜಿನಿಯರ್ ನಾಲ್ವಡಿ ಕೃಷ್ಣರಾಜ ಒಡೆಯರ್ ಕನವೆನ್ಷನ್ ಹಾಲ್ ಅನ್ನು 5 ವರ್ಷಗಳ ಅವಧಿಗೆ ಮತ್ತೆ ಗುತ್ತಿಗೆ ನೀಡಲು (ವರ್ಷಕ್ಕೆ ಕನಿಷ್ಠ 40 ಲಕ್ಷ ರೂ.) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಸಕ್ತರಿಂದ ಗುತ್ತಿಗೆ ಟೆಂಡರ್ ಆಹ್ವಾನಿಸಿದ್ದಾರೆ.

> "ಕಲ್ಯಾಣ ಮಂಟಪದ ಬಾಡಿಗೆ ಬಾಕಿಯನ್ನು ಪಾವತಿಸುವಂತೆ ಗುತ್ತಿಗೆದಾರರಿಗೆ ಮುಡಾದಿಂದ ನೀಡಿದ್ದ ನೋಟಿಸ್‌ಗೆ ಆತ ಸ್ಪಂದಿಸಿರಲಿಲ್ಲ. ಹೀಗಾಗಿ ಕಲ್ಯಾಣ ಮಂಪವನ್ನು ವಶಕ್ಕೆ ಪಡೆದು, ಟೆಂಡರ್ ಕರೆದಿದ್ದೇವೆ. ಬಾಡಿಗೆ ಹಣ ಬಾಕಿ ವಸೂಲಾತಿಗಾಗಿ ಗುತ್ತಿಗೆದಾರನಿಗೆ ಲೀಗಲ್ ನೋಟಿಸ್ ಕಳುಹಿಸಲಾಗುವುದು.
>
> –ರಘುನಂದನ್, ಮುಡಾ ಆಯುಕ್ತ

ಉಪನ್ಯಾಸಕರು, ದೈಹಿಕ ಶಿಕ್ಷಕರ ಸಮಸ್ಯೆ ವಿಧಾನಮಂಡಲ ಅಧಿವೇಶನದಲ್ಲಿ ಪ್ರಸ್ತಾಪ

ಪರಿಷತ್ ಸದಸ್ಯ ಕೆ.ವಿವೇಕಾನಂದ ಭರವಸೆ



ಮೈಸೂರು ಜಿಲ್ಲಾ ಸರ್ಕಾರಿ, ಅನುದಾನಿತ ಪಿಯು ಉಪನ್ಯಾಸಕರು, ದೈಹಿಕ ಶಿಕ್ಷಕರು ಹಾಗೂ ಬೋಧಕೇತರ ಸಿಬ್ಬಂದಿಯೊಂದಿಗೆ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಶುಕ್ರವಾರ ಸಮಲೋಚನಾ ಸಭೆ ನಡೆಸಿದರು.

ಮೈಸೂರು, ನ.22– ಮೈಸೂರು ಸರ್ಕಾರಿ ಅತಿಥಿಗೃಹದಲ್ಲಿ ಮೈಸೂರು ಜಿಲ್ಲಾ ಸರ್ಕಾರಿ, ಅನುದಾನಿತ ಪಿಯು ಉಪನ್ಯಾಸಕರು, ದೈಹಿಕ ಶಿಕ್ಷಕರು ಹಾಗೂ ಬೋಧಕೇತರ ಸಿಬ್ಬಂದಿಯೊಂದಿಗೆ ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಶುಕ್ರವಾರ ಸಮಲೋಚನಾ ಸಭೆ ನಡೆಸಿದರು.

ಮೈಸೂರು ಜಿಲ್ಲಾ ಸರ್ಕಾರಿ, ಅನುದಾನಿತ ಪಿಯು ಕಾಲೇಜು ಉಪನ್ಯಾಸಕರು, ದೈಹಿಕ ಶಿಕ್ಷಕರು ಮತ್ತು ಬೋಧಕೇತರ ಸಿಬ್ಬಂದಿ ಸಮಸ್ಯೆ ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಶಾಲಾ ಶಿಕ್ಷಣ ಇಲಾಖೆಯೊಂದಿಗೆ ವಿಲೀನಗೊಳಿಸಿದ ಬಳಿಕ ಅಲ್ಲಿನ ಉಪನ್ಯಾಸಕರು ಅನುಭವಿಸುತ್ತಿರುವ ಸಮಸ್ಯೆಗಳನ್ನು ರಾಜ್ಯ ಸರ್ಕಾರದೊಂದಿಗೆ ಮಾತುಕತೆ ಮೂಲಕ ಬಗೆಹರಿಸುವಂತೆ ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಅವರಿಗೆ ಮನವಿ ಮಾಡಿದರು. ಈ ವೇಳೆ ಮಾತನಾಡಿದ ಶಾಸಕ ಕೆ.ವಿವೇಕಾನಂದ, ಅನುದಾನಿತ ಪಿಯು ಕಾಲೇಜಿನ ಉಪನ್ಯಾಸಕರ ನಿಯೋಜನೆ ಸಮಸ್ಯೆ, ಪಿಂಚಣಿ ಸಮಸ್ಯೆ, ಪ್ರೌಢಶಾಲೆಯಿಂದ ಪದವಿಪೂರ್ವ ಕಾಲೇಜುಗಳಿಗೆ ಬಡ್ತಿ ಹೊಂದಿರುವ ಉಪನ್ಯಾಸಕರ ಕಾಲಮಿತಿ ವೇತನ ಬಡ್ತಿಗೆ ಸಂಬಂಧಿಸಿದ ಸಮಸ್ಯೆ ಕುರಿತು ಈ ಬಾರಿ ಅಧಿವೇಶನದಲ್ಲಿ ಸರ್ಕಾರದ ಗಮನ ಸೆಳೆಯುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮೈಸೂರಿನ ವಿವಿಧ ತಾಲೂಕುಗಳಿಂದ ಉಪನ್ಯಾಸಕರ ಪ್ರತಿನಿಧಿಯಾಗಿ ರಾಜ್ಯ ಸರ್ಕಾರಿ ನೌಕರರ ಸಂಘಕ್ಕೆ ನಿರ್ದೇಶಕರಾಗಿ ಆಯ್ಕೆಯಾಗಿರುವ ಮುರುಳಿ, ಪೂರ್ಣಿಮಾ, ನಂದೀಶ್ ಕುಮಾರ್, ಡಾ.ಟಿ.ಕೆ.ರವಿ, ಮಹೇಶ್, ರಾಮಕೃಷ್ಣೇಗೌಡ ಅವರನ್ನು ಶಾಸಕ ಕೆ ವಿವೇಕಾನಂದ ಸನ್ಮಾನಿಸಿದರು.

ಸಭೆಯಲ್ಲಿ ಮೈಸೂರು ಜಿಲ್ಲಾ ಉಪನ್ಯಾಸಕರ ಸಂಘದ ಅಧ್ಯಕ್ಷ ಎಂ.ಎಂ. ಮಹದೇವ, ಖಜಾಂಚಿ ಜಿ.ಬಿ.ಮಹೇಶ್, ಅನುದಾನಿತ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಅಧ್ಯಕ್ಷ ಮಹದೇವ ಸ್ವಾಮಿ, ಎಂ.ಸಿ.ಗಿರೀಶ್, ಎಂ.ಮಹೇಶ್, ಪಿ.ಎಲ್. ಶಿವಕುಮಾರ್, ವಿನೇಶ್, ಪ್ರಸನ್ನ, ಆಲೂರು ಬಸವರಾಜು, ಹೇಮಚಂದ್ರ, ಅಶ್ವಿನಿ, ಹೇಮಾವತಿ, ಸುಮಂಗಳ ಹಕ್ಕಿ, ದಕ್ಷಿಣ ಮೂರ್ತಿ ಹಾಗೂ ಇತರರಿದ್ದರು.

ಗ್ಯಾರಂಟಿಯಿಂದಾಗಿ ಹಿಮಾಚಲ ಪ್ರದೇಶ ಸರ್ಕಾರದ ಬಳಿ ಕರೆಂಟ್ ಬಿಲ್‌ಗೂ ಕಾಸಿಲ್ಲ

ಸರ್ಕಾರದ 18 ಹೋಟೆಲ್ ಬಂದ್; ಒಂದು ಹೋಟೆಲ್ ಜಪ್ತಿಗೆ ಹೈಕೋರ್ಟ್ ಆದೇಶ



ಶಿಮ್ಲಾ, ನ.22– ಜನರಿಗೆ ಉಚಿತ ವಿದ್ಯುತ್ ಸೇರಿ ಹಲವು ಜನಪ್ರಿಯ ಯೋಜನೆ ಜಾರಿ ಬಳಿಕ ಭಾರೀ ಆರ್ಥಿಕ ಸಂಕಷ್ಟದಲ್ಲಿ ಸಿಕ್ಕಿಬಿದ್ದಿರುವ ಹಿಮಾಚಲಪ್ರದೇಶದ ಕಾಂಗ್ರೆಸ್ ಸರ್ಕಾರ ಇದೀಗ ತನ್ನದೇ ಒಡೆತನದ ಹೋಟೆಲ್‌ಗಳ ವಿದ್ಯುತ್ ಬಿಲ್ ಪಾವತಿಸಲೂ ವಿಫಲವಾಗಿದೆ.

ಹೀಗಾಗಿ ಬಿಳಿಯಾನೆಯಂತಾಗಿರುವ ವಿವಿಧೆಡೆ ಇರುವ ರಾಜ್ಯ ಸರ್ಕಾರಿ ಒಡೆತನದ 18 ಹೋಟೆಲ್‌ಗಳನ್ನು ಮುಚ್ಚುವಂತೆ ರಾಜ್ಯ ಹೈಕೋರ್ಟ್ ಆದೇಶಿಸಿದೆ. ಅಲ್ಲದೆ, ವಿದ್ಯುತ್ ಬಿಲ್ ಬಾಕಿ ವಸೂಲಿಗಾಗಿ ಒಂದು ಹೋಟೆಲ್ ಜಪ್ತಿಗೂ ಸೂಚಿಸಿದೆ. ಹಿಮಾಚಲ ಪ್ರದೇಶ ಪ್ರವಾಸೋದ್ಯಮ ಅಭಿವೃದ್ಧಿ ಇಲಾಖೆ ಹಲವು ಹೋಟೆಲ್‌ಗಳನ್ನು ನಿರ್ವಹಣೆ ಮಾಡುತ್ತಿದ್ದು 150 ಕೋಟಿ ರೂ. ವಿದ್ಯುತ್ ಬಿಲ್ ಪಾವತಿ ಮಾಡುವಲ್ಲಿ ವಿಫಲವಾಗಿದೆ. ಈ ಹಿನ್ನೆಲೆಯಲ್ಲಿ ದೆಹಲಿಯಲ್ಲಿರುವ ಹಿಮಾಚಲ್ ಭವನ್ ಹೋಟೆಲ್ ಅನ್ನು ಜಪ್ತಿ ಮಾಡಿ ಅದನ್ನು ಮಾರಾಟ ಮಾಡಲು ಹೈಕೋರ್ಟ್ ಅನುಮತಿ ನೀಡಿದೆ.

ಜೊತೆಗೆ ಪ್ರವಾಸೋದ್ಯಮ ಇಲಾಖೆಯ ವ್ಯಾಪ್ತಿಯ ಬಹುತೇಕ ಹೋಟೆಲ್‌ಗಳು ನಿರ್ವಹಣೆ ಇಲ್ಲದೇ ನಷ್ಟ ಅನುಭವಿಸುತ್ತಿವೆ. ಅವೆಲ್ಲಾ ಬಿಳಿಯಾನೆಯಾಗಿವೆ. ಜನರ ತೆರಿಗೆ ದುಡ್ಡು ಈ ರೀತಿ ಪೋಲಾಗಲು ಬಿಡುವುದು ಸರಿಯಲ್ಲ. ಹೀಗಾಗಿ ಇಲಾಖೆಯ ವ್ಯಾಪ್ತಿಯ 18 ಹೋಟೆಲ್‌ಗಳನ್ನು ನ.25ರೊಳಗೆ ಮುಚ್ಚುವಂತೆ ಹೈಕೋರ್ಟ್ ಸೂಚಿಸಿದೆ.ಹಲವು ಉಚಿತ ಯೋಜನೆ ಜಾರಿಗೊಳಿಸಿದ ಪರಿಣಾಮ ಹಿಮಾಚಲ ಸರ್ಕಾರದ ಸಾಲದ ಮೊತ್ತ 95,000 ಕೋಟಿ ರೂ. ದಾಟಿದೆ. ಸರ್ಕಾರಿ ನೌಕರರು, ಪಿಂಚಣಿದಾರರ ವೇತನ ಪಾವತಿಯಲ್ಲಿ ಪದೇಪದೆ ವಿಳಂಬವಾಗುತ್ತಿದೆ. ಹೀಗಾಗಿ ವೇತನ, ಪಿಂಚಣಿ ಪಾವತಿ ದಿನಾಂಕ ಬದಲಾವಣೆ ಮಾಡಲಾಗಿದೆ. ಜೊತೆಗೆ ಕೆಲ ತಿಂಗಳ ಹಿಂದೆ ಸಿಎಂ, ಸಚಿವರ ವೇತನ ಪಾವತಿಯನ್ನೂ ಮುಂದೂಡಲಾಗಿತ್ತು. ಪಕ್ಷಾಂತರ ಕಾಯ್ದೆಯಡಿ ವಜಾಗೊಂಡ ಶಾಸಕರ ಪಿಂಚಣಿ ಸ್ಥಗಿತಕ್ಕೂ ಸರ್ಕಾರ ನಿರ್ಧರಿಸಿತ್ತು. ಅಲ್ಲದೆ ಉಚಿತ ವಿದ್ಯುತ್ ಪ್ರಮಾಣವನ್ನೂ ಕಡಿತ ಮಾಡಿತ್ತು.

ವಕ್ಫ್ ವಿವಾದ; ರಾಜ್ಯದ ಜನರಲ್ಲಿ ಆತಂಕ: ಮುಖ್ಯಮಂತ್ರಿ ಸಿದ್ದರಾಮಯ್ಯ ಮೌನಕ್ಕೆ ವಿಪಕ್ಷ ನಾಯಕ ಅಶೋಕ್ ಖಂಡನೆ

- ಕಾಂಗ್ರೆಸ್ ಸರ್ಕಾರದಿಂದ ತುಷ್ಟೀಕರಣ ರಾಜಕಾರಣ
- ಲವ್ ಜಿಹಾದ್ ಆಯ್ತು; ಈಗ ಲ್ಯಾಂಡ್ ಜಿಹಾದ್!
- ವಕ್ಫ್ ಮಂಡಳಿಯಿಂದ ರೈತರ ಭೂಮಿ ಕಬಳಿಕೆ ಖಂಡಿಸಿ ಫ್ರೀಡಂಪಾರ್ಕ್‌ನಲ್ಲಿ ಬಿಜೆಪಿ ಧರಣಿ

ಬೆಂಗಳೂರು, ನ.22(ಕೆಎಂಶಿ)– ಕರ್ನಾಟಕದಲ್ಲಿ ವಕ್ಫ್ ವಿವಾದದಿಂದ ಜನರು ಧಂಗೆ ಏಳುವ ಪರಿಸ್ಥಿತಿ ನಿರ್ಮಾಣವಾಗಿದ್ದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಪಿಟೀಲು ಬಾರಿಸಿಕೊಂಡು ಕುಳಿತಿದ್ದಾರೆ ಎಂದು ವಿಧಾನಸಭೆಯಲ್ಲಿನ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಇಂದಿಲ್ಲಿ ಕಟುವಾಗಿ ಟೀಕಿಸಿದ್ದಾರೆ.

ವಕ್ಫ್ ಮಂಡಳಿಯಿಂದ ರೈತರ ಜಮೀನು ಕಬಳಿಕೆ ಖಂಡಿಸಿ ನಗರದ ಫ್ರೀಡಂಪಾರ್ಕ್‌ನಲ್ಲಿ ನಡೆದ ಧರಣಿಯಲ್ಲಿ ಮಾತನಾಡಿದ ಅವರು, ರೈತರ ಜಮೀನು ಕಿತ್ತುಕೊಳ್ಳುವುದು ಕಾಂಗ್ರೆಸ್ ಸಚಿವರಿಗೆ ಸಣ್ಣ ವಿಚಾರ ಎನಿಸಿದೆ ಎಂದರು. ವಕ್ಫ್ ಬೋರ್ಡ್ ವಿವಾದ ಏನೂ ಇಲ್ಲ ಎನ್ನುತ್ತಾರೆ. ಹಾಗಿದ್ದರೆ ಏನೂ ಇಲ್ಲದೆ ರಾಜ್ಯಾದ್ಯಂತ ಹೋರಾಟಗಳು ನಡೆಯುತ್ತಿವೆಯೇ, ಮಠ, ಮಂದಿರಗಳ ಪ್ರಮುಖರೂ ಹೋರಾಟಕ್ಕೆ ಇಳಿದಿದ್ದಾರೆ. ಬಿಜೆಪಿ ಹಾಗೂ ರೈತರು ರಾಜ್ಯಾದ್ಯಂತ ಹೋರಾಟ ನಡೆಸುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಮುಸ್ಲಿಮರ ಓಲೈಕೆ ಮಾಡುತ್ತಾರೆ. ಡಿಜೆ ಹಳ್ಳಿ–ಕೆಜಿ ಹಳ್ಳಿ, ಹುಬ್ಬಳ್ಳಿ ಮೊಕದ್ದಮೆಗಳನ್ನು ವಾಪಸ್ ಪಡೆದಿದ್ದಾರೆ.

ಹಿಂದೂ ಹೆಣ್ಣು ಮಕ್ಕಳನ್ನು ಅಪಹರಿಸುವ ಲವ್ ಜಿಹಾದ್ ಎಂಬ ಹೀನ ಕಾರ್ಯಕ್ಕೆ ಕಾಂಗ್ರೆಸ್ ಕುಮ್ಮಕ್ಕು ಕೊಡುತ್ತಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಇಂತಹ ಪ್ರಕರಣಗಳು ಹೆಚ್ಚಾಗುತ್ತವೆ. ಬಿಜೆಪಿ ಆಡಳಿತದ ವೇಳೆ ಕರ್ನಾಟಕದಲ್ಲಿ



ಒಬ್ಬ ನಕ್ಸಲ್ ಇರಲಿಲ್ಲ, ಈಗ ನಕ್ಸಲರ ಸಮಸ್ಯೆ ಎದುರಾಗಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ನಕ್ಸಲರಿಗೆ ಹಬ್ಬ, ಲವ್ ಜಿಹಾದ್ ಮಾಡುವವರಿಗೆ ಹಬ್ಬ. ಲವ್ ಜಿಹಾದ್ ಆಯ್ತು, ಈಗ ಲ್ಯಾಂಡ್ ಜಿಹಾದ್ ಬಂದಿದೆ. ಶ್ರೀರಂಗಪಟ್ಟಣದಲ್ಲಿ 400 ವರ್ಷ ಹಳೆಯ ದೇವಸ್ಥಾನ ಪ್ರದೇಶದಲ್ಲಿ ಮುಸ್ಲಿಮರ ಮನೆ, ಮಸೀದಿ ಇಲ್ಲ. ಆದರೆ, ದೇವಸ್ಥಾನದ ಪಹಣಿಯಲ್ಲಿ ವಕ್ಫ್ ಬೋರ್ಡ್ ಆಸ್ತಿ ಎಂದು ನಮೂದಿಸಲಾಗಿದೆ. ನಮ್ಮ ಆಸ್ತಿ, ನಮ್ಮ ಹಕ್ಕು ಘೋಷವಾಕ್ಯದಡಿ ಹೋರಾಟ ನಡೆಸುತ್ತಿದ್ದೇವೆ, ನಮ್ಮ ತೆರಿಗೆ ನಮ್ಮ ಹಕ್ಕು ಹೆಸರಿನಲ್ಲಿ ಜಯನಗರದ ಶಾಸಕರೂ ಹೋರಾಟ ಮಾಡುತ್ತಿದ್ದಾರೆ. ಅವರಿಗೆ ಉಪಮುಖ್ಯಮಂತ್ರಿ, 'ತಗ್ಗಿ ಬಗ್ಗಿ ನಡೆಯಬೇಕು' ಎಂಬ ಪಾಳೇಗಾರಿಕೆ ಮಾತು ಆಡುತ್ತಾರೆ ಎಂದರು.


ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ, ಸ್ವಾತಂತ್ರ್ಯ ನಂತರದ ಮೊದಲ ದಿನಗಳಲ್ಲಿದ್ದ 10 ಸಾವಿರ ವಕ್ಫ್ ಆಸ್ತಿ ಈಗ ಸುಮಾರು 9.5 ಲಕ್ಷ ಆಗಿದೆ. 38 ಲಕ್ಷ ಎಕರೆ ಭೂಮಿ ವಕ್ಫ್ ಹೆಸರಿನಲ್ಲಿದೆ. ಇದು ಆತಂಕದ ವಿಚಾರ, ಕಾನೂನುಬಾಹಿರ ಕಾಯ್ದೆಗಳ ಮೂಲಕ ನಮ್ಮ ರೈತರು, ದೇವಸ್ಥಾನ ಹಾಗೂ ಮಠ–ಮಂದಿರಗಳ ಜಾಗವನ್ನು ವಕ್ಫ್ ಆಸ್ತಿಯೆಂದು ಘೋಷಿಸುತ್ತಿರುವುದು ವಿವಾದಕ್ಕೆ ಕಾರಣವಾಗಿದೆ ಎಂದರು.


ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಮಾತನಾಡಿ, ಅಷ್ಟ ಮಠದ ಜಾಗವೂ ವಕ್ಫ್ ಬೋರ್ಡ್‌ಗೆ ಸೇರಿದ್ದು ಎನ್ನುತ್ತಾರೆ. ಆಳಂದ ತಾಲೂಕಿನಲ್ಲಿ ಸಿದ್ದರಾಮಯ್ಯ ಅವರ ಕುಲದೈವ ಬೀರಲಿಂಗೇಶ್ವರ ಗುಡಿ, ಸಾವಿರಾರು ಎಕರೆ ರೈತರ ಜಮೀನು, ಹಿಂದೂಗಳ ಸ್ಮಶಾನವನ್ನೂ ವಕ್ಫ್‌ಗೆ ಸೇರಿದ್ದು ಎನ್ನುತ್ತಿದ್ದಾರೆ ಎಂದು ದೂರಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ರಂಗನತಿಟ್ಟಿನಲ್ಲಿ ವಲಸೆ ಪಕ್ಷಿಗಳ ಕಲರವ

72 ಬಗೆಯ 3300ಕ್ಕೂ ಹೆಚ್ಚು ಪಕ್ಷಿಗಳು ಬಿಡಾರ











ಮೈಸೂರು, ನ.22(ಎಂಟಿವೈ)– ಶ್ರೀರಂಗಪಟ್ಟಣ ತಾಲೂಕಿನ ರಂಗನತಿಟ್ಟು ಪಕ್ಷಿಧಾಮಕ್ಕೆ ವಲಸೆ ಪಕ್ಷಿಗಳ ಆಗಮನವಾಗಿದ್ದು, ಇತ್ತೀಚೆಗೆ ನಡೆಸಿದ ಪಕ್ಷಿ ಗಣತಿಯಲ್ಲಿ 72 ಬಗೆಯ ಪಕ್ಷಿಗಳು ಗೋಚರಿಸಿದ್ದು ಪ್ರವಾಸಿಗರನ್ನು ಸೆಳೆಯುತ್ತಿವೆ.

ರಾಜ್ಯದ ಮೊಟ್ಟ ಮೊದಲ ರಾಮ್‌ಸರ್ ಸೈಟ್‌ಗೆ ಸೇರಿದ ಪಕ್ಷಿಧಾಮ ಎಂಬ ಹೆಗ್ಗಳಿಕೆಯ ಶ್ರೀರಂಗಪಟ್ಟಣ ತಾಲೂಕಿನ ರಂಗನತಿಟ್ಟು ಪಕ್ಷಿಧಾಮದಲ್ಲಿ ಈ ಬಾರಿ ನವೆಂಬರ್ ತಿಂಗಳಿಂದಲೇ ವಲಸೆ ಪಕ್ಷಿಗಳ ವಲಸೆ ಪರ್ವ ಆರಂಭವಾಗಿದ್ದು, ರಂಗನತಿಟ್ಟು ಪಕ್ಷಿಧಾಮದಲ್ಲಿರುವ 23 ದ್ವೀಪಗಳು ವಿವಿಧ ಪಕ್ಷಿಗಳಿಂದ ಕಂಗೊಳಿಸುತ್ತಿವೆ. ವಲಸೆ ಬಂದಿರುವ ವಿದೇಶಿ ಪಕ್ಷಿಗಳನ್ನು ಕಣ್ತುಂಬಿಕೊಳ್ಳಲು ವಿವಿಧೆಡೆಯಿಂದ ಪಕ್ಷಿ ಪ್ರಿಯರು, ವಿದ್ಯಾರ್ಥಿಗಳು, ವನ್ಯಜೀವಿ ಛಾಯಾಗ್ರಾಹಕರು ರಂಗನತಿಟ್ಟು ಪಕ್ಷಿಧಾಮಕ್ಕೆ ಆಗಮಿಸುತ್ತಿದ್ದಾರೆ.

> **ಪ್ರವಾಸಿಗರನ್ನು ಆಕರ್ಷಿಸುತ್ತಿವೆ**
> **ರಂಗನತಿಟ್ಟು ಪಕ್ಷಿಧಾಮಕ್ಕೆ ವಲಸೆ ಪಕ್ಷಿಗಳ ಪರ್ವ ಆರಂಭವಾಗಿದ್ದು, ನವೆಂಬರ್ ತಿಂಗಳ ಆರಂಭದಿಂದಲೆ ವಲಸೆ ಪಕ್ಷಿಗಳು ಬಂದಿವೆ. ಕಳೆದ ವಾರ ನಡೆಸಿದ ಪಕ್ಷಿ ಗಣತಿಯಲ್ಲಿ ಒಟ್ಟು 72 ಬಗೆಯ 3300ಕ್ಕೂ ಹೆಚ್ಚು ಪಕ್ಷಿಗಳು ಕಂಡು ಬಂದಿದ್ದು, ಇನ್ನು ಹೆಚ್ಚಿನ ಸಂಖ್ಯೆಯ ಪಕ್ಷಿಗಳು ವಲಸೆ ಬರುತ್ತಿವೆ. ಪಕ್ಷಿಗಳಿಂದ ಎಲ್ಲಾ ದ್ವೀಪಗಳು ಕಂಗೊಳಿಸುತ್ತಿದ್ದು, ಪ್ರವಾಸಿಗರನ್ನು ಆಕರ್ಷಿಸುತ್ತಿವೆ.**
> **– ಡಾ. ಐ.ಬಿ.ಪ್ರಭುಗೌಡ, ಡಿಸಿಎಫ್, ಮೈಸೂರು ವನ್ಯಜೀವಿ ವಿಭಾಗ**

ಕಳೆದ ವಾರ ಅರಣ್ಯ ಇಲಾಖೆ ನಡೆಸಿದ ಪಕ್ಷಿ ಗಣತಿಯಲ್ಲಿ ನಿತ್ಯಹರಿದ್ವರ್ಣ ಕಾಡು, ಪಶ್ಚಿಮಘಟ್ಟಗಳಲ್ಲಿ ಕಂಡು ಬರುವ ಗ್ರೇಟರ್ ರಾಕೆಟ್ ಟೈಲ್ಡ್ ಡ್ರಾಂಗೋ, ಸ್ಪಾಟ್ ಬಿಲ್ಡ್ ಫೆಲಿಕಾನ್, ಇಂಡಿಯನ್ ಕಾರ್ಮೋರೆಂಟ್, ಕಿಂಗ್‌ಫಿಶರ್, ಸ್ಪೂನ್‌ಬಿಲ್ ಸೇರಿದಂತೆ 72 ಬಗೆಯ ಪಕ್ಷಿಗಳು ಕಂಡು ಬಂದಿವೆ. ವಲಸೆ ಪಕ್ಷಿಗಳಾದ ಇಂಡಿಯನ್ ಪಿಟ್ಟಾ, ಬೂಟೆಡ್ ಬಾಬ್ಲರ್ ಸೇರಿದಂತೆ ಇನ್ನಿತರ ಪಕ್ಷಿಗಳು ರಂಗನತಿಟ್ಟು ಪಕ್ಷಿಧಾಮಕ್ಕೆ ಬಂದಿವೆ. ಗಣತಿಯಲ್ಲಿ ಒಟ್ಟು 3300ಕ್ಕಿಂತ ಹೆಚ್ಚು ಪಕ್ಷಿಗಳು ಪಕ್ಷಿಧಾಮದಲ್ಲಿ ಕಂಡು ಬಂದಿವೆ.

ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ ರಂಗನತಿಟ್ಟು ಪಕ್ಷಿಧಾಮಕ್ಕೆ 1,69,373 ಪ್ರವಾಸಿಗರು ಭೇಟಿ ನೀಡಿದ್ದಾರೆ. ಅವರಲ್ಲಿ 1,68,141 ಭಾರತೀಯರಾಗಿದ್ದರೆ, 1232 ವಿದೇಶಿ ಪ್ರವಾಸಿಗರಾಗಿದ್ದಾರೆ. ವಲಸೆ ಪಕ್ಷಿಗಳ ಆಗಮನ ಆರಂಭವಾಗಿರುವುದರಿಂದ ನವೆಂಬರ್ ತಿಂಗಳ ಆರಂಭದಿಂದಲೂ ರಂಗನತಿಟ್ಟು ಪಕ್ಷಿಧಾಮಕ್ಕೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದ್ದು ಕಳೆದ 20 ದಿನದಲ್ಲಿ 24,707 ಭಾರತೀಯರು, 315 ವಿದೇಶಿಗರೂ ಸೇರಿದಂತೆ ಒಟ್ಟು 25,022 ಪ್ರವಾಸಿಗರು ಭೇಟಿ ನೀಡಿದ್ದಾರೆ.

ನ.26ಕ್ಕೆ ರಾಜ್ಯ ಮಟ್ಟದ ಕರಾಟೆ ಕ್ರೀಡಾಕೂಟ

ಮೈಸೂರು,ನ.22– ಶಾಲಾ ಶಿಕ್ಷಣ ಇಲಾಖೆ ವತಿಯಿಂದ 17 ವರ್ಷದ ಪ್ರೌಢಶಾಲಾ ಬಾಲಕ ಮತ್ತು ಬಾಲಕಿಯರ ರಾಜ್ಯ ಮಟ್ಟದ ಕರಾಟೆ ಕ್ರೀಡಾಕೂಟವನ್ನು ನ.26ರಂದು ನಜರ್‌ಬಾದ್‌ನ ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದು, ಕರಾಟೆ ಕ್ರೀಡಾಕೂಟಕ್ಕೆ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಸುಮಾರು 850 ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ನ.26 ರಿಂದ ಪ್ರತಿದಿನ ಬೆಳಗ್ಗೆ 8.30 ರಿಂದ ಸಂಜೆ 05.30 ರವರೆಗೆ ಕ್ರೀಡೆ ನಡೆಯಲಿದ್ದು, ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಸೋಮಶೇಖರ್ ದೂ.9448877854 ಅನ್ನು ಸಂಪರ್ಕಿಸಬಹುದು ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿಯ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನ್ಯೂರೋ ನಾವಿಗೇಷನ್ ಸಿಸ್ಟಂ ಮೂಲಕ 15 ಮಂದಿಗೆ ಯಶಸ್ವಿ ಶಸ್ತ್ರ ಚಿಕಿತ್ಸೆ

ಮೈಸೂರು, ನ.22(ಜಿಎ)–ನಾರಾಯಣ ಆಸ್ಪತ್ರೆಯಲ್ಲಿ ಅತ್ಯಾಧುನಿಕ ನ್ಯೂರೋ ನಾವಿಗೇಷನ್ ಸಿಸ್ಟಂ ಅಳವಡಿಸಿ, ಈಗಾಗಲೇ 15 ಮಂದಿಗೆ ಯಶಸ್ವಿಯಾಗಿ ಶಸ್ತ್ರ ಚಿಕಿತ್ರೆ ಮಾಡಲಾಗಿದೆ ಎಂದು ಆಸ್ಪತ್ರೆಯ ಚಿಕಿತ್ಸ ನಿರ್ದೇಶಕ ಡಾ.ಎಂ.ಎನ್. ರವಿ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ್ಯೂರೋ ನಾವಿಗೇಷನ್ ಸಿಸ್ಟಂನಿಂದ ವ್ಯಕ್ತಿಯ ಮೆದುಳಿನಲ್ಲಿರುವ ಗಡ್ಡೆಯನ್ನು ಅತಿ ನಿಖರವಾಗಿ ಶಸ್ತ್ರ ಚಿಕಿತ್ಸೆ ಮೂಲಕ ತೆಗೆದು ಹಾಕಲು ಸಾಧ್ಯವಾಗುತ್ತಿದೆ. ಈ ರೀತಿಯ ಸಾಧನವನ್ನು ಮೈಸೂರಿನಲ್ಲಿ ಬಳಸಿ ಶಸ್ತ್ರ ಚಿಕಿತ್ಸೆ ಮಾಡುತ್ತಿರುವುದು ನಾರಾಯಣ ಆಸ್ಪತ್ರೆಯಲ್ಲಿ ಮಾತ್ರ ಎಂದರು.

ಮಿದುಳಿನ ಶಸ್ತ್ರ ಚಿಕಿತ್ಸೆಗೆ ಸಿಟಿ ಸ್ಕ್ಯಾನ್ ಹಾಗೂ ಎಂಆರ್‌ಐ ಚಿತ್ರಗಳನ್ನು ಬಳಸುವುದು ಸಾಮಾನ್ಯ ಸಂಗತಿ. ಆದರೆ ಅವುಗಳನ್ನು ಮುಂದಿಟ್ಟುಕೊಂಡು ವೈದ್ಯರು ತಮ್ಮ ಅನುಭವದ ಆಧಾರದ ಮೇಲೆ ಮಿದುಳಿನಲ್ಲಿ ಈ ಭಾಗದಲ್ಲಿ ಗಡ್ಡೆ ಇದೆ, ಇಷ್ಟೇ ಗಾತ್ರದ್ದಾಗಿದೆ ಎಂದು ನಿರ್ಧರಿಸುತ್ತ ಶಸ್ತ್ರ ಚಿಕಿತ್ಸೆ ನಡೆಸಬೇಕಾಗಿತ್ತು. ಆದರೆ ಈ ನೂತನ ಸಾಧನವು ಸಿಟಿ ಸ್ಕ್ಯಾನ್ ಹಾಗೂ ಎಂಆರ್‌ಐ ಮಾಹಿತಿಯನ್ನು ತನ್ನಲ್ಲಿ ಅಳವಡಿಸಿಕೊಂಡು, ಶಸ್ತ್ರ ಚಿಕಿತ್ಸೆ ವೇಳೆ ಮಾರ್ಗದರ್ಶನ ನೀಡಲಿದೆ. ಇದರಿಂದಾಗಿ ಪೂರ್ಣ ಮಟ್ಟದಲ್ಲಿ ಗಡ್ಡೆಯನ್ನು ಅತಿ ಕಡಿಮೆ ಛೇದನದೊಡನೆ ತೆಗೆದುಹಾಕಬಹುದಾಗಿದೆ. ಜೊತೆಗೆ ಸಮಯವೂ ಉಳಿಯಲಿದ್ದು, ರೋಗಿ ಬೇಗ ಚೇತರಿಸಿಕೊಳ್ಳುತ್ತಾನೆ. ಈ ಸಾಧನವನ್ನು ಬೆನ್ನುಮೂಳೆ ಪ್ರದೇಶದ ಸಂಕೀರ್ಣ ಶಸ್ತ್ರ ಚಿಕಿತ್ಸೆಗೂ ಬಳಸಿಕೊಳ್ಳಬಹುದಾಗಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ನರರೋಗ ಶಸ್ತ್ರ ಚಿಕಿತ್ಸಾ ತಜ್ಞ ಡಾ.ಹೆಚ್.ಹರ್ಷ, ಡಾ. ಗೌತಮ್ ಉಪಸ್ಥಿತರಿದ್ದರು.

ಅನಾಥವಾಗಿರುವ ನರಸಿಂಹರಾಜ ಕ್ಷೇತ್ರದ ಉದ್ಯಾನವನ ನಿರ್ವಹಣೆಗೆ ಆಮ್ ಆದ್ಮಿ ಆಗ್ರಹ

ಮೈಸೂರು, ನ.22(ಜಿಎ)–ಅನಾಥವಾಗಿರುವ ನರಸಿಂಹರಾಜ ಕ್ಷೇತ್ರದ ಉದ್ಯಾನವನಗಳನ್ನು ನಿರ್ವಹಣೆ ಮಾಡುವಂತೆ ಆಮ್ ಆದ್ಮಿ ಪಕ್ಷದ ಮೈಸೂರು ಜಿಲ್ಲಾಧ್ಯಕ್ಷ ಎಲ್.ರಂಗಯ್ಯ ಆಗ್ರಹಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಷೇತ್ರದ ರಾಜೀವ್ ನಗರದ ವಾರ್ಡ್ ನಂ.10ರಲ್ಲಿರುವ ಉದ್ಯಾನವನ ಸಾರ್ವಜನಿಕರ ಉಪಯೋಗಕ್ಕೆ ಬಾರದಂತೆ ಗಿಡಗಂಟಿ ಬೆಳೆದು ಹಾವುಗಳ ಆವಾಸ ಸ್ಥಾನವಾಗಿದ್ದು, ಈಗಾಗಲೇ ನಾಲ್ಕೈದು ಮಂದಿ ಹಾವುಗಳಿಂದ ಕಚ್ಚಿಸಿಕೊಂಡು ಚಿಕಿತ್ಸೆ ಪಡೆದಿದ್ದಾರೆ. ಈ ಸಂಬಂಧ ಗಡಿಗಂಟಿ ತೆರವುಗೊಳಿಸುವಂತೆ ಮನವಿ ಮಾಡಿಕೊಂಡರೂ ಪಾಲಿಕೆ ಅಧಿಕಾರಿ ವರ್ಗ ನಿರ್ಲಕ್ಷ್ಯ ತೋರುತ್ತಿದೆ ಎಂದು ಕಿಡಿಕಾರಿದರು.

ಕೋಟಿಗಟ್ಟಲೆ ಖರ್ಚು ಮಾಡಿ ಈ ಉದ್ಯಾನಗಳನ್ನು ನಿರ್ಮಿಸಿದ್ದು, ಗೇಟ್ ಹಾಗೂ ಗ್ರಿಲ್ ಕಾಂಪೌಂಡ್ ಹಾಕಿ ಸುಮ್ಮನಾಗಿದ್ದಾರೆ. ತಮ್ಮ ಪಕ್ಷ ಸ್ಥಳೀಯ ಮುಖಂಡರೊಡನೆ ಮನವಿ ಸಲ್ಲಿಸಿದ ಕಾರಣ ಒಂದು ಉದ್ಯಾನವನದಲ್ಲಿನ ಗಿಡಗಂಟಿ ತೆರವುಗೊಳಿಸಿದ್ದಾರೆ. ಬಾಕಿ ಉಳಿದ ಉದ್ಯಾನವನಗಳು ಅದೇ ರೀತಿ ಕಾಡಿನಂತಿವೆ. ಪೊದೆಗಳನ್ನು ತೆರವುಗೊಳಿಸಿ ನಾವೇ ನೋಡಿಕೊಳ್ಳುತ್ತೇವೆ ಎಂದರೂ ಪಾಲಿಕೆ ಅಧಿಕಾರಿಗಳು ಯಾವುದೇ ಪ್ರತಿಕ್ರಿಯೆ ನೀಡುತ್ತಿಲ್ಲ. ಪಾಲಿಕೆ ಆಯುಕ್ತ, ಸ್ಥಳೀಯ ಶಾಸಕರು ಹಾಗೂ ವಲಯ ಕಚೇರಿ ಅಧಿಕಾರಿಗಳನ್ನು ಭೇಟಿ ಮಾಡಲು ಹೋದರೆ ಸಭೆ ಇದೆ, ಸಮಯವಿಲ್ಲ ಎಂಬ ಸಬೂಬು ಹೇಳಿ ಕಳುಹಿಸುತ್ತಿದ್ದಾರೆ. ಆದರೆ, ನಾವು ಪಾಲಿಕೆಗೆ ಉದ್ಯಾನವನ ಅಭಿವೃದ್ಧಿಗೆ ನೀಡುವ ಸೆಸ್ ಎಲ್ಲಿಗೆ ಹೋಗುತ್ತಿದೆ ತಿಳಿಯುತ್ತಿಲ್ಲ. ಹೀಗಾಗಿ ಇನ್ನು ಹತ್ತು ದಿನಗಳಲ್ಲಿ ಎಲ್ಲಾ ಉದ್ಯಾನವನ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಕ್ರಮ ಕೈಗೊಳ್ಳದಿದ್ದಲ್ಲಿ ತೀವ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಮಿರ್ಜಾ, ಜಾಫರ್, ವಿಶ್ವಾಥ್ ಕುಲಕರ್ಣಿ, ಜುಬೇರ್ ಅಹಮದ್ ಉಪಸ್ಥಿತರಿದ್ದರು.

ಇಂದು 'ಸಂವಹನ ಸಿರಿ' ಪ್ರಶಸ್ತಿ ಪ್ರದಾನ; ಅಭಿನಂದನಾ ಸಮಾರಂಭ

ಮೈಸೂರು,ನ.22(ಪಿಎಂ)– ಸಂವಹನ ಟ್ರಸ್ಟ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕನ್ನಡ ಸಾಹಿತ್ಯ ಕಲಾಕೂಟದ ಸಂಯುಕ್ತಾಶ್ರಯದಲ್ಲಿ ಸುವರ್ಣ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ನ.23 ರಂದು 'ಸಂವಹನ ಸಿರಿ' ಯುವ ಸಾಹಿತ್ಯ ಪ್ರಶಸ್ತಿ ಪ್ರದಾನ ಹಾಗೂ 2024ರ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ಹಾಗೂ ಹಿರಿಯ ಸಾಹಿತಿಗಳಿಗೆ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಮೈಸೂರಿನ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯಭವನದಲ್ಲಿ ಅಂದು ಬೆಳಗ್ಗೆ 10.30ಕ್ಕೆ ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟನೆ ನೆರವೇರಿಸಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಡಾ. ಧರಣೀದೇವಿ ಮಾಗಲತ್ತಿ ಪ್ರಶಸ್ತಿ ಪುರಸ್ಕೃತರನ್ನು ಸನ್ಮಾನಿಸಲಿದ್ದಾರೆ. ಸನ್ಮಾನಿತರನ್ನು ಕುರಿತು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಡಾ.ಎನ್.ಕೆ. ಲೋಲಾಕ್ಷಿ ಮತ್ತು ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ಮಾತನಾಡಲಿದ್ದಾರೆ. ಹಿರಿಯ ವಿದ್ವಾಂಸ ಡಾ.ರಾಮೇಗೌಡ (ರಾಗೌ) ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಿರಿಯ ವಿಜ್ಞಾನ ಲೇಖಕ ಎಸ್.ರಾಮಪ್ರಸಾದ್ ಪಾಲ್ಗೊಳ್ಳಲಿದ್ದಾರೆ. ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಪ್ರಾಸ್ತಾವಿಕ ಭಾಷಣ ಮಾಡಲಿದ್ದಾರೆ. ಸಂಹವನ ಟ್ರಸ್ಟ್ ಅಧ್ಯಕ್ಷ ಡಿ.ಎನ್.ಲೋಕಪ್ಪ ಉಪಸ್ಥಿತರಿರಲಿದ್ದಾರೆ. ವಿಶ್ರಾಂತ ಪ್ರಾಧ್ಯಾಪಕಿ ಪ್ರೊ.ಎ.ಶಶಿಕಲಾ ಕನ್ನಡ ಗೀತೆಗಳ ಗಾಯನ ನಡೆಸಿಕೊಡಲಿದ್ದಾರೆ.

ಹಿರಿಯ ಸಾಹಿತಿಗಳೂ ಆದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವಿಶ್ರಾಂತ ನಿರ್ದೇಶಕ ಡಾ.ಡಿ.ಕೆ.ರಾಜೇಂದ್ರ ಅವರನ್ನು ಇದೇ ವೇಳೆ ಸನ್ಮಾನಿಸಲಾಗುವುದು. ಮಹಾರಾಣಿ ಸರ್ಕಾರಿ ಪದವಿಪೂರ್ವ ಕಾಲೇಜು ಅಧ್ಯಾಪಕ ಡಾ.ಎನ್.ಎನ್. ಚಿಕ್ಕಮಾದು ಅವರಿಗೆ 'ಸಂವಹನ ಸಿರಿ' ಯುವ ಸಾಹಿತ್ಯ ಪ್ರಶಸ್ತಿ ಪ್ರದಾನ ಮಾಡಲಾಗುವುದು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ.ಪದ್ಮಾಶೇಖರ್, ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತರಾದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅವರನ್ನು ಅಭಿನಂದಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಮುಡಾ ಕಡತ ನಾಶ ಆರೋಪ: ಸಚಿವ ಭೈರತಿ ಸುರೇಶ್ ಬಂಧನಕ್ಕೆ ಲೋಕಾಯುಕ್ತ ಎಸ್ಪಿಗೆ ಮನವಿ ಸಲ್ಲಿಸಿದ ಸ್ನೇಹಮಯಿ ಕೃಷ್ಣ



ಕೃಷ್ಣ

ಮೈಸೂರು, ನ.22(ಬಿಎಲ್‌ಯು)– ಮುಡಾದ ಶೇ.50:50 ಅನುಪಾತದಡಿ ನಿವೇಶನ ಮಂಜೂರಾತಿ ಹಗರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಸಾಕ್ಷ್ಯಾಧಾರವಾಗಿದ್ದ ಕಡತಗಳನ್ನು ನಾಶ ಮಾಡಿರುವ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಸೇರಿದಂತೆ ಇತರರನ್ನು ಬಂಧಿಸುವಂತೆ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಲೋಕಾಯುಕ್ತ ಎಸ್ಪಿಗೆ ಮನವಿ ಮಾಡಿದ್ದಾರೆ. ಇಂದು ಮೈಸೂರಿನ ದಿವಾನ್ಸ್ ರಸ್ತೆಯ ಲೋಕಾಯುಕ್ತ ಕಚೇರಿಗೆ ಆಗಮಿಸಿದ ಸ್ನೇಹಮಯಿ ಕೃಷ್ಣ ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ಅವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿದರು.

ಮುಡಾದ ಶೇ.50:50 ಅನುಪಾತದಡಿ ನಿವೇಶನ ಮಂಜೂರಾತಿಗೆ ಸಂಬಂಧಿಸಿದಂತೆ 140 ಕಡತಗಳನ್ನು ಕೊಂಡೊಯ್ದು ಸಾಕ್ಷ್ಯ ನಾಶ ಮಾಡಲಾಗಿದೆ. ಈ ಕೃತ್ಯ ಎಸಗಿರುವ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯದ ಆಯುಕ್ತ ಆರ್.ವೆಂಕಟಾಚಲಪತಿ ಅವರನ್ನು ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿದ್ದಾರೆ.

ಮುಡಾದಲ್ಲಿ ಸರ್ಚ್ ವಾರೆಂಟ್ ಪಡೆದಿದ್ದ ಹಿಂದಿನ ಲೋಕಾಯುಕ್ತ ಎಸ್ಪಿಯಾಗಿದ್ದ ಸಜಿತ್ ಅವರು ಪ್ರಕರಣದ ಪ್ರಮುಖ ಸಾಕ್ಷ್ಯಾಧಾರವಾಗಿದ್ದ ಕಡತಗಳನ್ನು ಕೊಂಡೊಯ್ದು ಭೈರತಿ ಸುರೇಶ್ ಅವರಿಗೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಸಜಿತ್ ಅವರನ್ನು ಕೂಡ ಬಂಧಿಸಬೇಕು ಎಂದು ಒತ್ತಾಯಿಸಿದ್ದಾರೆ. ಕಡತಗಳನ್ನು ಕೊಂಡೊಯ್ದಿರುವ ಬಗ್ಗೆ ಮುಡಾದ ಸಿಸಿಟಿವಿ ದೃಶ್ಯಗಳ ಸಂಗ್ರಹಿಸಬೇಕು. ಈ ಬಗ್ಗೆ ಸಮಗ್ರ ತನಿಖೆ ನಡೆಸಿ ಹೈಕೋರ್ಟ್‌ಗೆ ವರದಿ ನೀಡಬೇಕೆಂದು ಮನವಿ ಮಾಡಿದ್ದಾರೆ.

ಬೇಲಿಯೇ ಎದ್ದು ಹೊಲ ಮೇಯ್ದಂತೆ ಉನ್ನತ ಹುದ್ದೆಯಲ್ಲಿ ಇರುವ ಹಲವರು ಕಡತಗಳನ್ನು ಹೊತ್ತೊಯ್ದು ಸಾಕ್ಷ್ಯ ನಾಶ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಸಾಕ್ಷ್ಯ ನಾಶ ಪ್ರಕರಣದ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥ ಸ್ಥಾನದಲ್ಲಿರುವ ಸಚಿವ ಭೈರತಿ ಸುರೇಶ್, ಐಎಎಸ್ ಅಧಿಕಾರಿ ವೆಂಕಟಾಚಲಪತಿ ಹಾಗೂ ಹಿಂದಿನ ಲೋಕಾಯುಕ್ತ ಎಸ್ಪಿಯಾಗಿದ್ದ ಸಜಿತ್ ಅವರನ್ನು ಬಂಧಿಸಬೇಕು ಎಂದು ಸ್ನೇಹಮಯಿ ಕೃಷ್ಣ ಆಗ್ರಹಿಸಿದ್ದಾರೆ.

ಮೈಕಾಸ್ ಕಾಲೇಜಿನಲ್ಲಿ ಕನ್ನಡಹಬ್ಬ ವಿವಿಧ ಸ್ಪರ್ಧೆಗಳಲ್ಲಿ 325 ಮಂದಿ ಭಾಗಿ



ಮೈಸೂರಿನ ಜೆಆರ್‌ಎಸ್ ಫ್ಯಾಂಟಸಿ ಪಾರ್ಕ್ ಹಿಂಭಾಗ ಇರುವ ಮೈಕಾಸ್ ಕಾಲೇಜಿನಲ್ಲಿ ಇತ್ತೀಚೆಗೆ ಕನ್ನಡ ಹಬ್ಬ ಏರ್ಪಡಿಸಲಾಗಿತ್ತು. ಇದರ ಅಂಗವಾಗಿ ವಿವಿಧ ಸ್ಪರ್ಧೆಗಳು ನಡೆದವು. ಮೈಸೂರು ನಗರ, ಹುಣಸೂರು, ಪಾಂಡವಪುರ ಸೇರಿದಂತೆ ವಿವಿಧ ಕಾಲೇಜು ಹಾಗೂ ಪ್ರೌಢಶಾಲೆಗಳ 325 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಿದರು. ಪದವಿ ಕಾಲೇಜು ಪ್ರಾಂಶುಪಾಲ ಜೆ.ರಾಮಚರಣ್, ಪಿಯು ಕಾಲೇಜು ಪ್ರಾಂಶುಪಾಲೆ ಸಿ.ಅರ್ಚನಾ, ಸ್ಪರ್ಧೆಗಳ ವ್ಯವಸ್ಥಾಪಕಿ ಡಾ.ಟಿ.ಜೆ. ರಮ್ಯಾ ಉಪಸ್ಥಿತರಿದ್ದರು.

ನ.25ರಂದು ಕೆಎಎಸ್ ಪರೀಕ್ಷಾ ತರಬೇತಿ ಶಿಬಿರ ಉದ್ಘಾಟನೆ

ಮೈಸೂರು,ನ.22– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 'ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ'ದ ವತಿಯಿಂದ 30 ದಿನಗಳ ಕೆ.ಎ.ಎಸ್ ಪರೀಕ್ಷಾ ತರಬೇತಿ ಶಿಬಿರದ ಉದ್ಘಾಟನೆಯನ್ನು ನವೆಂಬರ್ 25 ರಂದು ಬೆಳಗ್ಗೆ 11 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

2014ನೇ ಬ್ಯಾಚ್‌ನ ಐಎಎಸ್ ಅಧಿಕಾರಿ ಚಾಮರಾಜನಗರ ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್ ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ ಅಧ್ಯಕ್ಷತೆ ವಹಿಸುವರು.

ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯ ಉಪ ಯೋಜನಾ ನಿರ್ದೇಶಕರು ಹಾಗೂ 2021ನೇ ಬ್ಯಾಚ್‌ನ ಐಎಎಸ್ ಅಧಿಕಾರಿ ಮಹಮ್ಮದ್ ಹ್ಯಾರಿಸ್ ಸುಮೇರ್ ಪರೀಕ್ಷಾ ಸಿದ್ಧತೆ ಕುರಿತು ಅಭ್ಯರ್ಥಿಗಳಿಗೆ ಮಾರ್ಗದರ್ಶನ ನೀಡಿ, ಸಂವಾದ ನಡೆಸುವರು. 2005ನೇ ಸಾಲಿನ ಕೆಎಎಸ್ ಅಧಿಕಾರಿ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಪರೀಕ್ಷಾ ಟಿಪ್ಸ್‌ಗಳನ್ನು ನೀಡಲಿದ್ದು, ಕುಲಸಚಿವ ಪ್ರೊ. ಕೆ.ಬಿ. ಪ್ರವೀಣ್ ಉಪಸ್ಥಿತರಿರುವರು.

ತರಬೇತಿಗೆ ಸೇರಬಯಸುವ ಆಸಕ್ತರು ಪ್ರವೇಶಾತಿ ಪಡೆಯಬಹುದಾಗಿದ್ದು, ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡರ ದೂ.ಸಂ: 0821–2515944 ಅಥವಾ 9964760090 ಮೂಲಕ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಕ್ತ ವಿವಿ ಕುಲಪತಿ, ಕುಲ ಸಚಿವರಿಂದ ಅಧಿಕಾರ ದುರುಪಯೋಗ

ಸುಳ್ಳು ನಡಾವಳಿ ಸೃಷ್ಟಿಸಿ ಕೆಲವರಿಗೆ ಪದೋನ್ನತಿ ನೀಡಿದ ಆರೋಪ

ಮೈಸೂರು, ನ.22(ಜಿಎ)–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಮತ್ತು ಕುಲಸಚಿವರು ಅಧಿಕಾರ ದುರುಪಯೋಗಪಡಿಸಿಕೊಂಡಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ.

ಮುಕ್ತ ವಿವಿ ವ್ಯವಸ್ಥಾಪನಾ ಮಂಡಳಿಯ 180ನೇ ಸಭೆಗೆ ಮಂಡಿಸದ ವಿಷಯಕ್ಕೆ ಕುಲಪತಿ ಮತ್ತು ಕುಲಸಚಿವರು ಸುಳ್ಳು ನಡಾವಳಿ ಸೃಷ್ಟಿಸಿ, ಅಧಿಕಾರ ದುರ್ಬಳಕೆ ಮಾಡಿಕೊಂಡು ಕೆಲವು ಶಿಕ್ಷಕರಿಗೆ ಪೂರ್ವಾನ್ವಯವಾಗಿ ಪದೋನ್ನತಿ ನೀಡಿ ಲಕ್ಷಾಂತರ ರೂ. ವೇತನ ಬಾಕಿ ಪಾವತಿಸುವ ಮೂಲಕ ಕಾನೂನುಬಾಹಿರ ಲಾಭ ಮಾಡಿಕೊಟ್ಟಿದ್ದಾರೆ ಎಂದು ಅಮಾನತುಗೊಂಡಿರುವ ಸಹಾಯಕ ಪ್ರಾಧ್ಯಾಪಕ ಡಾ.ಹೆಚ್.ಕೆ. ಜಗದೀಶ್ ಬಾಬು ಆರೋಪಿಸಿದ್ದಾರೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುಲಪತಿ ಮತ್ತು ಕುಲಸಚಿವರು ಅಕ್ರಮವಾಗಿ ಲಾಭ ಮಾಡಿಕೊಂಡು ಮುಕ್ತ ವಿವಿ ಮತ್ತು ಸರ್ಕಾರಕ್ಕೆ ವಂಚನೆ ಮಾಡಿದ್ದಾರೆ ಎಂದರು.

2024ರ ಅ.8ರಂದು ನಡೆದ ವ್ಯವಸ್ಥಾಪನಾ ಮಂಡಳಿ ಸಭೆಗೆ ವಿಷಯ ಸಂಖ್ಯೆ 180:10ರ ಕರಾಮುವಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರಿಗೆ ದಿ.20.09.2024 ಹಾಗೂ ದಿ.21.09.2024ರಂದು ಜರುಗಿದ ಸಮಿತಿ ವರದಿಯ ಸೀಲ್ ಲಕೋಟೆಯನ್ನು ಸಭೆಯಲ್ಲಿ ತೆರೆಯುವ ಬಗ್ಗೆ ಎಂದು ಸಭೆ ಮುಕ್ತಾಯವಾದ ಬಳಿಕ ನಡಾವಳಿಗೆ ಸೇರಿಸಿ, ಅಂದಿನ ಸಭೆಗೆ ಗೈರುಹಾಜರಾಗಿದ್ದ ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ಶಾಸಕರಾದ ಕೆ.ಹರೀಶ್‌ಗೌಡ, ಡಿ.ರವಿಶಂಕರ್ ಹಾಗೂ ವಿಧಾನಪರಿಷತ್ ಸದಸ್ಯ ಡಾ.ಬಿ.ಜಿ.ಪಾಟೀಲ್ ಅವರೂ ಸಭೆಯಲ್ಲಿ ಭಾಗವಹಿಸಿದ್ದರು ಎಂಬ ನಡಾವಳಿಯಲ್ಲಿ ಸೇರಿಸಿ ಜನಪ್ರತಿನಿಧಿಗಳಿಗೂ ವಂಚಿಸಿದ್ದಾರೆ ಎಂದು ದೂರಿದರು. ಈ ಸಂಬಂಧ ಈಗಾಗಲೇ ಮುಕ್ತ ವಿವಿ ಕುಲಪತಿ ಡಾ.ಶರಣಪ್ಪ ವಿ.ಹಲಸೆ, ಕುಲಸಚಿವ ಡಾ.ಕೆ.ಬಿ.ಪ್ರವೀಣ, ಉಪ ಕುಲಸಚಿವರಾದ ಡಾ.ಲಕ್ಷ್ಮಿ, ಸಹಾಯಕ ಪ್ರಾಧ್ಯಾಪಕ ಎಸ್.ಎಂ.ಚಂದ್ರೇಶ್, ಡಾ.ಎಸ್.ನಿರಂಜನ ದಾಸ್ ಅವರುಗಳ ವಿರುದ್ಧ ಜಯಲಕ್ಷ್ಮಿಪುರಂ ಠಾಣೆಯಲ್ಲಿ ದೂರು ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಆರ್ಥಿಕ ಬೆಳವಣಿಗೆಗೆ ಸುಸ್ಥಿರ ಅಭಿವೃದ್ಧಿ ಪೂರಕ

ಮೈಸೂರು, ನ. 22–ಇತ್ತೀಚಿನ ವರ್ಷಗಳಲ್ಲಿ ಭಾರತದ ಅರ್ಥ ವ್ಯವಸ್ಥೆಯು ದಾಪುಗಾಲಿಡುತ್ತಿದೆ. ಆದರೆ ಹವಾಮಾನ ಬದಲಾವಣೆಯು ಸವಾಲಾಗಿಯೇ ಉಳಿದಿದೆ ಎಂದು ವಿಪ್ರೋ ಸಿಎಸ್‌ವಿ ಉಪಾಧ್ಯಕ್ಷ ರಮಣಕುಮಾರ್ ತಿಳಿಸಿದ್ದಾರೆ.

ಮೈಸೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್ಮೆಂಟ್ ಡೆವಲಪ್‌ಮೆಂಟ್ (ಎಸ್‌ಡಿಎಮ್–ಐಎಮ್‌ಡಿ) ಸಂಸ್ಥೆ ಆಯೋಜಿಸಿದ್ದ 'ಆರ್ಥಿಕ ಅಭಿವೃದ್ಧಿ ಮತ್ತು ಸುಸ್ಥಿರ ಬೆಳವಣಿಗೆ: ಉದಯೋನ್ಮುಖ ಪ್ರವೃತ್ತಿಗಳು' –ಕುರಿತ ಅಂತರರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ, ಅವರು ಅಭಿಪ್ರಾಯಪಟ್ಟರು.

ರಮಣಕುಮಾರ್, ಸ್ಥೂಲ ಅರ್ಥಶಾಸ್ತ್ರ ವಿಷಯದ ಖ್ಯಾತ ವಿಶ್ಲೇಷಕರಾಗಿದ್ದು, ಮೂರು ದಶಕಕ್ಕೂ ಹೆಚ್ಚು ಔದ್ಯಮಿಕ ಅನುಭವವನ್ನು ಹೊಂದಿದ್ದಾರೆ. ಹವಾಮಾನ ಬದಲಾವಣೆ ಮತ್ತು ಜೀವ ಪ್ರಭೇದಗಳ ನಷ್ಟ–ಈ ಸಮಸ್ಯೆಗಳನ್ನು ನಿಭಾಯಿಸಲು ಸೂಕ್ತ ವಿಧಾನಗಳ ಅವಶ್ಯಕತೆ ಬಗ್ಗೆ ಮಾತನಾಡಿದ ಅವರು ಆರ್ಥಿಕ ಬೆಳವಣಿಗೆಯ ಪ್ರಾಮುಖ್ಯತೆಯ ಬಗ್ಗೆ ಒತ್ತಿ ಹೇಳಿದರು.



ಅಂತಾರಾಷ್ಟ್ರೀಯ ಸಮ್ಮೇಳನವನ್ನು ವಿಪ್ರೋ ಸಿಎಸ್‌ವಿ ಉಪಾಧ್ಯಕ್ಷ ರಮಣಕುಮಾರ್ ಉದ್ಘಾಟಿಸಿದರು.

ಮಾನವನಿಂದ ಪ್ರೇರಿತವಾದ ಪರಿಸರ ಹಾನಿಯಿಂದ ಆಗುತ್ತಿರುವ ವಿನಾಶಕಾರಿ ಪರಿಣಾಮಗಳ ಬಗ್ಗೆ ಹೇಳಿದ ಅವರು ವ್ಯವಸ್ಥಿತ ಪರಿಹಾರಗಳ ತುರ್ತು ಅಗತ್ಯ ಇದೆ ಎಂದರು. ಅತೀ ವೇಗವಾಗಿ ಬೆಳೆಯುತ್ತಿರುವ ಅರ್ಥ ವ್ಯವಸ್ಥೆಗಳಲ್ಲಿ ಭಾರತವು ಮುಂಚೂಣಿಯಲ್ಲಿದ್ದು, ಸದ್ಯಕ್ಕೆ ವಿಶ್ವಮಟ್ಟದಲ್ಲಿ 5ನೇ ಸ್ಥಾನದಲ್ಲಿದೆ; 2025ನೇ ಇಸವಿಗೆ ಅದು ವಿಶ್ವದಲ್ಲಿ 4ನೇ ಸ್ಥಾನಕ್ಕೇರುವ ನಿರೀಕ್ಷೆಯಿದೆ; ಮತ್ತು 2027ನೇ ಇಸವಿಗೆ ಭಾರತವು 3ನೇ ಅತಿ ದೊಡ್ಡ ಆರ್ಥಿಕ ವ್ಯವಸ್ಥೆಯಾಗುವ ಎಲ್ಲಾ ಸಾಧ್ಯತೆಗಳಿವೆ ಎಂದು ಅವರು ಅಭಿಪ್ರಾಯಪಟ್ಟರು.

ವಿಶ್ವಸಂಸ್ಥೆಯ ಸುಸ್ಥಿರ ಬೆಳವಣಿಗೆಯ ಗುರಿಗಳು (SDGs), ಹವಾಮಾನ ಬದಲಾವಣೆ ಕುರಿತ ವಿಶ್ವಸಂಸ್ಥೆಯ ಸಮಾವೇಶ ಮತ್ತು ಪ್ಯಾರಿಸ್ ಒಪ್ಪಂದಗಳ ಬಗ್ಗೆ ಹೇಳುತ್ತಾ, ನಾವು ಅತಿದೊಡ್ಡ ಸವಾಲುಗಳನ್ನು ಎದುರಿಸುತ್ತಿದ್ದೇವೆ; ಆದರೆ ಈಗಾಗಲೇ ಅನೇಕ ಪರಿಹಾರಗಳನ್ನು ಸಹ ಹೊಂದಿದ್ದೇವೆ ಎಂದರು. ಸೂಕ್ತ ಕ್ರಮ ತೆಗೆದುಕೊಳ್ಳಲು, ಹೊರಸೂಸುವಿಕೆಯನ್ನು ಕಡಿಮೆಗೊಳಿಸುವುದು, ಹವಾಮಾನ ಬದಲಾವಣೆಯ ಪ್ರಭಾವಗಳಿಗೆ ಹೊಂದಿಕೊಳ್ಳುವುದು ಮತ್ತು ಹಸಿರು ಉಪಕ್ರಮಗಳಿಗೆ ಹಣಕಾಸು ಸೌಲಭ್ಯ ಗಳಿಸುವುದು – ಈ ಮೂರು ವಿಷಯಗಳ ತೀವ್ರ ಅವಶ್ಯಕತೆಯ ಬಗ್ಗೆ ಅವರು ಹೇಳಿದರು. 'ಮರುಬಳಕೆ, ಮರು ಉದ್ದೇಶೀಕರಣ, ಮತ್ತು ಮರು ಉಪಯೋಗ' ಈ ಮಾದರಿಯನ್ನು ಅಳವಡಿಸಿಕೊಂಡು ಸುಸ್ಥಿರತೆಗೆ ಕೊಡುಗೆ ನೀಡಬೇಕೆಂದು ಒತ್ತಿ ಹೇಳಿದರು.

ಡಾ. ಬಿ. ವೆಂಕಟ್ರಾಜ, ಸಮ್ಮೇಳನದ ಮುಖ್ಯಸ್ಥರು ಮತ್ತು ಅಸೋಸಿಯೆಟ್ ಪ್ರೊಫೆಸರ್, ಎಸ್ ಡಿ ಎಮ್ ಐ ಎಮ್ ಡಿ, ಇವರು ಸಮ್ಮೇಳನದ ಉದ್ದೇಶ ವಿವರಿಸಿ, 2047ರ ವೇಳೆಗೆ ಇಸವಿಗೆ ಭಾರತ ಹೊಂದಿರುವ ದೃಷ್ಟಿಕೋನದ ಬಗ್ಗೆ ಮಾತನಾಡಿದರು. ಆರ್ಥಿಕ ಬೆಳವಣಿಗೆ ತಂತ್ರಗಳು ಉತ್ತಮ ಅಭಿವೃದ್ಧಿಯ ಸಾಧನೆಗೆ ಮೂಲವಾಗಬೇಕು; ಹಾಗೆಯೇ ಪರಿಸರ ಸಂರಕ್ಷಣೆ, ಸಂಪನ್ಮೂಲಗಳ ಸಮಾನ ಹಂಚಿಕೆ, ಮತ್ತು ಸುಸ್ಥಿರ ಬೆಳವಣಿಗೆಯ ಸ್ಥಿರತೆ ನಡುವೆ ಸಮತೋಲನ ಕಾಪಾಡಿಕೊಳ್ಳಬೇಕು ಎಂದು ಹೇಳಿದರು.

ಡಾ.(ಲೆ.ಕರ್ನಲ್)ಎಸ್.ಎನ್. ಪ್ರಸಾದ್, ನಿರ್ದೇಶಕರು, ಎಸ್‌ಡಿಎಮ್‌ಐ ಎಮ್‌ಡಿ, ಮಾತನಾಡುತ್ತಾ, ಕೆಲವು ಆರ್ಥಿಕ ಚಟುವಟಿಕೆಗಳು ಮತ್ತು ಯುದ್ಧದಿಂದ ಪರಿಸರಕ್ಕೆ ಆದ ಹಾನಿಗಳ ಬಗ್ಗೆ ಬೆಳಕು ಚೆಲ್ಲಿದರು. ಅವರು ಆರ್ಥಿಕ ಮಾದರಿಗಳಿಗೆ ಒಳಗೊಳ್ಳುವ ವಿಧಾನದ ಬಗ್ಗೆ ಹೇಳುತ್ತಾ, ಲಿಂಗ ಮತ್ತು ವೇತನ ಸಮಾನತೆಯನ್ನು ಸಾಧಿಸುವುದು ದೀರ್ಘಾವಧಿಯ ಸುಸ್ಥಿರತೆ ಕಾಯ್ದುಕೊಳ್ಳುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ ಎಂದು ಒತ್ತಿ ಹೇಳಿದರು.

ಮೈಸೂರು ಮಿತ್ರ



ಜಿಲ್ಲಾ ಬಿಜೆಪಿ ಘಟಕದಿಂದ ಮಂಡ್ಯದಲ್ಲಿ ಬಿಜೆಪಿ ಬೃಹತ್ ಪ್ರತಿಭಟನೆ ನಡೆಸಿತು.

ವಕ್ಫ್ ಬೋರ್ಡ್ ಸಮಸ್ಯೆ ಪರಿಹಾರಕ್ಕೆ ಆಗ್ರಹಿಸಿ

ಸುಮಲತಾ ನೇತೃತ್ವದಲ್ಲಿ ಸರ್ಕಾರದ ವಿರುದ್ಧ ಬಿಜೆಪಿ ಬೃಹತ್ ಪ್ರತಿಭಟನೆ

ಮಂಡ್ಯ, ನ.22– ವಕ್ಫ್ ಬೋರ್ಡ್ ಸಮಸ್ಯೆ ಪರಿಹಾರಕ್ಕೆ ಆಗ್ರಹಿಸಿ ರಾಜ್ಯ ಸರ್ಕಾರದ ವಿರುದ್ಧ ಜಿಲ್ಲಾ ಬಿಜೆಪಿ ಘಟಕದ ವತಿಯಿಂದ ನಗರದ ಸರ್ ಎಂ.ವಿಶ್ವೇಶ್ವರಯ್ಯ ಪ್ರತಿಮೆ ಎದುರು ಬಿಜೆಪಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಶುಕ್ರವಾರ ಸರ್‌ಎಂವಿ ಪುತ್ಥಳಿ ಬಳಿ ಜಮಾಯಿಸಿದ ನೂರಾರು ಬಿಜೆಪಿ ಕಾರ್ಯಕರ್ತರು ಮಾಜಿ ಸಂಸದೆ ಸುಮಲತಾ ಅಂಬರೀಷ್ ನೇತೃತ್ವದಲ್ಲಿ ಜಿಲ್ಲೆಯಲ್ಲಿ ರೈತರ ಜಮೀನುಗಳನ್ನು ವಕ್ಫ್ ಬೋರ್ಡ್ ಹೆಸರಲ್ಲಿ ಸರ್ಕಾರ ಕಬಳಿಸುತ್ತಿದೆ ಎಂದು ಆರೋಪಿಸಿ, ಸರ್ಕಾರ ಹಾಗೂ ಸಚಿವ ಜಮೀರ್ ಅಹ್ಮದ್ ವಿರುದ್ಧ ಘೋಷಣೆ ಕೂಗಿದರು. ಸಚಿವ ಜಮೀರ್ ರಾಜೀನಾಮೆಗೆ ಆಗ್ರಹಿಸಿ, ಸಚಿವರ ಭಾವಚಿತ್ರವನ್ನು ಕಾಲಿನಲ್ಲಿ ತುಳಿದು ಆಕ್ರೋಶ ವ್ಯಕ್ತಪಡಿಸಿ, ಇಡೀ ದಿನ ಧರಣಿ ನಡೆಸಿದರು. ಪ್ರತಿಭಟನಾ ಧರಣಿಯನ್ನುದ್ದೇಶಿಸಿ ಮಾತನಾಡಿದ ಮಾಜಿ ಸಂಸದೆ ಸುಮಲತಾ ಅಂಬರೀಷ್, ವಕ್ಫ್ ವಿವಾದ ಒಂದು ಗಂಭೀರವಾದ ವಿಚಾರವಾಗಿದ್ದು, ಅದರ ವಿರುದ್ಧ ಹೋರಾಟ ಮಾಡುತ್ತಿದ್ದೇವೆ. ಜನರಿಗೆ ಈ ಬಗ್ಗೆ ತಿಳುವಳಿಕೆ ಕೊಡುವ ಜವಾಬ್ದಾರಿ ನಮ್ಮ ಮೇಲಿದೆ. ಇತಿಹಾಸ ಮರೆತರೆ ಭವಿಷ್ಯ ಇಲ್ಲ ಅನ್ನೋದನ್ನ ಯಾವತ್ತೂ ಮರೀಬಾರದು. ಒಗ್ಗಟ್ಟಿಲ್ಲದೆ ಹಿಂದೆ ನಾವು ಮಾಡಿದ ತಪ್ಪಿಗೆ ಸ್ವಾತಂತ್ರ್ಯ ಪಡೆಯಲು 200 ವರ್ಷ ಕಾಯಬೇಕಾಯಿತು. ನಮ್ಮ ದೇವಸ್ಥಾನದ ವಿಚಾರಕ್ಕೆ ನಮ್ಮ ಮೇಲೆ ಅನ್ಯಾಯ ನಡೆಯುತ್ತಿದ್ದರೂ ನಾವು ಸುಮ್ಮನಿರಬೇಕೆ ಎಂದು ಪ್ರಶ್ನಿಸಿದರು.

ವಕ್ಫ್ ವಿಚಾರವನ್ನು ನಿರ್ಲಕ್ಷ್ಯ ಮಾಡಿದರೆ ಮುಂದೆ ಆಗೋ ದುರಂತನ ಸರಿ ಮಾಡಲು ಆಗಲ್ಲ. ವಕ್ಫ್ ವಿರುದ್ಧ ಕೋರ್ಟ್‌ಗೆ ಹೋಗಲ್ಲ ಅನ್ನೋದನ್ನ ನಾವು ಅರ್ಥ ಮಾಡಿಕೊಳ್ಳಬೇಕಿದೆ. ನಾವು ಯಾವ ಸಮುದಾಯದ ವಿರುದ್ಧವೂ ಅಲ್ಲ ಒಂದು ಸಮುದಾಯ ಓಲೈಕೆಗಾಗಿ ಸಮಾಜಗಳ ಮಧ್ಯ ವಿಭಜನೆ ಸರಿಯಲ್ಲ ಇದು ಸರ್ಕಾರದ ತಪ್ಪಾಗಿದ್ದು ಅದನ್ನ ಖಂಡಿಸುತ್ತಿದ್ದೇವೆ. ಸರ್ಕಾರ ನೋಟಿಸ್ ಕೊಟ್ಟು ವಾಪಸ್ ಪಡೆಯುತ್ತೆ ಅಂದರೆ ಅದರ ಉದ್ದೇಶ ಏನು ಅಂತ ಗಮನಿಸಬೇಕು ಎಂದು ಸರ್ಕಾರದ ವಿರುದ್ಧ ಕಿಡಿಕಾರಿದರು.

ವಕ್ಫ್ ವಿಚಾರದಲ್ಲಿ ತುಂಬಾ ಭಯಾನಕ ವಿಷಯ ಇದ್ದು, ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ದೇಶವನ್ನು ಹೊಡೆಯುವ ಷಡ್ಯಂತ್ರ ನಡೆಯುತ್ತಿದ್ದು, ನಮ್ಮ ದೇಶದ ಜನರು ಒಗ್ಗಟ್ಟಾಗಿ ಹೋಗಬೇಕಿದೆ. ಜೊತೆಗೆ ವಕ್ಫ್ ವಿರುದ್ಧ ಎಲ್ಲರೂ ಒಗ್ಗಟ್ಟಾಗಿ ಹೋರಾಟ ಮಾಡಬೇಕಿದೆ ಎಂದು ಕರೆ ನೀಡಿದರು.

ಮಾಜಿ ಸಚಿವ ಕೆ.ಸಿ.ನಾರಾಯಣಗೌಡ ಮಾತನಾಡಿ, ವಕ್ಫ್ ವಿರುದ್ಧ ಬಿಜೆಪಿ ಬೃಹತ್ ಹೋರಾಟ ಮಾಡುತ್ತಿದ್ದು, ಸರ್ಕಾರ ವಕ್ಫ್‌ಗೆ ಅನುಮತಿ ಕೊಟ್ಟಿದೆ. ಯಾಕೆ ಈ ರೀತಿಯ ನಿರ್ಧಾರ ತೆಗೆದುಕೊಂಡು ಹಿಂದೂಗಳನ್ನು ಕಡೆಗಣಿಸಿದೆಯೋ ಗೊತ್ತಿಲ್ಲ. ಸಂವಿಧಾನ ಓದದೆ ಈ ರೀತಿಯ ಕೆಲಸ ಆಗಿದೆ. ದೇವಸ್ಥಾನದ ಜಾಗ ವನ್ನು ವಕ್ಫ್ ಹೆಸರಿಗೆ ತೋರಿಸುತ್ತಿರುವುದು ನಾಚಿಕೆಗೇಡಿನ ಸಂಗತಿ. ಇದೀಗ ಸಿದ್ದರಾಮಯ್ಯ ಮುಡಾ ಹಗರಣ ತಪ್ಪಿಸಿ ಕೊಳ್ಳಲು ದೇವರ ಮೊರೆ ಹೋಗಿದ್ದಾರೆ ಎಂದು ಕಿಡಿಕಾರಿದರು.

ಶೀಘ್ರವಾಗಿ ಡಿಸಿ ಅವರಿಗೆ ಆದೇಶ ಮಾಡಿ ವಕ್ಫ್ ಹೆಸರು ತೆರವುಗೊಳಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ದೊಡ್ಡ ಉಗ್ರ ಸ್ವರೂಪದ ಹೋರಾಟ ಮಾಡುತ್ತೇವೆ. ಸಿದ್ದರಾಮಯ್ಯ ಅವರೇ 24 ಗಂಟೆಗಳಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು. ನಮ್ಮ ಆಸ್ತಿಯನ್ನು ಯಾಕೆ ವಕ್ಫ್‌ಗೆ ಸೇರಿಸುತ್ತಿದ್ದೀರಿ ಎಂದು ಪ್ರಶ್ನಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಡಾ.ಸಿದ್ದರಾಮಯ್ಯ, ಮುಡಾ ಮಾಜಿ ಅಧ್ಯಕ್ಷ ವಿದ್ಯಾ ನಾಗೇಂದ್ರ, ಮುಖಂಡರಾದ ಕೆ.ಎಸ್.ನಂಜುಂಡೇಗೌಡ, ವಿವೇಕ್, ಪೀಹಳ್ಳಿ ರಮೇಶ್, ಬಲ್ಲೇನಹಳ್ಳಿ ಸಂತೋಷ್, ಸಿ.ಟಿ.ಮಂಜುನಾಥ್, ಹೊಸಹಳ್ಳಿ ಶಿವು ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ನಮ್ಮದು ತ್ಯಾಗ ಮಾಡುವ ಕುಟುಂಬ ಸ್ಥಾನಮಾನಕ್ಕೆ ಆಸೆ ಪಡಲ್ಲ

ಮಂಡ್ಯ, ನ.22– ಪಕ್ಷದ ಹಿತದೃಷ್ಟಿಗಾಗಿ ಕ್ಷೇತ್ರವನ್ನು ಬಿಟ್ಟು ಕೊಟ್ಟು ಬಿಜೆಪಿ ಸೇರಿದವಳು ನಾನು. ನಮ್ಮದು ತ್ಯಾಗ ಮಾಡಿರುವ ಕುಟುಂಬವೇ ಹೊರತು ಯಾವುದಕ್ಕೂ ಆಸೆ ಪಡುವ ಕುಟುಂಬವಲ್ಲ ಎಂದು ಸ್ಥಾನಮಾನಕ್ಕಾಗಿ ಸುಮಲತಾ ಪ್ರತಿಭಟನೆಯಲ್ಲಿ ಭಾಗಿ ಎಂದು ಚಲುವರಾಯಸ್ವಾಮಿ ಟೀಕೆ ವಿಚಾರಕ್ಕೆ ಮಾಜಿ ಸಂಸದೆ ಸುಮಲತಾ ಅಂಬರೀಷ್ ತಿರುಗೇಟು ನೀಡಿದರು. ಶುಕ್ರವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೋದಿ ಸರ್ಕಾರದ ಯೋಜನೆಯನ್ನು ಜನರಿಗೆ ತಲುಪಿಸುವ ಆಸೆ ಇದೆ. ಯಾವುದೇ ವೈಯಕ್ತಿಕ ಆಸೆ ನಮಗಿಲ್ಲ. ವೈಯಕ್ತಿಕ ಆಸೆಗಾಗಿ ರಾಜಕಾರಣ ಮಾಡುವವರ ಪಟ್ಟಿ ನಮ್ಮ ಮುಂದೆ ಇದೆ. ಬಿಜೆಪಿ ಪಕ್ಷ ಸೇರಿರುವುದೇ ನನಗೆ ಸ್ಥಾನಮಾನವಾಗಿದ್ದು, ಮೋದಿ ಹಿಂದೆ ನಾವು ಇದ್ದೇವೆ, ಅವರ ಕೆಳಗೆ ಕೆಲಸ ಮಾಡ್ತಿರುವುದೇ ನಮಗೆ ಗೌರವವಾಗಿದೆ ಎಂದು ಹೇಳಿದರು.

ಸ್ಥಾನಮಾನ ಪಡೆಯಲು ಸುಮಲತಾ ಪ್ರತಿಭಟನೆಯಲ್ಲಿ ಭಾಗಿ

ಮಂಡ್ಯ, ನ.22– ಕಳೆದ ಬಾರಿ ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ಸಿಗದಿದ್ದರಿಂದ ಪಕ್ಷದ ವತಿಯಿಂದ ಸ್ಥಾನಮಾನ ಪಡೆಯಲು ಬಿಜೆಪಿ ನಡೆಸುತ್ತಿರುವ ಹೋರಾಟದಲ್ಲಿ ಮಾಜಿ ಸಂಸದೆ ಸುಮಲತಾ ಅಂಬರೀಷ್ ಭಾಗಿಯಾಗಿದ್ದಾರೆಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ವ್ಯಂಗ್ಯವಾಡಿದ್ದಾರೆ.

ಶುಕ್ರವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸುಮಲತಾ ಅವರು ಸಂಸದರಾಗಿ ಐದು ವರ್ಷ ಬಹಳ ಕೆಲಸ ಮಾಡಿದ್ದಾರೆ. ಇದೀಗ ಹೋರಾಟ ಮಾಡಲಿ. ಹೋರಾಟ ಮಾಡದೇ ಇದ್ದರೇ ಹೇಗೆ ಸ್ಥಾನಮಾನ ಸಿಗುತ್ತದೆ ಎಂದು ಪ್ರಶ್ನಿಸಿದರು. ವಕ್ಫ್ ವಿಚಾರವಾಗಿ ಇಂದು ಬಿಜೆಪಿ ಪ್ರತಿಭಟನೆ ನಡೆಸುತ್ತಿದ್ದು, ಬಿಜೆಪಿ ಅವರ ಕಾಲದಲ್ಲೇ ವಕ್ಫ್ ಖಾತೆ ಬದಲಾವಣೆ ಆಗಿದೆ. ಅವರ ಕಾಲದಲ್ಲಿ ನಿರ್ದೇಶನದ ಮೇರೆಗೆ ಖಾತೆ ಬದಲಾವಣೆ ಆಗಿದೆ. ರೈತರಿಗೆ ಅನ್ಯಾಯವಾಗಿರೋದು ಬಿಜೆಪಿ ಆಡಳಿತದ ಸಂದರ್ಭದಲ್ಲಿ ಎಂದು ಆರೋಪಿಸಿದರು.

ದೇವಾಲಯದ ಗೇಟ್ ಬಿದ್ದು ಮಗು ಸಾವು ಪ್ರಕರಣ: ಸಚ್ಚಿದಾನಂದ ಪರಿಹಾರ

ಮಂಡ್ಯ, ನ.22– ಶ್ರೀರಂಗಪಟ್ಟಣ ತಾಲೂಕು ಅರಕೆರೆ ಹೋಬಳಿ ಹುಂಜನಕೆರೆ ಗ್ರಾಮದಲ್ಲಿ ದೇವಾಲಯದ ಕಬ್ಬಿಣದ ಗೇಟ್ ಬಿದ್ದು ಮೃತಪಟ್ಟ ಮಗುವಿನ ಕುಟುಂಬಕ್ಕೆ ಬಿಜೆಪಿ ಮುಖಂಡ ಎಸ್. ಸಚ್ಚಿದಾನಂದ ಇಂಡುವಾಳು ಅವರು ಸಾಂತ್ವನ ಹೇಳಿ ವೈಯಕ್ತಿಕವಾಗಿ 25,000 ರೂ. ಪರಿಹಾರ ನೀಡಿದರು.

ಮುಜರಾಯಿ ಇಲಾಖೆಗೆ ಸೇರಿದ ಶ್ರೀಚನ್ನಕೇಶವಸ್ವಾಮಿ ದೇವಾಲಯದ ಗೇಟ್ ಹಾಳಾಗಿತ್ತು. ಅದನ್ನು ಮುಜರಾಯಿ ಇಲಾಖೆ ಅಥವಾ ಸಂಬಂಧಪಟ್ಟ ಅಧಿಕಾರಿಗಳು, ದೇವಾಲಯದ ವ್ಯವಸ್ಥಾಪನಾ ಸಮಿತಿಯು ದುರಸ್ತಿಗೊಳಿಸದೆ ನಿರ್ಲಕ್ಷ್ಯ ವಹಿಸಿತ್ತು. ನ.11ರಂದು ದೇವಾಲಯಕ್ಕೆ ಆಗಮಿಸಿದ್ದ ಎಚ್.ಜೆ. ಸಿದ್ದರಾಜು ಮತ್ತು ಸುಮಿತ್ರ ದಂಪತಿಯ ಮಗು ಎಚ್.ಎಸ್. ಜಿಷ್ಣು(5 ವರ್ಷ 6 ತಿಂಗಳು) ಆಟವಾಡುತ್ತಾ ಕಬ್ಬಿಣದ ಗೇಟ್ ಮುಟ್ಟಿದಾಗ ಅದು ಮೈಮೇಲೆ ಬಿದ್ದು ಮಗು ಮೃತಪಟ್ಟಿತ್ತು.

ಈ ಹಿನ್ನೆಲೆಯಲ್ಲಿ ಮಂಡ್ಯದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಮೃತ ಮಗುವಿನ ತಂದೆ–ತಾಯಿಯನ್ನು ಭೇಟಿಯಾದ ಎಸ್. ಸಚ್ಚಿದಾನಂದ ಅವರು ವೈಯಕ್ತಿಕವಾಗಿ ಪರಿಹಾರ ನೀಡಿ ಸಾಂತ್ವನ ಹೇಳಿದರು. ತಾವು ಹಾಗೂ ಸ್ನೇಹಿತರೊಂದಿಗೆ ಸೇರಿ ದಂಪತಿಯ ಉಳಿದಿರುವ ಮತ್ತೊಂದು ಮಗು ಇತಿಹಾಸ್ ಹೆಸರಿನಲ್ಲಿ 2 ಲಕ್ಷ ರೂಗಳನ್ನು ಬ್ಯಾಂಕಿನಲ್ಲಿ ಠೇವಣಿ ಇಡಲಾಗುವುದು. ಈ ಹಣವನ್ನು ಮಗುವಿನ ವಿದ್ಯಾಭ್ಯಾಸಕ್ಕೆ ಬಳಸಬೇಕೆಂದು ಸಚ್ಚಿದಾನಂದ ಅವರು ಮೃತ ಮಗುವಿನ ಪೋಷಕರಿಗೆ ತಿಳಿಸಿದರು.



ಮಗುವಿನ ಕುಟುಂಬಕ್ಕೆ ಬಿಜೆಪಿ ಮುಖಂಡ ಎಸ್.ಸಚ್ಚಿದಾನಂದ ಸಾಂತ್ವನ ಹೇಳಿದರು.

ಪ್ರತಿಪಕ್ಷದ ನಾಯಕ, ತಹಸೀಲ್ದಾರ್‌ಗೆ ಫೋನ್ ಕರೆ: ಸ್ಥಳದಲ್ಲೇ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಮತ್ತು ಶ್ರೀರಂಗಪಟ್ಟಣ ತಹಸೀಲ್ದಾರ್‌ಗೆ ಬಿಜೆಪಿ ಮುಖಂಡ ಎಸ್.ಸಚ್ಚಿದಾನಂದ ಇಂಡುವಾಳು ಅವರು ಫೋನ್ ಕರೆ ಮಾಡಿ ದೇವಾಲಯದ ಗೇಟ್ ಮುರಿದು ಬಿದ್ದು ಮಗು ಮೃತಪಟ್ಟ ಘಟನೆ ಬಗ್ಗೆ ಸಮಾಲೋಚಿಸಿದರು.

ಅಧಿಕಾರಿಗಳು ಮಾನವೀಯ ಗುಣವಿಟ್ಟುಕೊಂಡು ಕೆಲಸ ಮಾಡಬೇಕು. ದಲಿತ ಕುಟುಂಬಗಳ ನಿರ್ಲಕ್ಷ್ಯ ಸಲ್ಲದು. ಮೃತ ಮಗುವಿನ ಕುಟುಂಬಕ್ಕೆ ಪರಿಹಾರ ಕೊಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕೆಂದು ತಹಸೀಲ್ದಾರ್ ಅವರನ್ನು ಸಚ್ಚಿದಾನಂದ ಒತ್ತಾಯಿಸಿದರು. ಮತ್ತೊಂದೆಡೆ ಮಗು ಸಾವಿನ ಬಗ್ಗೆ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಅವರೊಂದಿಗೆ ಮಾತನಾಡುತ್ತಾ, ಮೃತ ಮಗುವಿನ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಸರಕಾರದ ಮಟ್ಟದಲ್ಲಿ ಹೋರಾಟ ನಡೆಸಬೇಕೆಂದು ಕೋರಿದರು.

ವ್ಯಕ್ತಿಯ ಸಾವಿಗೆ ಕಾರಣನಾದ ಟ್ರಾಕ್ಟರ್ ಚಾಲಕನಿಗೆ ಶಿಕ್ಷೆ, ದಂಡ

ಪಾಂಡವಪುರ, ನ.22– ಅತಿವೇಗ ಮತ್ತು ಅಜಾಗರೂಕತೆಯಿಂದ ಟ್ರ್ಯಾಕ್ಟರ್ ಚಾಲನೆ ಮಾಡಿ ವ್ಯಕ್ತಿಯ ಸಾವಿಗೆ ಕಾರಣವಾಗಿದ್ದ ಆರೋಪಿಗೆ ಪಾಂಡವಪುರ ಜೆಎಂಎಫ್‌ಸಿ ನ್ಯಾಯಾಲಯ 7 ತಿಂಗಳು 15 ದಿವಸ ಕಾರಾಗೃಹ ಶಿಕ್ಷೆ ಹಾಗೂ 7 ಸಾವಿರ ದಂಡ ವಿಧಿಸಿ ತೀರ್ಪು ನೀಡಿದೆ.

ಪಾಂಡವಪುರ ತಾಲೂಕಿನ ಕ್ಯಾತನಹಳ್ಳಿಯಿಂದ ಎಣ್ಣೆಹೊಳೆ ಕೊಪ್ಪಲು ಗ್ರಾಮಕ್ಕೆ 2022, ಏ.11 ರಂದು ಸಂಜೆ ಸೈಕಲ್‌ನಲ್ಲಿ ತೆರಳುತ್ತಿದ್ದ ಹೊನ್ನಯ್ಯ ಎಂಬಾತನಿಗೆ ಎದುರಿನಿಂದ ಅತಿವೇಗವಾಗಿ ಬಂದ ಟ್ರ್ಯಾಕ್ಟರ್ ಡಿಕ್ಕಿ ಹೊಡೆದ ಪರಿಣಾಮ ಕೆಳಗೆ ಬಿದ್ದು ತಲೆಗೆ ಗಂಭೀರವಾಗಿ ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದ. ಈ ಸಂಬಂಧ ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ತನಿಖೆ ಕೈಗೊಂಡ ಪೊಲೀಸ್ ಇನ್ಸ್‌ಪೆಕ್ಟರ್ ಎಚ್.ಆರ್.ವಿವೇಕಾನಂದ ಸಾಕ್ಷ್ಯಾಧಾರಗಳೊಂದಿಗೆ ಆರೋಪಿ ವಿರುದ್ಧ ದೋಷರೋಪ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶ ಆರ್.ಮಹೇಶ್ ಅವರು ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಕಾರಾಗೃಹ ಶಿಕ್ಷೆ ಮತ್ತು ದಂಡ ವಿಧಿಸಿ ತೀರ್ಪು ಪ್ರಕಟಿಸಿದ್ದಾರೆ. ಸಹಾಯಕ ಸರಕಾರಿ ಅಭಿಯೋಜಕರಾಗಿ ಜಿ.ಪಿ.ಸುಧಾಮಣಿ ವಾದ ಮಂಡಿಸಿದರು.

ಕನ್ನಡ ಸಾಹಿತ್ಯ ಸಮ್ಮೇಳನದ ವೇದಿಕೆ ನಿರ್ಮಾಣಕ್ಕೆ ಭೂಮಿ ಪೂಜೆ



ಕನ್ನಡ ಸಾಹಿತ್ಯ ಸಮ್ಮೇಳನದ ವೇದಿಕೆ ನಿರ್ಮಾಣಕ್ಕೆ ಭೂಮಿ ಪೂಜೆ ನಡೆಸಲಾಯಿತು.

ಮಂಡ್ಯ, ನ.22– 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ–2024ಕ್ಕಾಗಿ ಸಾಂಜೋ ಆಸ್ಪತ್ರೆ ಹಿಂಭಾಗದಲ್ಲಿ ವೇದಿಕೆ ನಿರ್ಮಾಣಕ್ಕೆ ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಶುಕ್ರವಾರ ಭೂಮಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಡಿಸೆಂಬರ್ 20,21 ಹಾಗೂ 22 ರಂದು 3 ದಿನಗಳ ಕಾಲ ಮಂಡ್ಯದಲ್ಲಿ ನಡೆಯಲಿದೆ ಎಂದು ಈಗಾಗಲೇ ತೀರ್ಮಾನ ವಾಗಿದೆ. ಸಮ್ಮೇಳನಕ್ಕೆ ಕೇವಲ ಒಂದು ತಿಂಗಳು ಬಾಕಿ ಇದೆ. ವೇದಿಕೆ ನಿರ್ಮಾಣಕ್ಕೆ ಇಂದು ಭೂಮಿ ಪೂಜೆಯು ಯಾವುದೇ ವಿಘ್ನಗಳಿಲ್ಲದೆ ನೆರವೇರಿದ್ದು, ಇಂದಿನಿಂದ ವೇದಿಕೆ ನಿರ್ಮಾಣದ ಚಟುವಟಿಕೆಗಳು ಪ್ರಾರಂಭವಾಗಲಿದೆ ಎಂದು ಹೇಳಿದರು.

ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಗೊ.ರು.ಚನ್ನಬಸಪ್ಪ ಅವರನ್ನು ಆಯ್ಕೆ ಮಾಡಲಾಗಿದ್ದು, ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡಿರುವ ಬಗ್ಗೆ ರಾಜ್ಯಾದ್ಯಂತ ಮೆಚ್ಚುಗೆ ವ್ಯಕ್ತವಾಗಿರುವುದು ಬಹಳ ಸಂತೋಷದ ವಿಷಯವಾಗಿದೆ. ಅವರಿಗೆ ಕೇಂದ್ರ ಸಾಹಿತ್ಯ ಪರಿಷತ್ತು, ಜಿಲ್ಲಾಡಳಿತ ಹಾಗೂ ಮಂಡ್ಯ ಜಿಲ್ಲೆಯ ಪರವಾಗಿ ಅವರಿಗೆ ತುಂಬು ಹೃದಯದ ಅಭಿನಂದನೆಗಳನ್ನು ತಿಳಿಸಿದರು.

ರಾಜ್ಯದ ವಿವಿಧ ಭಾಗಗಳಿಂದ ಎಲ್ಲಾ ಸಾಹಿತಿಗಳು, ಕನ್ನಡಾಭಿಮಾನಿಗಳು, ಕನ್ನಡ ಪರ ಹೋರಾಟಗಾರರು, ಕನ್ನಡ ಸಂಘಟನೆಗಳು ಹಾಗೂ ಅನೇಕ ಗಣ್ಯರು ಸಮ್ಮೇಳನಕ್ಕೆ ಆಗಮಿಸಲಿದ್ದಾರೆ. ಸಮ್ಮೇಳನದ ಜವಾಬ್ದಾರಿಯು ಕೇಂದ್ರ ಸಾಹಿತ್ಯ ಪರಿಷತ್ತು, ಜಿಲ್ಲಾ ಸಾಹಿತ್ಯ ಪರಿಷತ್ತು, ಸರ್ಕಾರ, ಜಿಲ್ಲಾಡಳಿತ, ಜಿಲ್ಲೆಯ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರ ಮೇಲಿದ್ದು, ಕಾರ್ಯಕ್ರಮವನ್ನು ಸಂಪೂರ್ಣವಾಗಿ ಯಶಸ್ವಿಗೊಳಿಸಲು ಸಮ್ಮೇಳನಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದರು.

ಸಾಹಿತ್ಯ ಸಮ್ಮೇಳನಕ್ಕೆ ಸುಮಾರು 3 ಲಕ್ಷದಿಂದ 4 ಲಕ್ಷದವರೆಗೆ ಜನರು ಬರುತ್ತಾರೆ ಎಂದು ಅಂದಾಜಿಸಲಾಗಿದ್ದು, ಬರುವವರಿಗೆ ಊಟ, ಪಾರ್ಕಿಂಗ್ ವ್ಯವಸ್ಥೆ, ಘೋಷ್ಠಿ, ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗುವುದು. ಎಲ್ಲಾ ಸಮಿತಿಗಳೊಂದಿಗೆ ಚರ್ಚಿಸಿ ವೇದಿಕೆ ನಿರ್ಮಾಣದಿಂದ ಹಿಡಿದು ಸಮ್ಮೇಳನಕ್ಕೆ ಸೂಕ್ತ ಪಾರ್ಕಿಂಗ್ ವ್ಯವಸ್ಥೆಯವರೆಗೂ ಕ್ರಿಯಾಯೋಜನೆಯ ಪ್ರಕಾರ ಕೆಲಸಗಳು ಜರುಗುತ್ತಿವೆ. ಸಮ್ಮೇಳನ ಬಹಳ ಅಚ್ಚುಕಟ್ಟಾಗಿ ನಡೆಯಲು ಎಲ್ಲರ ಸಹಕಾರವು ಮುಖ್ಯವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಸಕರಾದ ದಿನೇಶ್ ಗೂಳಿಗೌಡ, ಮಧು ಜಿ.ಮಾದೇಗೌಡ, ಪಿ.ಎಂ.ನರೇಂದ್ರಸ್ವಾಮಿ, ಪಿ.ರವಿಕುಮಾರ್ ಗಣಿಗ, ಎ.ಬಿ.ರಮೇಶ ಬಂಡಿಸಿದ್ದೇಗೌಡ, ಕೆ.ವಿವೇಕಾನಂದ, ಜಿಲ್ಲಾಧಿಕಾರಿ ಡಾ. ಕುಮಾರ, ಜಿ.ಪಂ. ಸಿಇಓ ಶೇಖ್ ತನ್ವಿರ್ ಆಸೀಫ್, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜು, ಕೇಂದ್ರ ಕಸಾಪ ಅಧ್ಯಕ್ಷ ಮಹೇಶ್ ಜೋಶಿ, ಜಿಲ್ಲಾ ಕಸಾಪ ಸಂಚಾಲಕಿ ಡಾ.ಮೀರಾಶಿವಲಿಂಗಯ್ಯ, ನಗರಸಭೆ ಅಧ್ಯಕ್ಷ ಎಂ.ವಿ.ಪ್ರಕಾಶ್, ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಮುಡಾ ಅಧ್ಯಕ್ಷ ನಯೀಮ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಾಗಮಂಗಲ ಗಣಪತಿ ವಿಸರ್ಜನೆ ವೇಳೆ ಘರ್ಷಣೆ: ನಷ್ಟಕ್ಕೊಳಗಾದ ವರ್ತಕರಿಗೆ ಪರಿಹಾರ ವಿತರಣೆ

ಮಂಡ್ಯ, ನ.22– ಇತ್ತೀಚೆಗೆ ನಾಗಮಂಗಲದಲ್ಲಿ ಗಣಪತಿ ವಿಸರ್ಜನೆ ವೇಳೆ ಉಂಟಾದ ಗಲಭೆಯಲ್ಲಿ ಬೆಂಕಿಯ ಅವಘಡದಿಂದ ನಷ್ಟಕ್ಕೊಳಗಾಗಿದ್ದ 22 ಅಂಗಡಿ ಮಾಲೀಕರಿಗೆ 26.45 ಲಕ್ಷ ರೂ. ಹಾಗೂ 22 ವ್ಯಾಪಾರಸ್ಥರಿಗೆ 47.85 ಲಕ್ಷ ರೂ. ಪರಿಹಾರ ಮಂಜೂರಾತಿ ಪತ್ರವನ್ನು ಶುಕ್ರವಾರ ನಾಗಮಂಗಲ ತಾಲೂಕು ಕಚೇರಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ವಿತರಿಸಿದರು.



ವರ್ತಕರಿಗೆ ಉಸ್ತುವಾರಿ ಸಚಿವ ಎನ್.ಚಲುವರಾಯ ಸ್ವಾಮಿ ಪರಿಹಾರ ವಿತರಿಸಿದರು.

ಸುಮಾರು 22 ಜನ ವ್ಯಾಪರಸ್ಥರಿಗೆ ವೃತ್ತಿ ಜೀವನ ನಡೆಸಲು ತೊಂದರೆಯಾಗಿದ್ದರಿಂದ ವರ್ತಕರ ಕಷ್ಟವನ್ನು ಚಲುವರಾಯಸ್ವಾಮಿ, ಸಿಎಂ ಗಮನಕ್ಕೆ ತಂದು ಕೇವಲ 10 ಸಾವಿರ ಪರಿಹಾರ ನೀಡಿದರೆ ಜೀವನ ಕಟ್ಟಿಕೊಳ್ಳಲು ಕಷ್ಟಕರವಾಗುತ್ತದೆ ಎಂದು ತೊಂದರೆಗೊಳಗಾದ ವ್ಯಾಪಾರಸ್ಥರು ಹಾಗೂ ಅಂಗಡಿ ಮಾಲೀಕರ ಪರವಾಗಿ ಮನವಿ ಮಾಡಿ ಒಟ್ಟು 76 ಲಕ್ಷ ರೂ ಪರಿಹಾರ ಧನ ಕೊಡಿಸಿದ್ದಾರೆ.

ಬಳಿಕ ಮಾತನಾಡಿದ ಅವರು, ಸರ್ಕಾರದಿಂದ ಇಂತಹ ಅವಘಡ ಪ್ರಕರಣಗಳಲ್ಲಿ ಸುಮಾರು ಹತ್ತು ಸಾವಿರ ಮಾತ್ರ ಪರಿಹಾರ ನೀಡಲಾಗುತ್ತಿತ್ತು, ಇದರಿಂದ ವೃತ್ತಿ ಜೀವನ ಪುನಃ ಕಟ್ಟಿಕೊಳ್ಳಲು ಸಾಕಾಗುವುದಿಲ್ಲ ಎಂದು ಮನಗಂಡು ಸರ್ಕಾರ ಈ ಬಾರಿ ದೊಡ್ಡ ಮೊತ್ತದ ಪರಿಹಾರ ನೀಡಿದೆ ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಜಿಪಂ ಸಿಇಓ ಶೇಖ್ ತನ್ವೀರ್ ಆಸಿಫ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಮುಂದಿನ ವರ್ಷದಿಂದ 2000ಕ್ಕೆ ಹೆಚ್ಚಳ

ಆಗ ನಮ್ಮವ್ವ ಗೊಣಗಾಡಿಕೊಂಡು ಅನ್ನ ಕೊಡುತ್ತಿದ್ದಳು. ಅಂತಹ ಪರಿಸ್ಥಿತಿಯನ್ನು ಅನುಭವಿಸಿರುವುದರಿಂದ ಅನ್ನಭಾಗ್ಯ ಅನುಷ್ಠಾನಕ್ಕೆ ತಂದಿದ್ದು. ಕಾಲೇಜು ಸೇರಿದಾಗ ಹಾಸ್ಟೆಲ್ ಸಿಗದೆ ಒಂದು ವರ್ಷ ಬಾಡಿಗೆ ರೂಂನಲ್ಲಿದ್ದೆ. ಆದ್ದರಿಂದಲೇ ವಿದ್ಯಾಸಿರಿ ಯೋಜನೆ ಜಾರಿಗೆ ತಂದಿದ್ದು. ಹೈಸ್ಕೂಲ್‌ಗೆ ಹೋದಾಗಲೇ ನಾನು ಮೊದಲು ಚಪ್ಪಲಿ ಧರಿಸಿದ್ದು. ಅಂತಹ ಪರಿಸ್ಥಿತಿ ಈಗಿನ ಮಕ್ಕಳಿಗೆ ಬೇಡವೆಂದು ಶೂ ಭಾಗ್ಯ ನೀಡಲಾ ಯಿತು. ಕೆಎಂಎಫ್‌ನವರು ಹಾಲು ಸಂಗ್ರಹ ಹೆಚ್ಚಾಗಿದೆ ಎಂದಾಗ ಶಾಲಾ ಮಕ್ಕಳಿಗೆ ಉಚಿತ ವಾಗಿ ಹಾಲು ವಿತರಿಸಲು ಕಾರ್ಯಕ್ರಮ ರೂಪಿಸಲಾಯಿತು. ಈಗ ಆರು ದಿನ ಮೊಟ್ಟೆ ವಿತರಿಸಲಾಗುತ್ತಿದೆ ಎಂದು ತಿಳಿಸಿದರು.

ಎಲ್ಲರ ಮನೆಯವರಿಗೂ ಫ್ರೀ: ಹೆಣ್ಣು ಮಕ್ಕಳಿಗೆ ಉಚಿತ ಬಸ್ ಪ್ರಯಾಣ ಕಲ್ಪಿಸಿ ರುವ ಶಕ್ತಿ ಯೋಜನೆ ಬಗ್ಗೆ ಟೀಕೆ ಮಾಡುತ್ತಾರೆ. ಆದರೆ ಬೊಮ್ಮಾಯಿ, ಯಡಿಯೂರಪ್ಪ, ಅಶೋಕ್ ಅವರ ಮನೆಯ ಹೆಣ್ಣು ಮಕ್ಕಳೂ ಫ್ರೀಯಾಗೇ ಓಡಾಡೋದು. 1.22 ಕೋಟಿ ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆಯಡಿ ತಿಂಗಳಿಗೆ 2 ಸಾವಿರ ರೂ. ನೀಡಲಾಗುತ್ತಿದೆ. ಇದಕ್ಕೆ ವರ್ಷಕ್ಕೆ 32 ಸಾವಿರ ಕೋಟಿ ರೂ. ಬೇಕಿದೆ. ತಿಂಗಳಿಗೆ 200 ಯೂನಿಟ್‌ವರೆಗೆ ಉಚಿತವಾಗಿ ವಿದ್ಯುತ್ ನೀಡಲಾಗುತ್ತಿದೆ. ಈ ಎಲ್ಲಾ ಕಾರ್ಯಕ್ರಮಗಳಿಂದ ಅರ್ಹ ಕುಟುಂಬಕ್ಕೆ ವರ್ಷಕ್ಕೆ 50–60 ಸಾವಿರ ರೂ. ಉಳಿತಾಯವಾಗುತ್ತಿದೆ. ಅಶಕ್ತರು, ಬಡವರಿಗೆ ಆರ್ಥಿಕ ಹಾಗೂ ಸಾಮಾಜಿಕವಾಗಿ ಶಕ್ತಿ ತುಂಬುವುದು ನಮ್ಮ ಉದ್ದೇಶ ಎಂದರು.

ಪ್ರತಿಭೆ ಯಾರದೋ ಸ್ವತ್ತಲ್ಲ: ಶಿಕ್ಷಣ ಹಾಗೂ ಪ್ರತಿಭೆ ಯಾವುದೋ ಒಂದು ಜಾತಿ, ವರ್ಗದ ಸ್ವತ್ತಲ್ಲ. ಸುಪ್ತವಾದ ಪ್ರತಿಭೆಯನ್ನು ಗುರುತಿಸಿ, ವಿಕಸನಗೊಳಿಸುವುದೇ ಶಿಕ್ಷಣ ಎಂಬ ವಿವೇಕಾನಂದರ ಸಂದೇಶವನ್ನು ಅರ್ಥ ಮಾಡಿಕೊಳ್ಳಬೇಕು. ಹಾಗೆಯೇ ಶಿಕ್ಷಣದ ಜೊತೆಗೆ ನೀತಿ ಹಾಗೂ ಶಿಸ್ತು ರೂಢಿಸಿಕೊಳ್ಳಬೇಕು. ನಾನೂ ಕೂಡ ಎಸ್‌ಎಸ್‌ಎಲ್‌ಸಿವರೆಗೆ ನಂಬರ್ ಒನ್ ಆಗಿದ್ದೆ. ವಿದ್ಯಾವರ್ಧಕ ಹೈಸ್ಕೂಲ್‌ನಲ್ಲಿ ನಾನೇ ನಂಬರ್ ಒನ್. ಆದರೆ ಇಂಗ್ಲಿಷ್ ಮೀಡಿಯಂ ಹಾಗೂ ಆಸಕ್ತಿ ಕಡಿಮೆಯಾಗಿದ್ದರಿಂದ ಪಿಯುಸಿಯಿಂದ ಎಲ್‌ಎಲ್‌ಬಿವರೆಗೆ ಸೆಕೆಂಡ್ ಕ್ಲಾಸ್ ಮೀರಲಿಲ್ಲ. ಶೇ.95ರಷ್ಟು ಅಂಕ ಗಳಿಸುವುದು ಸುಲಭವಲ್ಲ. ಪರಿಶ್ರಮದಿಂದ ನಿರಂತರ ಅಧ್ಯಯನದಿಂದ ಮಾತ್ರ ಅಷ್ಟು ಅಂಕ ಗಳಿಸಲು ಸಾಧ್ಯ. ನಿತ್ಯ ತರಗತಿಗೆ ಹಾಜರಾಗಿ ದಿನಕ್ಕೆ ಐದಾರು ಗಂಟೆ ಅಧ್ಯಯನ ಮಾಡಬೇಕು. ನಾವು 2ಎ ಕೆಟಗರಿಗೆ ಸೇರಿದವರು. ಹೆಚ್ಚು ಅಂಕ ಪಡೆದರೆ ಮಾತ್ರ ಉದ್ಯೋಗ ಸಿಗುತ್ತದೆ. ವರ್ಗಕ್ಕೆ ಸೀಮಿತವಾಗದೆ ಜನರಲ್ ಮೆರಿಟ್‌ನಲ್ಲಿ ಉದ್ಯೋಗ ಪಡೆಯಲು ಶ್ರಮಿಸಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಜಾತಿಗೆ ಜೋತು ಬೀಳಬಾರದು: ಎಷ್ಟೇ ಬೆಳೆದರೂ ನಾವು ಯಾವ ಸಮುದಾಯ, ಸಮಾಜದಿಂದ ಬಂದಿದ್ದೇವೆ ಎಂಬುದನ್ನು ಮರೆಯಬಾರದು. ಪಟ್ಟಭದ್ರರು ಸ್ವಾರ್ಥಕ್ಕಾಗಿ ಜಾತಿ ವ್ಯವಸ್ಥೆ ಮಾಡಿದ್ದು. ಆದರೆ ನಾವೆಲ್ಲಾ ಮಾನವರು ಎಂಬುದನ್ನು ಮರೆಯಬಾರದು. ಜಾತಿ ಹೆಸರೇಳಬೇಡಿ ಎನ್ನುವುದಿಲ್ಲ, ಆದರೆ ಜಾತಿಗೆ ಜೋತು ಬೀಳಬಾರದು. ಅನ್ಯ ಜಾತಿ ಹಾಗೂ ಧರ್ಮವನ್ನು ದ್ವೇಷಿಸಬಾರದು. ಪರಸ್ಪರ ಪ್ರೀತಿ–ವಿಶ್ವಾಸ ಬೆಸೆಯಬೇಕು. ಯಾವುದೇ ಕ್ಷೇತ್ರದಲ್ಲಿದ್ದರೂ ಸಮಸಮಾಜ ಪ್ರಮುಖ ಉದ್ದೇಶವಾಗಬೇಕು. ತುಳಿತಕ್ಕೊಳಗಾದವರು, ವಂಚಿತರಿಗೆ ಸಹಾಯ ಮಾಡಬೇಕು. ಹುಟ್ಟು ಆಕಸ್ಮಿಕ ಆದರೆ ಸಾವು ಗ್ಯಾರಂಟಿ. ನಡುವಿನ ಜೀವನವನ್ನು ಸಾರ್ಥಕ ಮಾಡಿಕೊಳ್ಳಬೇಕು. ಕನಕದಾಸರು ಹಾಗೂ ಬಸವಣ್ಣನವರು ಇದನ್ನೇ ಹೇಳಿರುವುದು. ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕ ಸಮಾನತೆಯಿಂದ ಮಾತ್ರ ಜಾತಿ ವ್ಯವಸ್ಥೆ ಅಳಿಯುತ್ತದೆ. ರಾಷ್ಟ್ರಕವಿ ಕುವೆಂಪು ಅವರು ತಿಳಿಹೇಳಿರುವಂತೆ ನಾವೆಲ್ಲಾ ಅಲ್ಪಮಾನವರಾಗದೆ ವಿಶ್ವಮಾನವರಾಗಿ ಸಮಾಜವನ್ನು ಸರ್ವಜನಾಂಗದ ಶಾಂತಿಯ ತೋಟ ಮಾಡಲು ಪ್ರಯತ್ನಿಸೋಣ ಎಂದರು.

ಸಾರಿಗೆ ಸಚಿವನಾಗಿದ್ದಾಗ ಆರಂಭ: ಎಸ್.ಆರ್. ಬೊಮ್ಮಾಯಿ ಅವರ ಮಂತ್ರಿಮಂಡಲದಲ್ಲಿ ನಾನು ಸಾರಿಗೆ ಸಚಿವನಾಗಿದ್ದಾಗ 1988ರಲ್ಲಿ ಸರ್ಕಾರದ ವತಿಯಿಂದ ಕನಕದಾಸರ 500ನೇ ಜಯಂತ್ಯೋತ್ಸವ ಆಚರಣೆ ಮಾಡಿಸಿದೆ. ಅಂದಿನಿಂದ ಎಲ್ಲಾ ಜಿಲ್ಲೆ, ತಾಲೂಕುಗಳಲ್ಲೂ ಜಯಂತ್ಯೋತ್ಸವ ಆಚರಣೆ ಶುರುವಾಯಿತು ಎಂದು ತಿಳಿಸಿದ ಸಿದ್ದರಾಮಯ್ಯ, ಸಭಿಕರ ಅಪೇಕ್ಷೆಯಂತೆ ಯಾರಿಗೂ ಕಾಣದಂತೆ ಬಾಳೆಹಣ್ಣು ಸೇವಿಸಬೇಕೆಂಬ ಪರೀಕ್ಷೆ, ಕನಕನ ಕಿಂಡಿಯಲ್ಲಿ ಶ್ರೀಕೃಷ್ಣ ದರ್ಶನ ನೀಡಿದ್ದು, ರಾಮಧಾನ್ಯ ಚರಿತೆ ಸೇರಿದಂತೆ ಕನಕದಾಸರಿಗೆ ಸಂಬಂಧಿಸಿದ ಕತೆಗಳನ್ನು ಒಂದರ ಹಿಂದೊಂದು ಹೇಳಿದರು.

ಕನಕ ಒಬ್ಬ ಸಾಹಿತಿ, ಸಂತ, ಸಮಾಜ ಸುಧಾರಕ, ದಾರ್ಶನಿಕ. ಅವರ ತಂದೆ–ತಾಯಿ ತಿರುಪತಿ ತಿಮ್ಮಪ್ಪನಿಗೆ ಹರಕೆ ಹೊತ್ತಿದ್ದರಿಂದ ಮಗುವಿಗೆ ತಿಮ್ಮಪ್ಪ ಎಂದು ನಾಮಕರಣ ಮಾಡಿದರು. ಪಾಳೆಗಾರರಾಗಿದ್ದಾಗ ತಿಮ್ಮಪ್ಪನಾಯಕ, ಚಿನ್ನದಾನ ಮಾಡಿದ ನಂತರ ಕನಕನಾಯಕ, ಬಳಿಕ ಕನಕ ದಾಸರಾದರು. ವ್ಯಾಸರಾಯರ ಶಿಷ್ಯರಾಗಿದ್ದಾಗ ಕುರುಬ, ಶೂದ್ರ ಎಂಬ ಅಪಮಾನಕ್ಕೆ ಒಳಗಾದರು. ಗುರುಗಳು ನೀಡಿದ ಪರೀಕ್ಷೆಯಲ್ಲಿ ಗೆದ್ದರು. ಮೇಲ್ಜಾತಿಯವರು ಕೃಷ್ಣನ ದೇವಸ್ಥಾನಕ್ಕೆ ಬಿಡದಿದ್ದಾಗ ಭಕ್ತಿಯಿಂದ ದೇವರನ್ನೇ ತಿರುಗಿಸಿದರು. ಕೃಷ್ಣನನ್ನು ನೇರವಾಗಿ ಕಂಡವರು ಯಾರಾದರೂ ಇದ್ದರೆ ಅವರು ಕನಕದಾಸರು. ಕೆಲವರು ಕನಕನ ಕಿಂಡಿ ಹಾಗೂ ಗೋಪುರ ಮುಚ್ಚುವ ಪ್ರಯತ್ನ ನಡೆಸಿದ್ದರು. ಆದರೆ ನಾವು ಪ್ರತಿಭಟಿಸಿದ್ದರಿಂದ ಸಾಧ್ಯವಾಗಲಿಲ್ಲ ಎಂದರು.

ಸಮಾರಂಭದಲ್ಲಿ ಕಳೆದೆರಡು ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿರುವ ನೂರಾರು ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಇದೇ ವೇಳೆ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು. ಶ್ರೀ ಕಾಗಿನೆಲೆ ಕನಕ ಗುರುಪೀಠ ಶಾಖಾಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಮಿತಿ ಅಧ್ಯಕ್ಷ ಎಂ.ಕೆ.ಸೋಮಶೇಖರ್, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ಮೈಸೂರಲ್ಲಿ ಬಾಳೆ ಮೇಳ

ಕಾಣಬಹುದಾಗಿದ್ದು, ಕೇರಳದ ವಿನೋದ್ ನಾಯರ್ 120 ಬಗೆಯ ಬಾಳೆ ತಳಿಗಳನ್ನು ಪ್ರದರ್ಶನಕ್ಕೆ ತಂದಿದ್ದಾರೆ. ಪೂಜಾ ಕದಳಿ, ಮಟ್ಟಿ, ಬ್ಲೂ ಜಾವ, ಮೊಟ್ಟ ಪೂವನ್, ಸಹಸ್ರ ಪೂವನ್, ಚಮ್ಮಟ್ಟಿ ಮೊದಲಾದ ಅಪ ರೂಪದ ತಳಿಗಳಿವೆ. ಹಾಗೇ ಶಿರಸಿಯ ಪ್ರಸಾದ್ ರಾಮ ಹೆಗಡೆ ಅಪರೂಪದ ಬಾಳೆ ಮತ್ತು ಕಂದುಗಳನ್ನು ಮೇಳದಲ್ಲಿ ಪರಿಚಯಿಸಿದ್ದು, 16 ಅಡಿ ಉದ್ದದ ಸಹಸ್ರ ಬಾಳೆ, ಕರಿ ಬಾಳೆ, ಕಲ್ಲು ಬಾಳೆ, ಊಟದ ಎಲೆಗೆ ಬಾಳೆ ಜೊತೆಗೆ ಇಡೀ ಗಿಡವೇ ಕೆಂಪಾಗಿರುವ ಬಾಳೆ ತಳಿಗಳೂ ಕೂಡ ಬಾಳೆ ಪ್ರಿಯರನ್ನು ಆಕರ್ಷಿಸುತ್ತಿದೆ.

ಬಾಯಿ ಚಪ್ಪರಿಸುವ ಬಾಳೆ ತಿನಿಸುಗಳು: ಬಾಳೆ ಮೇಳದಲ್ಲಿ ಬಾಳೆಯಿಂದ ಮಾಡಿದ ಹತ್ತಾರು ತಿಂಡಿ ತಿನಿಸುಗಳು ಬಾಯಿಲ್ಲಿ ನೀರು ತರಿಸುವ ಬಾಳೆ ಗೆಡ್ಡೆ ಯಿಂದ ದೋಸೆ, ಬಾಳೆ ಹಣ್ಣಿನ ಹೋಳಿಗೆ, ಬಾಳೆ ಹೂ ಬಜ್ಜಿ ಮತ್ತು ವಡೆ, ಬಾಳೆ ಹಣ್ಣಿನ ಹಲ್ವ, ಬಾಳೆ ಹಣ್ಣಿನ ಚಿಪ್ಸ್, 12 ಬಗೆಯ ಬಾಳೆ ಬಳಸಿ ಮಾಡಿದ ಪಾಯಸ, ಬಾಳೆ ಹಣ್ಣಿನ ರಸಾಯನ, ಬಾಳೆ ಕೇಕ್, ಬಾಳೆ ದಿಂಡಿನ ಸೂಪ್ , ಬಾಳೆ ಹೂವಿನ ತೊಕ್ಕು, ಬಾಳೆ ದಿಂಡಿನ ಜ್ಯೂಸ್, ಬಾಳೆ ದಿಂಡಿನ ಉಪ್ಪಿನಕಾಯಿ ಪ್ರದರ್ಶನ ಮತ್ತು ಮಾರಾಟಕ್ಕೆ ಇಡಲಾಗಿದೆ. ಜೊತೆಗೆ ಬಾಳೆ ಬೆಳೆಯುವವರಿಗೆ ಏಲಕ್ಕಿ ಬಾಳೆ, ನಂಜನಗೂಡು ರಸಬಾಳೆ, ಚಂದ್ರಬಾಳೆ, ನೇಂದ್ರ ಬಾಳೆ, ಮದರಂಗ, ಬೂದು ಬಾಳೆ , ಮಟ್ಟಿ ಮೊದಲಾದ ಬಾಳೆ ಕಂದುಗಳು ಮಾರಾಟಕ್ಕೆ ಸಿಗುತ್ತವೆ. ಹೆಚ್.ಡಿ.ಕೋಟೆಯ ಹುಲಿಕಾಡು ರೈತ ಉತ್ಪಾದಕರ ಕಂಪನಿಯವರು ಪೂಜೆ ಬಾಳೆ, ನೇಂದ್ರ ಬಾಳೆ, ಪಚ್ಚ ಬಾಳೆ, ಏಲಕ್ಕಿ ಬಾಳೆ ಮತ್ತು ಚಂದ್ರ ಬಾಳೆ ಹಣ್ಣುಗಳನ್ನು ಮಾರಾಟಕ್ಕೆ ಇಟ್ಟಿದ್ದಾರೆ.

ನ.23ರಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಶಿವನಾಪುರ ರಮೇಶ್ ಮತ್ತು ಸುತ್ತೂರಿನ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ನವೀನ್, ಸಾವಯವದಲ್ಲಿ ಬಾಳೆ ಬೆಳೆಯುವ ಬಗ್ಗೆ ರೈತರಿಗೆ ಮಾಹಿತಿ ನೀಡಲಿದ್ದಾರೆ. ಭಾನುವಾರ ಬೆಳಿಗ್ಗೆ 10.30 ಕ್ಕೆ ಮಕ್ಕಳ ಚಿತ್ರಕಲಾ ಸ್ಪರ್ಧೆ ಮತ್ತು ಮಧ್ಯಾಹ್ನ 12 ಘಂಟೆಗೆ ಬಾಳೆ ಅಡುಗೆ ಸ್ಪರ್ಧೆ ಏರ್ಪಡಿಸಲಾಗಿದ್ದು ಹೆಚ್ಚಿನ ಮಾಹಿತಿಗಾಗಿ ವಿವರಗಳಿಗೆ 7090009944 ಸಂಪರ್ಕಿಸಿ.

ಚನ್ನಪಟ್ಟಣದಲ್ಲಿ ನಮದೇ ಗೆಲುವು

ಬಗ್ಗೆ ಹೆಚ್ಚು ತಿಳಿದಿಲ್ಲ, ಆದರೆ, ಎಐಸಿಸಿ ಅಧ್ಯಕ್ಷ ಮಲ್ಲಿ ಕಾರ್ಜುನ್ ಖರ್ಗೆ ಸರಳ ಬಹುಮತ ಪಡೆದು ಸರ್ಕಾರ ರಚನೆ ಮಾಡುತ್ತೇವೆ ಎಂದಿದ್ದಾರೆ. ನಾನು ಕೂಡ ಪ್ರಚಾರಕ್ಕೆ ಹೋಗಿದ್ದೆ, ಕಾಂಗ್ರೆಸ್ ಪರ ಅಲೆ ಕಂಡಿತು. ಆದರೆ ಮತಪೆಟ್ಟಿಗೆಯಲ್ಲಿ ಏನಿದೆ ಎಂಬುದು ಯಾರಿಗೂ ತಿಳಿಯುವುದಿಲ್ಲ. ಜಾರ್ಖಂಡ್ ವಿಧಾನಸಭಾ ಚುನಾವಣಾ ಫಲಿತಾಂಶದ ಬಗ್ಗೆಯಂತೂ ಗೊತ್ತಿಲ್ಲ ಎಂದರು.

ಜಮೀರ್ ವಿರುದ್ಧ ಕ್ರಮವಿಲ್ಲ: ಕುಮಾರ ಸ್ವಾಮಿ ಅವರ ಮೈ ಬಣ್ಣದ ಬಗ್ಗೆ ಮಾತ ನಾಡಿದ ಸಚಿವ ಜಮೀರ್ ಅಹಮ್ಮದ್ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಅವರು ಉತ್ತಮ ಕೆಲಸಗಾರ, ಇದು ಪಕ್ಷದ ಆಂತರಿಕ ವಿಚಾರ. ಅವರಿಗೆ ಬುದ್ಧಿ ಹೇಳಲಾಗಿದೆ, ಆತುರದಲ್ಲಿ ಒಂದಷ್ಟು ಹೇಳಿಕೆ ಕೊಟ್ಟಿದ್ದಾರೆ. ಇದು ತಪ್ಪು ಎಂಬುದಾಗಿ ಪಕ್ಷದ ಅಧ್ಯಕ್ಷನಾಗಿ ನಾನೇ ಅವರಿಗೆ ಬುದ್ಧಿ ಹೇಳಿದ್ದೇನೆ. ನನ್ನ ಹೊರತಾಗಿ ಮತ್ತಿನ್ಯಾರು ಅವರಿಗೆ ಬುದ್ಧಿವಾದ ಹೇಳಬೇಕು. ಜಮೀರ್ ತಮ್ಮ ಹೇಳಿಕೆಗೆ ಈಗಾಗಲೇ ಕ್ಷಮೆ ಕೇಳಿದ್ದಾರೆ. ಅವರಿಗೆ ತಮ್ಮ ತಪ್ಪಿನ ಅರಿವಾಗಿದೆ ಎಂದರು. ಸಂಪುಟ ವಿಸ್ತ ರಣೆಯ ಬಗೆಗಿನ ಊಹಾಪೋಹಗಳಿಗೆ ಪ್ರತಿಕ್ರಿಯಿಸಿ, ನಾನು ಮುಖ್ಯಮಂತ್ರಿ ಅಲ್ಲ, ಸಿದ್ದರಾಮಯ್ಯ ನಮ್ಮ ಮುಖ್ಯಮಂತ್ರಿ, ಇದರ ಬಗ್ಗೆ ಅವರು ಉತ್ತರಿಸುತ್ತಾರೆ ಎಂದರು.

ಪ್ರಜ್ವಲ್ ಜಾಮೀನು ಅರ್ಜಿ ವಜಾ

ಕಳೆದ ವಾರವಷ್ಟೇ ಪ್ರಜ್ವಲ್ ರೇವಣ್ಣಗೆ ಸುಪ್ರೀಂಕೋರ್ಟ್‌ನಲ್ಲೂ ಭಾರೀ ಹಿನ್ನಡೆಯಾಗಿತ್ತು. ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ಜಾಮೀನು ನೀಡಲು ನಿರಾಕರಿಸಿದ ಕರ್ನಾಟಕ ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಪ್ರಜ್ವಲ್ ರೇವಣ್ಣ ಮೇಲ್ಮನವಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬೇಲಾ ಎಂ ತ್ರಿವೇದಿ ಮತ್ತು ಸತೀಶ್ ಚಂದ್ರ ಶರ್ಮಾ ಅವರನ್ನೊಳಗೊಂಡ ದ್ವಿಸದಸ್ಯ ಪೀಠ, ಹೈಕೋರ್ಟ್ ಆದೇಶವನ್ನು ಎತ್ತಿ ಹಿಡಿದಿದ್ದು, ಪ್ರಜ್ವಲ್ ರೇವಣ್ಣ ಅವರ ಅರ್ಜಿಯನ್ನು ವಜಾಗೊಳಿಸಿತ್ತು.

ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಮೈಸೂರಲ್ಲಿ 'ಕ್ವೆಸ್ಟ್ ಅಕಾಡೆಮಿ' ನೂತನ ಶಾಲೆ ಉದ್ಘಾಟನೆ





ಮೈಸೂರಿನ ಸುಭಾಷ್‌ನಗರದಲ್ಲಿ ಸಿದ್ಧಾರ್ಥ ಎಜುಕೇಷನ್ ಸೊಸೈಟಿ ವತಿಯಿಂದ ನಿರ್ಮಿಸಿರುವ 'ಕ್ವೆಸ್ಟ್ ಅಕಾಡೆಮಿ' ನೂತನ ಶಾಲೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಉದ್ಘಾಟಿಸಿದರು. ಚಿತ್ರದಲ್ಲಿ ಶ್ರೀ ಸಿದ್ಧಾರ್ಥ ಎಜುಕೇಷನ್ ಸೊಸೈಟಿ ಅಧ್ಯಕ್ಷರಾದ ಗೃಹ ಸಚಿವ ಡಾ. ಜಿ.ಪರಮೇಶ್ವರ್, ಪತ್ನಿ ಕನ್ನಿಕಾ ಪರಮೇಶ್ವರಿ, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಸಚಿವ ಕೆ.ವೆಂಕಟೇಶ್, ಶಾಸಕ ತನ್ವೀರ್ ಸೇಠ್ ಹಾಗೂ ಇತರರಿದ್ದಾರೆ. ಶಾಲಾ ಕಟ್ಟಡವನ್ನು ಎಡಚಿತ್ರದಲ್ಲಿ ಕಾಣಬಹುದು.

ಮೈಸೂರು, ನ.22(ಆರ್‌ಕೆ)–ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅಧ್ಯಕ್ಷರಾಗಿರುವ ತುಮಕೂರಿನ ಶ್ರೀ ಸಿದ್ಧಾರ್ಥ ಎಜುಕೇಷನ್ ಸೊಸೈಟಿ ವತಿಯಿಂದ ಮೈಸೂರಿನ ಸುಭಾಷ್‌ನಗರದಲ್ಲಿ ನಿರ್ಮಿಸಿರುವ 'ಕ್ವೆಸ್ಟ್ ಅಕಾಡೆಮಿ' ನೂತನ ಶಾಲೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಉದ್ಘಾಟಿಸಿದರು.

ಟೇಪು ಕತ್ತರಿಸುವ ಮೂಲಕ ಉದ್ಘಾಟಿಸಿದ ಬಳಿಕ ತರಗತಿ ಕೊಠಡಿ, ಪ್ರಾಂಶುಪಾಲರ ಕಚೇರಿ, ಸಭಾಂಗಣ, ಆಟದ ಮೈದಾನ, ಗ್ರಂಥಾಲಯ ಕೊಠಡಿಗಳನ್ನು ವೀಕ್ಷಿಸಿದ ಅವರು, ಸಂಸ್ಥೆಯಲ್ಲಿ ಒದಗಿಸಿರುವ ಮೂಲ ಶೈಕ್ಷಣಿಕ ಸೌಲಭ್ಯಗಳನ್ನು ಪರಿಶೀಲಿಸಿದರು. ಮುಖ್ಯಮಂತ್ರಿಗಳಿಗೆ ಡಾ. ಪರಮೇಶ್ವರ್ ಮಾಹಿತಿ ನೀಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಸಚಿವ ಕೆ.ವೆಂಕಟೇಶ್, ಶಾಸಕರಾದ ತನ್ವೀರ್ ಸೇಠ್, ಎ.ಆರ್.ಕೃಷ್ಣಮೂರ್ತಿ, ವಿಧಾನ ಪರಿಷತ್ ಸದಸ್ಯ ಡಾ. ಡಿ.ತಿಮ್ಮಯ್ಯ, ಖ್ಯಾತ ಶಿಕ್ಷಣ ತಜ್ಞ ಡಾ. ಅಬ್ರಾಹಂ ಎಬನೇಜರ್, ಶ್ರೀ ಸಿದ್ಧಾರ್ಥ ಎಜುಕೇಷನ್ ಸೊಸೈಟಿ ಟ್ರಸ್ಟಿ ಕನ್ನಿಕಾ ಪರಮೇಶ್ವರಿ, ಆಡಳಿತ ಮಂಡಳಿ ಸದಸ್ಯ ಹೆಚ್.ಕೆ.ಕುಮಾರಸ್ವಾಮಿ, ಪ್ರಿನ್ಸಿಪಾಲ್ ಡಾ. ವೀಣಾಮಣಿ ಸೇರಿದಂತೆ ಹಲವರು ಈ ಸಂದರ್ಭ ಉಪಸ್ಥಿತರಿದ್ದರು.

ನಂತರ ನಡೆದ ಸಮಾರಂಭದಲ್ಲಿ ಸಂಸ್ಥೆ ಅಧ್ಯಕ್ಷರಾದ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರು, ಸಿಎಂ ಸೇರಿದಂತೆ ಗಣ್ಯರನ್ನು ಸ್ವಾಗತಿಸಿ ಎಜುಕೇಷನ್ ಸೊಸೈಟಿ ಹಿನ್ನೆಲೆ, ಬೆಳೆದು ಬಂದ ದಾರಿ, ಮೈಸೂರಲ್ಲಿ ಕ್ವೆಸ್ಟ್ ಅಕಾಡೆಮಿ ಶಾಲೆ ಸ್ಥಾಪನೆ ಸಂಬಂಧ ಪ್ರಾಸ್ತಾವಿಕವಾಗಿ ಮಾತನಾಡಿದರು.

ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯಿತ್ರಿ, ದಕ್ಷಿಣ ವಲಯ ಡಿಐಜಿ ಡಾ. ಬೋರಲಿಂಗಯ್ಯ, ನಗರ ಪೊಲೀಸ್ ಕಮಿಷ್ನರ್ ಸೀಮಾ ಲಾಟ್ಕರ್, ನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಸೇರಿದಂತೆ ಹಲವು ಇಲಾಖೆಗಳ ಅಧಿಕಾರಿಗಳು, ಶಿಕ್ಷಣ ತಜ್ಞರು ಸೇರಿದಂತೆ ಹಲವರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಮನುಷ್ಯ ಮನುಷ್ಯನನ್ನು ಪ್ರೀತಿಸುವ ಶಿಕ್ಷಣ ಕೊಡಬೇಕು

ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮತ

ಮೈಸೂರು, ನ.22(ಆರ್‌ಕೆ)–ಮನುಷ್ಯ ಮನುಷ್ಯನನ್ನು ಪ್ರೀತಿಸುವಂತಹ ಶಿಕ್ಷಣವನ್ನು ಮಕ್ಕಳಿಗೆ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಶ್ರೀ ಸಿದ್ಧಾರ್ಥ ಎಜುಕೇಷನ್ ಸೊಸೈಟಿ ವತಿಯಿಂದ ಮೈಸೂರಿನ ಶುಭಾಷ್ ನಗರದಲ್ಲಿ ನಿರ್ಮಿಸಿರುವ ಕ್ವೆಸ್ಟ್ ಅಕಾಡೆಮಿ ನೂತನ ಶಾಲೆ ಉದ್ಘಾಟಿಸಿ ಮಾತನಾಡಿದ ಅವರು, ಜಾತೀಯತೆ, ಮೇಲು–ಕೀಳು ಎಂಬ ಭೇದ–ಭಾವವಿಲ್ಲದೆ ಸಮಾಜಕ್ಕೆ ಸ್ಪಂದಿಸುವ, ಬಡವರು, ದೀನ–ದಲಿತರು, ನಿರ್ಗತಿಕರಿಗೆ ಸೇವೆ ಮಾಡುವಂತಹ ಶಿಕ್ಷಣದ ಅಗತ್ಯವಿದೆ ಎಂದರು.

'ಇವನಾರವ... ಇವನಾರವ...' ಎಂದು ಬಸವಾದಿ ಶರಣರು ವಚನಗಳನ್ನು ಹೇಳಿದ್ದಾರೆ ಆದರೆ, ಮತ್ತೊಂದೆಡೆ 'ಇವ ನಮ್ಮ ಜಾತಿಯವ' ಎನ್ನುತ್ತಾರೆ. ನಮಗೆ ಬೇಕಿರುವುದು ಮೌಢ್ಯ ಕಂದಾಚಾರದ ಶಿಕ್ಷಣವಲ್ಲ. ಜಾತಿ, ಹಣದ ಮೇಲೆ ಪ್ರೀತಿಸುವ ಬದಲಿಗೆ ಮಾನವೀಯ ಮೌಲ್ಯಗಳ ಆಧಾರದ ಮೇಲೆ ಪ್ರೀತಿಸುವಂತಹ ಅರಿವು ಉಂಟು ಮಾಡುವ ಶಿಕ್ಷಣ ಬೇಕು ಎಂದು ಅವರು ನುಡಿದರು.

ಮನುಷ್ಯ ಮನುಷ್ಯನನ್ನು ಪ್ರೀತಿಸುವ ಶಿಕ್ಷಣ ನೀಡುವ ಅಗತ್ಯವಿದೆ. ಸ್ವಾತಂತ್ರ್ಯಾನಂತರ ಈಗ ಶಿಕ್ಷಣ ಪ್ರತಿಯೊಬ್ಬರ ಹಕ್ಕಾಗಿದೆ. ಹಣೆಬರಹ ಎನ್ನುತ್ತಾರಲ್ಲಾ, ನಮ್ಮ ಹಣೆ ಮೇಲೆ ಬರೆದದ್ದನ್ನು ಯಾರೂ ನೋಡಿಲ್ಲ. ಹಿಂದಿನ–ಮುಂದಿನ ಜನ್ಮಕ್ಕಿಂತ ಈಗ ಮನುಷ್ಯನಾಗಿ ಇರುವುದು ಮುಖ್ಯ ಎಂದ ಸಿದ್ದರಾಮಯ್ಯ, ನಮ್ಮಪ್ಪನಿಗೆ ನಾವು 4 ಮಂದಿ ಗಂಡು ಮಕ್ಕಳು ಮೂವರು ಹೊಲ ಉಳುತ್ತಿದ್ದಾರೆ. ನಾನು ಮುಖ್ಯಮಂತ್ರಿಯಾಗಿದ್ದೇನೆ. ಹಾಗಾದರೆ ಬ್ರಹ್ಮ ಬರೆದುಬಿಟ್ಟ ಎಂದರೆ ಹೇಗೆ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ನಾವು ಎಲ್ಲರೂ ಒಂದೇ ರೀತಿ ಇರಲು ಸಾಧ್ಯವೇ? ವಿದ್ಯಾವಂತರೇ ಜಾತಿ ಮಾಡುವವರು. 'ಇವನು ನಮ್ಮ ಜಾತಿಯವನು. ಓಟಾಕೋಣ. ಅವನು ನಮ್ಮವನಲ್ಲ ಓಟಾಕೋದು ಬೇಡ' ಅಂತಾರೆ ಎಂದ ಅವರು, ಜಾತಿಯವನು ಏನಾಗಿದ್ದರೂ ಸರಿ, ಆತನೇ ಬೇಕೆನ್ನುವ ಮನಸ್ಥಿತಿಯಾಗಿದೆ ಎಂದು ನುಡಿದರು.

ದೇಶದಲ್ಲಿ ಸಮಾನತೆ ಬರಬೇಕಾದರೆ ಅಧಿಕಾರ ಮತ್ತು ಸಂಪತ್ತು ಹಂಚಿಕೆ ಆಗಬೇಕು. ಅಸಮಾನತೆ ತೊಡೆದು ಸಮ ಸಮಾಜ ನಿರ್ಮಿಸಿದ್ದಲ್ಲಿ ಮಾತ್ರ ತಳ ಸಮುದಾಯದ ಜನರು ಮುಖ್ಯವಾಹಿನಿಗೆ ಬರಲು ಸಾಧ್ಯ ಎಂದ ಮುಖ್ಯಮಂತ್ರಿಗಳು, ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದೆ. ಆದರೆ ಆರ್ಥಿಕ, ಸಾಮಾಜಿಕ ಸಮಾನತೆ ಸಿಗಬೇಕಿದೆ ಎಂದು ಇದೇ ಸಂದರ್ಭ ನುಡಿದರು.

ಸಿದ್ಧಾರ್ಥ ಶಿಕ್ಷಣ ಸಂಸ್ಥೆಯು 85 ವಿದ್ಯಾಕೇಂದ್ರಗಳ ಮೂಲಕ ಪ್ರಾಥಮಿಕ ಶಾಲೆಯಿಂದ ಪದವಿಯವರೆಗೆ ವೈಚಾರಿಕ ಮತ್ತು ವೈಜ್ಞಾನಿಕ ಶಿಕ್ಷಣ ನೀಡುತ್ತಿದ್ದು, ವ್ಯಕ್ತಿ ವಿಕಸನಕ್ಕೆ ಮಾನವೀಯ ಮೌಲ್ಯ ವರ್ಧನೆಗೆ ಶ್ರಮಿಸುತ್ತಿದೆ. ಇಂಜಿನಿಯರಿಂಗ್, ಮೆಡಿಕಲ್ ಅಥವಾ ಇನ್ನಾವುದೇ ಪದವಿ ಗಳಿಸಿದರೂ, ಅದನ್ನು ಸಮಾಜಕ್ಕೆ ಸ್ಪಂದಿಸಲು ಬಳಸಬೇಕು ಎಂದು ಮುಖ್ಯಮಂತ್ರಿಗಳು ಇದೇ ವೇಳೆ ನುಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಕ್ವೆಸ್ಟ್ ಅಕಾಡೆಮಿ ಮುಖ್ಯಸ್ಥರಾದ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರೂ ಸಮಾರಂಭದಲ್ಲಿ ಮಾತನಾಡಿದರು.

ಕಾಂಗ್ರೆಸ್ ಹೈಕಮಾಂಡ್ ಎಲ್ಲಾ ಸಚಿವರ ರಿಪೋರ್ಟ್ ಕಾರ್ಡ್ ಕೇಳಿದೆ

ಮೈಸೂರು, ನ.22(ಬಿಎಲ್‌ಯು)–ಕಾಂಗ್ರೆಸ್ ಹೈಕಮಾಂಡ್ ರಾಜ್ಯ ಸರ್ಕಾರದ ಎಲ್ಲಾ ಸಚಿವರ ರಿಪೋರ್ಟ್ ಕಾರ್ಡ್ ಕೇಳಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದರು.



ನಗರದ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಈಗಾಗಲೇ ನನ್ನ ರಿಪೋರ್ಟ್ ಕಾರ್ಡ್‌ನ್ನು ಹೈಕಮಾಂಡ್‌ಗೆ ನೀಡಿದ್ದೇನೆ ಎಂದರು.

ಗುಲಾಂ ನಬಿ ಆಜಾದ್ ಕಾಂಗ್ರೆಸ್‌ನಲ್ಲಿ ಇದ್ದಾಗ ಕೂಡ ಇದೇ ರೀತಿ ವರದಿ ನೀಡುತ್ತಿದ್ದೆವು. ಈಗ ಅದೇ ಮಾದರಿಯಲ್ಲಿ ವರದಿ ಕೇಳಿದ್ದು, ಕೊಟ್ಟಿದ್ದೇನೆ ಎಂದು ಹೇಳಿದರು.

ಸಚಿವ ಸಂಪುಟ ಪುನರ್ ರಚನೆ ಬಗ್ಗೆ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಯಾರನ್ನು ಉಳಿಸಿಕೊಳ್ಳಬೇಕು, ಯಾರನ್ನು ಮುಂದುವರೆಸಬೇಕು ಎಂಬುದನ್ನು ಹೈಕಮಾಂಡ್ ನಿರ್ಧರಿಸಲಿದೆ. ರಾಜಕೀಯದಲ್ಲಿ ಯಾವಾಗ, ಏನಾಗುತ್ತದೆಯೋ ತಿಳಿಯದು ಎಂಬ ನಿನ್ನೆಯ ತಮ್ಮ ಹೇಳಿಕೆಗೆ ಸ್ಪಷ್ಟನೆ ನೀಡಿದ ಡಾ.ಪರಮೇಶ್ವರ್, ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗಿದೆ. ನಾನು ಆ ರೀತಿ ಎಲ್ಲೂ ಹೇಳಿಲ್ಲ. ಪಕ್ಷದ ಕಚೇರಿಯ ಕಟ್ಟಡವನ್ನು ಆದಷ್ಟು ಬೇಗ ನಿರ್ಮಾಣ ಮಾಡಿ ಎಂದಷ್ಟೆ ಹೇಳಿದ್ದೇನೆ ಎಂದು ತಿಳಿಸಿದರು.

ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಒಳ್ಳೆಯ ಆಡಳಿತ ನೀಡುತ್ತಿದೆ. ಕೆಪಿಸಿಸಿ ಅಧ್ಯಕ್ಷರ ಅಧಿಕಾರವಧಿ ಮುಗಿದ ಬಳಿಕಷ್ಟೇ ಬದಲಾವಣೆ ವಿಚಾರ ಮುನ್ನಲೆಗೆ ಬರುತ್ತದೆ. ಆದರೆ ಈಗ ಯಾವುದೇ ಬದಲಾವಣೆ ಇಲ್ಲ ಎಂದರು.

ಐದು ವರ್ಷವೂ ಸಿದ್ದರಾಮಯ್ಯ ಅವರೆ ಮುಖ್ಯಮಂತ್ರಿ ಆಗಿರುತ್ತಾರೆ. ಇದರಲ್ಲಿ ಯಾವುದೇ ಬದಲಾವಣೆ ಇಲ್ಲ. ಈ ಸಂಬಂಧ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಏನು ಬೇಕಾದರೂ ಹೇಳಲಿ, ಅವರೇನು ನಮ್ಮ ಪಕ್ಷದವರೇ ಎಂದು ಪ್ರಶ್ನಿಸಿದ ಡಾ.ಪರಮೇಶ್ವರ್, ನಮ್ಮ ಪಕ್ಷದ ತೀರ್ಮಾನ ಅವರಿಗೇನು ಗೊತ್ತು ಎಂದು ಕೇಳಿದರು.

ಗೃಹ ಸಚಿವ ಡಾ.ಪರಮೇಶ್ವರ್ ಮಾಹಿತಿ

ನನ್ನ ಯಾಕೆ ಕೀಟಲೆ ಮಾಡುತ್ತೀರಾ...

ನೀವು ಸಿಎಂ ಆಗುತ್ತೀರಾ ಎಂಬ ಪತ್ರಕರ್ತರ ಪ್ರಶ್ನೆಗೆ ನಸು ನಕ್ಕ ಡಾ.ಪರಮೇಶ್ವರ್, ನನ್ನ ಯಾಕೆ ಕೀಟಲೆ ಮಾಡುತ್ತೀರಾ ಎಂದರು. ಸಿದ್ದರಾಮಯ್ಯ ಅವರೇ ಐದು ವರ್ಷ ಮುಖ್ಯಮಂತ್ರಿ ಆಗಿರುತ್ತಾರೆ ಎಂದ ಮೇಲೆ ನಾನು ಸಿಎಂ ಆಗುವ ಪ್ರಶ್ನೆ ಎಲ್ಲಿಂದ ಬರುತ್ತದೆ. ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಕರಿಯ ಎಂದು ಕರೆದ ವಸತಿ ಸಚಿವ ಜಮೀರ್ ಅಹಮ್ಮದ್ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುತ್ತಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿ, ಈ ಬಗ್ಗೆ ಪಕ್ಷದ ಅಧ್ಯಕ್ಷರು ಕ್ರಮ ಕೈಗೊಳ್ಳುತ್ತಾರೆ. ಅದು ಅವರ ಅಧಿಕಾರ ಎಂದು ಸ್ಪಷ್ಟ ಪಡಿಸಿದರು.

ನಾನು ಕೂಡ ಸಚಿವ ಸ್ಥಾನದ ಆಕಾಂಕ್ಷಿ

ಶಾಸಕ ಎ.ಆರ್.ಕೃಷ್ಣಮೂರ್ತಿ

ಮೈಸೂರು, ನ.22(ಬಿಎಲ್ ಯು)– ರಾಜ್ಯದಲ್ಲಿ ಸಚಿವ ಸಂಪುಟ ಪುನಾರಚನೆ ಆಗಬಹುದು. ನಾನು ಸಚಿವ ಪ್ರಬಲ ಆಕಾಂಕ್ಷಿ ಎಂದು ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದರು.



ನಗರದ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸಚಿವ ಸ್ಥಾನ ನಿಭಾಯಿಸುವ ಸಾಮರ್ಥ್ಯ ಹಾಗೂ ಬುದ್ಧಿಶಕ್ತಿ ನನಗೂ ಇದೆ ಎಂದರು. ಕಾಂಗ್ರೆಸ್ ಶಾಸಕರಿಗೆ 50 ಕೋಟಿ ಆಫರ್ ನೀಡಿರುವ ವಿಚಾರದ ಬಗ್ಗೆ ಪ್ರತಿಕ್ರಿಯೆ ನೀಡಿದ ಕೃಷ್ಣಮೂರ್ತಿ, ನನಗೆ ಯಾವುದೇ ಆಫರ್ ಬಂದಿಲ್ಲ. ಅನಂತ್ ಕುಮಾರ್ ಹೆಗಡೆ ಅವರ ಸಂವಿಧಾನ ವಿರೋಧಿ ಹೇಳಿಕೆ ವಿರೋಧಿಸಿ ಬಿಜೆಪಿ ಬಿಟ್ಟು ಬಂದಿದ್ದೇನೆ. ಸಮುದಾಯದ ಸ್ವಾಭಿಮಾನಕ್ಕೆ ಧಕ್ಕೆಯಾಗುತ್ತದೆ ಎಂದು ಬಿಜೆಪಿ ತ್ಯಜಿಸಿದ್ದು, ಈಗ ಆಫರ್ ಬಂದರೂ ಬಿಜೆಪಿಗೆ ಹೋಗುವುದಿಲ್ಲ. ನಮ್ಮ ಸರ್ಕಾರ ಸುಭದ್ರವಾಗಿದೆ. ಈ ಸರ್ಕಾರ ಬೀಳಿಸಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಹುಟ್ಟುಹಬ್ಬ



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಹುಟ್ಟುಹಬ್ಬದ ಪ್ರಯುಕ್ತ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸಿ.ನರೇಂದ್ರ ಶುಕ್ರವಾರ ಮೈಸೂರಿನ ತಿಲಕ್‌ನಗರದ ಅಂಧರ ಶಾಲೆಯ ಮಕ್ಕಳಿಗೆ ಬೆಳಗಿನ ಉಪಾಹಾರ ವಿತರಿಸಿದರು. ಈ ವೇಳೆ ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ಬಿಳಿಕೆರೆ ಸ್ವಾಮಿ, ಕೆಪಿಸಿಸಿ ಕಾರ್ಮಿಕ ವಿಭಾಗದ ಉಪಾಧ್ಯಕ್ಷ ನಾಗರಾಜು, ಪದವೀಧರ ಕ್ಷೇತ್ರದ ಜಿಲ್ಲಾಧ್ಯಕ್ಷ ರಾಘವೇಂದ್ರ, ಡಿಸಿಸಿ ST ವಿಭಾಗದ ಜಿಲ್ಲಾಧ್ಯಕ್ಷ ನಾಗವಾಲ ಮಹೇಶ್, ಮುಖಂಡರಾದ ಶಿವರಾಜು, ಅಂಧ ಮಕ್ಕಳ ಶಾಲೆಯ ಶಿಕ್ಷಕರಾದ ಸತೀಶ್, ಧನಗಳ್ಳಿ ಪ್ರವೀಣ್, ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ನವೀನ್ ಕುಮಾರ್, ನಗರ ಯುವ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ಸೌಫಿಲ್ ಅಹಮದ್, ಪುಟ್ಟರಾಜು, ಪ್ರಮೋದ್ ಇತರರು ಉಪಸ್ಥಿತರಿದ್ದರು.

ನಬಾರ್ಡ್‌ನಿಂದ ಕೃಷಿ ಸಾಲದ ಮೊತ್ತ ಕಡಿತ; ರೈತರಿಗೆ ಭಾರೀ ಅನ್ಯಾಯ

● ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ರೋಶ ● ಇದರ ಬಗ್ಗೆ ರಾಜ್ಯದ ಸಂಸದರು ಚಕಾರ ಎತ್ತದ್ದಕ್ಕೆ ಖಂಡನೆ



ಮೈಸೂರು, ನ.22(ಎಂಟಿವೈ)–ರೈತರಿಗೆ ರಿಯಾಯಿತಿ ಬಡ್ಡಿ ದರದಲ್ಲಿ ಕೊಡುವ ಕೃಷಿ ಸಾಲದ ಮೊತ್ತವನ್ನು ನಬಾರ್ಡ್ ಶೇ.58ರಷ್ಟು ಕಡಿತಗೊಳಿಸಿರುವುದು ರೈತರಿಗೆ ಮಾಡಿದ ಪರಮ ಅನ್ಯಾಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದ್ದಾರೆ.

ವರ್ಷದಿಂದ ವರ್ಷಕ್ಕೆ ನಬಾರ್ಡ್ ನಿಂದ ರಾಜ್ಯದ ರೈತರಿಗೆ ಕೊಡುವ ಸಾಲದ ಪ್ರಮಾಣ ಹೆಚ್ಚಾಗಬೇಕು, ಆದರೆ ಈ ಬಾರಿ ಕಡಿತಗೊಳಿಸಲಾಗಿದೆ. ರೈತರಿಗೆ ಶೇ.4.5 ಬಡ್ಡಿ ದರದಲ್ಲಿ ನಬಾರ್ಡ್ ಸಾಲ ಕೊಡುತ್ತದೆ. ಈ ಬಡ್ಡಿಯನ್ನು ರಾಜ್ಯ ಸರ್ಕಾರವೇ ಭರಿಸುತ್ತದೆ. ನಬಾರ್ಡ್ ಸಾಲ ಪ್ರಮಾಣ ಕಡಿತಗೊಳಿಸಿರುವುದರಿಂದ ವಾಣಿಜ್ಯ ಬ್ಯಾಂಕ್‌ಗಳ ಸಾಲಕ್ಕೆ ಶೇ.10ರಷ್ಟು ಬಡ್ಡಿ ಕಟ್ಟಬೇಕು ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದು ರಾಜ್ಯಕ್ಕೆ ಆಗುವ ನಷ್ಟ, ಇಷ್ಟು ದೊಡ್ಡ ಪ್ರಮಾಣದ ಅನ್ಯಾಯವನ್ನು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಸಮರ್ಥಿಸಿಕೊಂಡಿದ್ದಾರೆ. ರಾಜ್ಯದಿಂದ ಆಯ್ಕೆ ಆಗಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಅನ್ಯಾಯ ಸರಿಪಡಿಸುವಂತೆ ಕೋರಿ ಮನವಿ ಸಲ್ಲಿಸಿದ್ದೇವೆ, ಕರ್ನಾಟಕದ ರೈತರ ಬಗ್ಗೆ ಕಾಳಜಿ ಇದ್ದರೆ, ಬಿಜೆಪಿ ಮತ್ತು ಕೇಂದ್ರ ಸರ್ಕಾರ ಅನ್ಯಾಯ ಸರಿಪಡಿಸಲಿ ಎಂದರು.

ನಬಾರ್ಡ್ ಕ್ರಮ ಸರಿ ಎಂಬುದಾಗಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಹೇಳಿದರೆ, ಮಣ್ಣಿನ ಮಗ, ರೈತರ ಮಗ ಎಂದು ಕರೆಸಿಕೊಳ್ಳುವ ಹೆಚ್.ಡಿ.ಕುಮಾರಸ್ವಾಮಿ ಉಸಿರೇ ಬಿಡುತ್ತಿಲ್ಲ ಏಕೆ

ಆಹಾರ ಭದ್ರತಾ ಕಾಯ್ದೆ ಜಾರಿ ಮಾಡಿದ್ದು ಡಾ.ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರ. ಇದನ್ನು ಬಿಜೆಪಿ ವಿರೋಧಿಸಿತ್ತು. ಹಿಂದಿನ ಕೇಂದ್ರ ಸಚಿವರಾಗಿದ್ದ ಮುರಳಿ ಮನೋಹರ ಜೋಶಿ ಆಹಾರ ಭದ್ರತೆ ಕಾಯ್ದೆ ವಿರೋಧಿಸಿದ್ದರು. ಈಗ ಅನ್ಯಾಯ ಅಂತ ರಾಜ್ಯದ ಜನರ ದಿಕ್ಕು ತಪ್ಪಿಸುತ್ತಿದ್ದಾರೆ.

ಮೊದಲಿಗೆ ರಾಜ್ಯದ ಜನರಿಗೆ ಏಳು ಕೆಜಿ ಅಕ್ಕಿ ಕೊಟ್ಟವರು ನಾವು. ಇದನ್ನು ಐದು ಕೆಜಿಗೆ ಇಳಿಸಿದ್ದು ಯಡಿಯೂರಪ್ಪ ಈಗ ಅವರ ಮಗ ವಿಜಯೇಂದ್ರ ಅವರಿಗೆ ಈ ಬಗ್ಗೆ ಮಾತಾಡಲು ಯಾವ ನೈತಿಕತೆ ಇದೆ.

ಯಡಿಯೂರಪ್ಪ ಅಕ್ಕಿ ಪ್ರಮಾಣವನ್ನು ಐದು ಕೆಜಿಗೆ ಇಳಿಸಿದ್ದನ್ನು ಹತ್ತು ಕೆಜಿಗೆ ಏರಿಸಿದ್ದು ನಾವು, ಈ ಸತ್ಯ ರಾಜ್ಯದ ಜನರಿಗೆ ಗೊತ್ತಿದೆ ಎಂದರು. ಸರ್ಕಾರಿ ನೌಕರರು, ಆದಾಯ ತೆರಿಗೆ ಪಾವತಿಸುವವರಿಗೂ ಬಿಪಿಎಲ್ ಕಾರ್ಡ್ ಕೊಡಬೇಕಾ, ಅನರ್ಹರಿಗೆ ಬಿಪಿಎಲ್ ಕಾರ್ಡ್ ಕೊಡಬಾರದೆಂಬ ನಿಯಮಾವಳಿ, ಮಾರ್ಗಸೂಚಿ ರಚಿಸಿದ್ದೇ ಬಿಜೆಪಿ. ಈಗ ಅವರೇ ಪ್ರತಿಭಟನೆ ಮಾಡಿ ಫೋಟೋ ತೆಗೆಸಿಕೊಳ್ಳುತ್ತಿದ್ದಾರೆ ಎಂದು ಟೀಕಿಸಿದರು.

ಅದಾನಿ ಏಕೆ ಬಂಧಿಸುತ್ತಿಲ್ಲ

ಅಮೇರಿಕದಲ್ಲಿನ ನ್ಯಾಯಾಲಯ ಭಾರತದ ಖ್ಯಾತ ಉದ್ಯಮಿ ಅದಾನಿ ವಿರುದ್ಧ ಅರೆಸ್ಟ್ ವಾರೆಂಟ್ ಹೊರಡಿಸಿದ್ದರೂ ಏಕೆ ಬಂಧಿಸುತ್ತಿಲ್ಲ, ತಕ್ಷಣ ಬಂಧಿಸಿ ತಪ್ಪಿಸಿಕೊಳ್ಳಲು ಬಿಡಬೇಡಿ, ಅವರನ್ನು ರಕ್ಷಿಸುತ್ತಿರುವವರು ಯಾರು ಎಂದು ಪ್ರಶ್ನಿಸಿದ ಮುಖ್ಯಮಂತಿ, ಅದಾನಿಗೆ ರಕ್ಷಣೆ ಕೊಡುತ್ತಿರುವವರು ಯಾರು ಎನ್ನುವುದು ದೇಶಕ್ಕೇ ಗೊತ್ತಿದೆ. ಈ ಸತ್ಯವನ್ನು ಮಾಧ್ಯಮಗಳು ದೇಶದ ಜನರಿಗೆ ಏಕೆ ತೋರಿಸುತ್ತಿಲ್ಲ ಎಂದರು.

ನಾಳೆ ಮೈಸೂರಲ್ಲಿ ಸಂಗೀತ ಸಂಜೆ

ಮೈಸೂರು, ನ.22(ಜಿಎ)–ಸ್ಟ್ಯಾನ್ಲಿ ಪಾರ್ಕರ್ ಸ್ಕೂಲ್ ಆಫ್ ಮ್ಯೂಸಿಕ್ ವತಿಯಿಂದ ಕನ್ನಡ ರಾಜ್ಯೋತ್ಸವದ ಅಂಗವಾಗಿ ನ.24 ರಂದು ಮಧ್ಯಾಹ್ನ 3.30 ರಿಂದ ರಾತ್ರಿ 9ಗಂಟೆವರೆಗೆ ನಗರದ ಕುವೆಂಪುನಗರ ಗಾನಭಾರತಿ ವೀಣೆ ಶೇಷಣ್ಣ ಭವನದಲ್ಲಿ ಸಂಗೀತ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಮುಖ್ಯಸ್ಥ ಸ್ಟ್ಯಾನ್ಲಿ ಪಾರ್ಕರ್ ಈ ವಿಷಯ ತಿಳಿಸಿ, ಶಾಲೆಯಲ್ಲಿ ಹಾಡುಗಾರಿಕೆ ಕಲಿತವರಿಗೆ ವೇದಿಕೆ ಕಲ್ಪಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಿದ್ದು, ಇಲ್ಲಿ ಸುಮಾರು 40 ಕನ್ನಡ ಹಾಡುಗಳನ್ನು ಹಾಡಲಾಗುವುದು. ವಿವಿಧ ವೃತ್ತಿಯಲ್ಲಿರುವವರು ತಮ್ಮ ಸಂಸ್ಥೆಯಲ್ಲಿ ಹಾಡುಗಾರಿಕೆ ಕಲಿತು ಇಲ್ಲಿ ಹಾಡಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಅಮನ್, ಅಶೋಕ್, ಸಂಪತ್ ಕುಮಾರ್, ಮನು ಯಾದವ್, ಡಾ.ದೇಮಪ್ಪ ಉಪಸ್ಥಿತರಿದ್ದರು.

ಟೋಲ್ ಪಾವತಿಸಲು ಕಾಂಗ್ರೆಸ್ ಕಾರ್ಯಕರ್ತರ ಕ್ಯಾತೆ!

ಮಹಿಳಾ ಸಿಬ್ಬಂದಿ ಮೇಲೆ ಹಲ್ಲೆ ಆರೋಪ; ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯ ಶ್ರೀರಂಗಪಟ್ಟಣ ಬಳಿಯ ಗಣಂಗೂರು ಟೋಲ್‌ನಲ್ಲಿ ರಾದ್ಧಾಂತ

ಮೈಸೂರು, ನ.22(ಬಿಎಲ್‌ಯು)–ಟೋಲ್ ಪಾವತಿಸದೆ ದರ್ಪ ಮೆರೆದಿರುವ ಕಾಂಗ್ರೆಸ್ ಕಾರ್ಯಕರ್ತರು ಟೋಲ್‌ನ ಮಹಿಳಾ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿರುವ ಘಟನೆ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಬಳಿಯ ಗಣಂಗೂರು ಶ್ರೀರಂಗಪಟ್ಟಣ ಟೋಲ್‌ನಲ್ಲಿ ಇಂದು ಸಂಭವಿಸಿದೆ.

ಬೆಂಗಳೂರಿನಿಂದ ಮೈಸೂರು ಕಡೆಗೆ ಕಾರಿನಲ್ಲಿ ಬರುತ್ತಿದ್ದ ಕಾಂಗ್ರೆಸ್ ಕಾರ್ಯಕರ್ತರು ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇಯ ಗಣಂಗೂರು ಟೋಲ್‌ನಲ್ಲಿ ಶುಲ್ಕ ಪಾವತಿಸಲು ನಿರಾಕರಿಸಿದ್ದಾರೆ.

ಟೋಲ್ ಶುಲ್ಕ ಪಾವತಿ ಮಾಡದೆ ಮುಂದೆ ಹೋಗಲು ಬಿಡುವುದಿಲ್ಲ ಎಂದು ಟೋಲ್ ಸಿಬ್ಬಂದಿ ಬ್ಯಾರಿಕೇಡ್ ತೆಗೆಯದೆ ಅಡ್ಡ ಹಾಕಿದ್ದಾರೆ. ನಾನು ಕಾಂಗ್ರೆಸ್ ಮುಖಂಡನಾಗಿದ್ದು, ರಾಜ್ಯದಲ್ಲಿ ನಮ್ಮದೇ ಸರ್ಕಾರ ಅಧಿಕಾರದಲ್ಲಿದೆ. ನಾನು ಟೋಲ್ ಶುಲ್ಕ ಪಾವತಿ ಮಾಡುವುದಿಲ್ಲ ಎಂದು ಕಾಂಗ್ರೆಸ್ ಕಾರ್ಯಕರ್ತರು ಏರು ಧ್ವನಿಯಲ್ಲಿ ಅಬ್ಬರಿಸಿದ್ದಾರೆ.



ಇಲ್ಲಿ ಯಾರೇ ಆದರೂ ಟೋಲ್ ಖಂಡ ತುಂಡವಾಗಿ ಪಾವತಿ ಮಾಡಬೇಕು. ಶುಲ್ಕ ಪಾವತಿ ಮಾಡದೆ ಕಾರು ಮುಂದೆ ಹೋಗಲು ಬಿಡುವುದಿಲ್ಲ ಎಂದು ಟೋಲ್ ಸಿಬ್ಬಂದಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಟೋಲ್ ಸಿಬ್ಬಂದಿ ಹಾಗೂ ಕಾಂಗ್ರೆಸ್ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆದಿದೆ. ಇದು ಅತಿರೇಕಕ್ಕೆ ಹೋಗಿ ಕಾಂಗ್ರೆಸ್ ಕಾರ್ಯಕರ್ತರು ಟೋಲ್‌ನ ಮಹಿಳಾ ಸಿಬ್ಬಂದಿಯನ್ನು ಎಳೆದಾಡಿ, ಆಕೆ ಮೇಲೆ ಹಲ್ಲೆ ಕೂಡ ನಡೆಸಿದ್ದಾರೆ.

ಟೋಲ್‌ನಲ್ಲಿ ನಡೆಯುತ್ತಿದ್ದ ಗಲಾಟೆ ವಿಚಾರ ತಿಳಿದು ಸ್ಥಳಕ್ಕೆ ಬಂದ ಪೊಲೀಸರು ಮಹಿಳಾ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಯಾವುದೇ ಕ್ರಮ ಕೈಗೊಳ್ಳದೆ ರಾಜೀ ಸಂಧಾನ ಮಾಡಿ ಅವರನ್ನು ಅಲ್ಲಿಂದ ಕಳುಹಿಸಿದ್ದಾರೆ.

ಕೊನೆಗೂ ಟೋಲ್ ಪಾವತಿಸದೇ ಕಾಂಗ್ರೆಸ್ ಕಾರ್ಯಕರ್ತರು ಅಲ್ಲಿಂದ ನಿರ್ಗಮಿಸಿದ್ದಾರೆ. ಟೋಲ್ ಸಿಬ್ಬಂದಿ ಪೊಲೀಸರಿಗೆ ದೂರು ನೀಡಲು ಹೆದರಿದ್ದಾರೆ. ಟೋಲ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿರುವ ದೃಶ್ಯ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದ್ದು, ಸಾಕ್ಷ್ಯ ಇದ್ದರೂ ಪೊಲೀಸರು ಯಾವುದೇ ಕ್ರಮ ಕೈಗೊಳ್ಳದೆ ರಾಜೀ ಮಾಡಿಸಿದ್ದಾರೆ.

ದೇಶ - ವಿದೇಶ

ಮೀನುಗಾರಿಕಾ ದೋಣಿಗೆ ಭಾರತೀಯ ನೌಕಾಪಡೆಯ ಜಲಾಂತರ್ಗಾಮಿ ಡಿಕ್ಕಿ; ಇಬ್ಬರು ಮೀನುಗಾರರು ನಾಪತ್ತೆ

ನವದೆಹಲಿ: ಗೋವಾ ಕರಾವಳಿಯ ಬಳಿ ಮೀನುಗಾರಿಕಾ ದೋಣಿಗೆ ಭಾರತೀಯ ನೌಕಾಪಡೆಯ ಜಲಾಂತರ್ಗಾಮಿ ಡಿಕ್ಕಿಯಾಗಿದೆ ಮೀನುಗಾರಿಕಾ ದೋಣಿಯಲ್ಲಿ 13 ಮಂದಿ ಸಿಬ್ಬಂದಿ ಇದ್ದರು. ಅದರಲ್ಲಿ ಇಬ್ಬರು ನಾಪತ್ತೆಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. 11 ಸಿಬ್ಬಂದಿಯನ್ನು ರಕ್ಷಿಸಲಾಗಿದ್ದು, ನಾಪತ್ತೆಯಾಗಿರುವವರಿಗಾಗಿ ಶೋಧ ಕಾರ್ಯಾಚರಣೆ ಕೈಗೊಳ್ಳಲಾಗಿದೆ. ಇದಕ್ಕಾಗಿ 6 ಹಡಗುಗಳು ಮತ್ತು ವಿಮಾನಗಳನ್ನು ಭಾರತೀಯ ನೌಕಾಪಡೆಯು ನಿಯೋಜಿಸಿದೆ. ರಕ್ಷಣಾ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿದೆ.

ಗೋವಾ ಕರಾವಳಿಯಿಂದ 70 ನಾಟಿಕಲ್ ಮೈಲು ದೂರದಲ್ಲಿ ಸ್ಕಾರ್ಪೀನ್ ದರ್ಜೆಯ ಜಲಾಂತರ್ಗಾಮಿ ನೌಕೆಗೆ ಮಾರ್ಥೋಮಾ ಡಿಕ್ಕಿ ಹೊಡೆದಿದೆ. ಸ್ಕಾರ್ಪೀನ್–ವರ್ಗದ ಜಲಾಂತರ್ಗಾಮಿ ನೌಕೆಗಳಿಂದ ಜಲಾಂತರ್ಗಾಮಿ ವಿರೋಧಿ ಯುದ್ಧ, ಗುಪ್ತಚರ ಸಂಗ್ರಹಣೆ, ಗಣಿ ಹಾಕುವಿಕೆ ಮತ್ತು ಪ್ರದೇಶದ ಕಣ್ಗಾವಲು ಸೇರಿದಂತೆ ಬಹುವಿಧದ ಕಾರ್ಯಾಚರಣೆಗಳನ್ನು ಕೈಗೊಳ್ಳಬಹುದು. ನೀರಿನ ಅಡಿಯಲ್ಲಿ ಅಥವಾ ಮೇಲ್ಮೈಯಲ್ಲಿ ಟಾರ್ಪಿಡೊಗಳು ಮತ್ತು ಟ್ಯೂಬ್–ಲಾಂಚ್ಡ್ ಆಂಟಿ–ಶಿಪ್ ಕ್ಷಿಪಣಿಗಳೊಂದಿಗೆ ದಾಳಿಯನ್ನು ಮಾಡಬಹುದಾದ ಸಾಮರ್ಥ್ಯ ಇದೆ.

ಅಂತಾರಾಷ್ಟ್ರೀಯ ಕ್ರಿಮಿನಲ್ ಕೋರ್ಟ್ ಇಸ್ರೇಲ್ ಪ್ರಧಾನಿ ನೆತನ್ಯಾಹು ವಿರುದ್ಧ ಬಂಧನ ವಾರೆಂಟ್

ದಿ ಹೇಗ್: ಅಂತಾರಾಷ್ಟ್ರೀಯ ಕ್ರಿಮಿನಲ್ ಕೋರ್ಟ್ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ವಿರುದ್ಧ ಬಂಧನ ವಾರೆಂಟ್ ಜಾರಿಗೊಳಿಸಿದೆ.



ಗಾಜಾದಲ್ಲಿನ ಯುದ್ಧ, 2023ರ ಅಕ್ಟೋಬರ್‌ನಲ್ಲಿ ನಡೆದ ಘರ್ಷಣೆಗಳಲ್ಲಿ ಯುದ್ಧಾಪರಾಧ ಹಾಗೂ ಮಾನವಕುಲದ ಮೇಲೆ ಅಪರಾಧ ನಡೆದಿದೆ ಎಂಬ ಆರೋಪದ ಮೇಲೆ ನೆತನ್ಯಾಹು ಹಾಗೂ ಅವರ ಮಾಜಿ ರಕ್ಷಣಾ ಸಚಿವ ಗ್ಯಾಲಂಟ್, ಹಮಾಸ್ ಅಧಿಕಾರಿಗಳ ವಿರುದ್ಧ ಬಂಧನ ವಾರೆಂಟ್ ಜಾರಿಯಾಗಿದೆ.

ಈ ನಿರ್ಧಾರ ನೆತನ್ಯಾಹು ಮತ್ತು ಇತರರನ್ನು ಅಂತಾರಾಷ್ಟ್ರೀಯವಾಗಿ ಬೇಕಾಗಿರುವ ಶಂಕಿತರನ್ನಾಗಿ ಪರಿವರ್ತಿಸುತ್ತದೆ. ಅವರನ್ನು ಮತ್ತಷ್ಟು ಪ್ರತ್ಯೇಕಿಸುವ ಸಾಧ್ಯತೆಯಿದೆ. 13 ತಿಂಗಳ ಸಂಘರ್ಷವನ್ನು ಕೊನೆಗೊಳಿಸಲು ಕದನ ವಿರಾಮದ ಮಾತುಕತೆಯ ಪ್ರಯತ್ನಗಳನ್ನು ಸಂಕೀರ್ಣಗೊಳಿಸುತ್ತದೆ.

ಆದರೆ ಇಸ್ರೇಲ್ ಮತ್ತು ಅದರ ಪ್ರಮುಖ ಮಿತ್ರರಾಷ್ಟ್ರವಾದ ಯುನೈಟೆಡ್ ಸ್ಟೇಟ್ಸ್ ನ್ಯಾಯಾಲಯದ ಸದಸ್ಯರಲ್ಲದ ಕಾರಣ ಬಂಧನ ವಾರೆಂಟ್‌ನ ಪ್ರಾಯೋಗಿಕ ಪರಿಣಾಮಗಳು ಸೀಮಿತವಾಗಬಹುದು ಎಂದು ವಿಶ್ಲೇಷಿಸಲಾಗುತ್ತಿದೆ. ಯುಎಸ್ ಅಧ್ಯಕ್ಷ ಜೋ ಬಿಡೆನ್ ಸಹ ಪ್ರಾಸಿಕ್ಯೂಟರ್ ವಿರುದ್ಧ ಮಾತನಾಡಿದ್ದು, ಹಮಾಸ್ ವಿರುದ್ಧ ತನ್ನನ್ನು ತಾನು ರಕ್ಷಿಸಿಕೊಳ್ಳುವ ಇಸ್ರೇಲ್‌ನ ಹಕ್ಕನ್ನು ಬೆಂಬಲಿಸಿದ್ದಾರೆ.

ಪಾಕಿಸ್ತಾನದಲ್ಲಿ ಉಗ್ರರಿಂದ ಗುಂಡಿನ ದಾಳಿ; 50 ಮಂದಿ ಸಾವು

ಪೇಶಾವರ: ವಾಯುವ್ಯ ಪಾಕಿಸ್ತಾನದಲ್ಲಿ ಪ್ರಯಾಣಿಕರನ್ನು ಹೊತ್ತೊಯ್ಯುತ್ತಿದ್ದ ಮೂರು ವಾಹನಗಳ ಮೇಲೆ ಗುಂಡಿನ ದಾಳಿ ನಡೆದಿದ್ದು, ಕನಿಷ್ಠ 50 ಮಂದಿ ಸಾವನ್ನಪ್ಪಿದ್ದಾರೆ. 14 ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಫ್ಘಾನಿಸ್ತಾನದ ಗಡಿಯಲ್ಲಿರುವ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಕುರ್ರಂ ಜಿಲ್ಲೆಯಲ್ಲಿ ಉಗ್ರರು ವಾಹನಗಳ ಮೇಲೆ ಮನಬಂದಂತೆ ಗುಂಡಿನ ದಾಳಿ ನಡೆಸಿದ್ದಾರೆ. ಈ ವಾಹನಗಳು ಪರಾಚಿನಾರ್‌ನಿಂದ ಖೈಬರ್ ಪಖ್ತುಂಖ್ವಾದ ರಾಜಧಾನಿ ಪೇಶಾವರಕ್ಕೆ ಬೆಂಗಾವಲು ಪಡೆಯಲ್ಲಿ ಪ್ರಯಾಣಿಸುತ್ತಿದ್ದಾಗ ಉಗ್ರರು ಗುಂಡಿನ ದಾಳಿ ನಡೆಸಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ದಾಳಿಯಲ್ಲಿ ಆರು ಮಹಿಳೆಯರು ಮತ್ತು ಮೂವರು ಮಕ್ಕಳು ಸೇರಿದಂತೆ 50 ಮಂದಿ ಮೃತಪಟ್ಟಿದ್ದಾರೆ ಮತ್ತು ಇತರ 14 ಜನ ಗಾಯಗೊಂಡಿದ್ದಾರೆ ಎಂದು ಜಿಲ್ಲಾ ಆಸ್ಪತ್ರೆ ಅಧಿಕಾರಿಗಳು ತಿಳಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಡಜನ್‌ಗಟ್ಟಲೆ ಜನರನ್ನು ಬಲಿತೆಗೆದುಕೊಂಡಿರುವ ಪಂಥೀಯ ಹಿಂಸಾಚಾರಕ್ಕೂ ಈ ದಾಳಿಗೂ ನಂಟು ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಸರಿಸುಮಾರು 10 ದಾಳಿಕೋರರು ರಸ್ತೆಯ ಎರಡೂ ಬದಿಗಳಿಂದ ಮನಬಂದಂತೆ ವಾಹನಗಳ ಮೇಲೆ ಗುಂಡು ಹಾರಿಸಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಛತ್ತೀಸ್‌ಗಢದಲ್ಲಿ ಎನ್‌ಕೌಂಟರ್‌ನಲ್ಲಿ 10 ನಕ್ಸಲೀಯರ ಹತ್ಯೆ

ಛತ್ತೀಸ್‌ಗಡ: ಛತ್ತೀಸ್‌ಗಢದಲ್ಲಿ ಭಾರೀ ಎನ್‌ಕೌಂಟರ್ ನಡೆದಿದೆ. ಸುಕ್ಮಾ ಜಿಲ್ಲೆಯಲ್ಲಿ ನಕ್ಸಲರು ಜಮಾಯಿಸಿದ್ದಾರೆ ಎಂಬ ಮಾಹಿತಿ ಮೇರೆಗೆ ಕೂಂಬಿಂಗ್ ನಡೆಸುತ್ತಿದ್ದ ಭದ್ರತಾ ಪಡೆಗಳು ಮತ್ತು ಮಾವೋವಾದಿಗಳ ನಡುವೆ ಗುಂಡಿನ ಚಕಮಕಿ ನಡೆದಿದ್ದು, 10 ಮಂದಿ ಮಾವೋವಾದಿಗಳು ಹತರಾಗಿದ್ದಾರೆ. ಸ್ಥಳದಿಂದ ಭದ್ರತಾ ಪಡೆಗಳು ಭಾರೀ ಪ್ರಮಾಣದ ಶಸ್ತ್ರಾಸ್ತ್ರ ಮತ್ತು ಸ್ಫೋಟಕಗಳನ್ನು ವಶಪಡಿಸಿಕೊಂಡಿವೆ.

ಘಟನೆಗೂ ಮುನ್ನ ಗುರುವಾರ ಮಧ್ಯರಾತ್ರಿ ಮುಳುಗು ಜಿಲ್ಲೆಯ ವಾಜೇಡು ಎಂಬಲ್ಲಿ ಮಾವೋವಾದಿಗಳು ಇಬ್ಬರು ಬುಡಕಟ್ಟು ಜನಾಂಗದವರನ್ನು ಕೊಂದಿದ್ದಾರೆ. ಪೊಲೀಸ್ ಇನ್‌ಫಾರ್ಮರ್‌ಗಳು ಎಂಬಂತೆ ಅವರನ್ನು ಬಿಂಬಿಸಿ ಪತ್ರ ಬರೆದಿದ್ದಾರೆ. ಪ್ರಾಥಮಿಕ ಮಾಹಿತಿಯ ಪ್ರಕಾರ, ಸಿಆರ್‌ಪಿಎಫ್ ಮತ್ತು ಡಿಆರ್‌ಜಿಯ ಎರಡು ತಂಡಗಳು, ಕೊಂಟಾ ಮತ್ತು ಕಿಸ್ತಾರಾಮ್ ಪ್ರದೇಶದಿಂದ ಮಾವೋವಾದಿಗಳ ಉಪಸ್ಥಿತಿಯ ಬಗ್ಗೆ ನಿರ್ದಿಷ್ಟ ಮಾಹಿತಿಗಳನ್ನು ಪಡೆದ ನಂತರ ಶೋಧ ಕಾರ್ಯಾಚರಣೆ ನಡೆಸಿದೆ. ನಕ್ಸಲರು ಭಾರೀ ಶಸ್ತ್ರಾಸ್ತ್ರಗಳನ್ನು ಹೊಂದಿದ್ದರು. ಆದರೆ ಭದ್ರತಾ ಪಡೆಗಳ ಮುನ್ನೆಚ್ಚರಿಕೆಯ ಯಾವುದೇ ಹಾನಿ ಉಂಟಾಗಲಿಲ್ಲ. ಕೊರಾಜುಗುಡ, ದಾಂಟೆಸ್ಪುರಂ, ನಗರಂ ಮತ್ತು ಇತರ ಪ್ರದೇಶಗಳಲ್ಲಿ ಮಾವೋವಾದಿಗಳನ್ನು ಪತ್ತೆಹಚ್ಚಲಾಗಿದೆ ಎಂದು ಹಿರಿಯ ಸಿಆರ್‌ಪಿಎಫ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಭಾರತದ ಪ್ರಯಾಣಿಕರಿಗೆ ವಿಧಿಸಿದ್ದ ಹೆಚ್ಚುವರಿ ಭದ್ರತಾ ಸ್ಕ್ರೀನಿಂಗ್ ತೆರವುಗೊಳಿಸಿದ ಕೆನಡಾ

ಕೆನಡಾ: ಕೆನಡಾದಿಂದ ಭಾರತಕ್ಕೆ ತೆರಳುವ ಪ್ರಯಾಣಿಕರು ಇನ್ನು ಮುಂದೆ ಈ ವಾರದ ಆರಂಭದಲ್ಲಿ ವಿಧಿಸಲಾಗಿದ್ದ ಹೆಚ್ಚಿನ ಭದ್ರತಾ ಸ್ಕ್ರೀನಿಂಗ್‌ಗೆ ಒಳಗಾಗುವ ಅಗತ್ಯವಿಲ್ಲ ಎಂದು ಕೆನಡಾದ ಬ್ರಾಡ್‌ಕಾಸ್ಟರ್ ಸಿಬಿಸಿ ವರದಿ ತಿಳಿಸಿದೆ. ಬ್ರಾಡ್‌ಕಾಸ್ಟರ್‌ಗೆ ಹೇಳಿಕೆ ನೀಡಿದ ಫೆಡರಲ್ ಸಾರಿಗೆ ಸಚಿವೆ ಅನಿತಾ ಆನಂದ್ ಹೆಚ್ಚುವರಿ ಸ್ಕ್ರೀನಿಂಗ್ ಕ್ರಮಗಳನ್ನು ತೆಗೆದುಹಾಕಲಾಗಿದೆ ಎಂದು ಹೇಳಿದರು.

ಅಕ್ಟೋಬರ್‌ನಲ್ಲಿ ನವದೆಹಲಿಯಿಂದ ಚಿಕಾಗೋಗೆ ತೆರಳುವ ಏರ್ ಇಂಡಿಯಾ ವಿಮಾನದಲ್ಲಿ ಬಾಂಬ್ ಬೆದರಿಕೆಯ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿತ್ತು. ವಿಮಾನವನ್ನು ಕೆನಡಾದ ಇಕಾಲುಯಿಟ್‌ಗೆ ತಿರುಗಿಸಲಾಯಿತು ಮತ್ತು ತಪಾಸಣೆಯ ನಂತರ ಯಾವುದೇ ಸ್ಫೋಟಕ ಸಾಧನ ಪತ್ತೆಯಾಗಿರಲಿಲ್ಲ. ಕೆನಡಾದ ವಿಮಾನ ನಿಲ್ದಾಣಗಳ ನಿರ್ಬಂಧಿತ ಪ್ರದೇಶಗಳಿಗೆ ಪ್ರವೇಶಿಸುವ ಮೊದಲು ಪ್ರಯಾಣಿಕರು ಮತ್ತು ಅವರ ಲಗೇಜ್‌ಗಳನ್ನು ಪರೀಕ್ಷಿಸುವ ಉಸ್ತುವಾರಿ ಹೊಂದಿರುವ ಕೆನಡಾದ ಏರ್ ಟ್ರಾನ್ಸ್‌ಪೋರ್ಟ್ ಸೆಕ್ಯುರಿಟಿ ಅಥಾರಿಟಿ (ಸಿಎಟಿಎಸ್‌ಎ) ಹೆಚ್ಚುವರಿ ಕ್ರಮಗಳನ್ನು ಕೈಗೊಳ್ಳುತ್ತದೆ ಎಂದು ಕ್ರಮಗಳನ್ನು ಘೋಷಿಸಿದ್ದಾಗ ವರದಿ ಹೇಳಿತ್ತು.

ಕೆನಡಾದ ಸರ್‍ರೆಯಲ್ಲಿ 2023 ಜೂನ್ 18 ರಂದು ಖಲಿಸ್ತಾನಿ ಭಯೋತ್ಪಾದಕ ಹರ್ದೀಪ್ ಸಿಂಗ್ ನಿಜ್ಜಾರ್ ಹತ್ಯೆಯಲ್ಲಿ ಭಾರತ ಸರ್ಕಾರದ ಏಜೆಂಟರು ಭಾಗಿಯಾಗಿದ್ದಾರೆ ಎಂದು ಕೆನಡಾದ ಪ್ರಧಾನಿ ಜಸ್ಟಿನ್ ಟ್ರುಡೊ ಪದೇ ಪದೇ ಆರೋಪಿಸಿದ ನಂತರ ಉಭಯ ದೇಶಗಳ ನಡುವಿನ ಸಂಬಂಧಗಳು ತೀರಾ ಹದಗೆಟ್ಟಿವೆ.

ನಷ್ಟದಲ್ಲಿ ಕೊಡಗಿನ 4 ಸಹಕಾರ ಸಂಘ

● ಲಾಭದತ್ತ ನಡೆಯಲು ಶಕ್ತಿ ಮೀರಿ ಪ್ರಯತ್ನಿಸಿ ● ಅಧಿಕಾರಿಗಳಿಗೆ ಸಹಕಾರ ಸಚಿವ ಕೆ.ಎನ್.ರಾಜಣ್ಣ ಸಲಹೆ

ಮಡಿಕೇರಿ, ನ.22–ಕೊಡಗು ಜಿಲ್ಲೆಯಲ್ಲಿ 74 ಸೇವಾ ಸಹಕಾರ ಸಂಘಗಳಿದ್ದು, ಅದರಲ್ಲಿ 4 ಪ್ರಾಥಮಿಕ ಸೇವಾ ಸಹಕಾರ ಸಂಘಗಳು ನಷ್ಟದಲ್ಲಿರುವ ಬಗ್ಗೆ ಮಾಹಿತಿ ಇದೆ. ಆದ್ದರಿಂದ ಅಂತಹ ಸಂಘಗಳನ್ನು ಲಾಭದಲ್ಲಿ ನಡೆಸುವಂತಾಗಲು ಶಕ್ತಿ ಮೀರಿ ಪ್ರಯತ್ನಿಸಬೇಕು ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಅಧಿಕಾರಿಗಳಿಗೆ ಸಲಹೆ ನೀಡಿದರು.



ಮಡಿಕೇರಿ ಡಿಸಿಸಿ ಬ್ಯಾಂಕ್ ಸಭಾಂಗಣದಲ್ಲಿ ನಡೆದ ಸಹಕಾರ ಇಲಾಖೆ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಹಕಾರ ಸಚಿವ ಕೆ.ಎನ್.ರಾಜಣ್ಣ ಮಾತನಾಡಿದರು.

> ಸಹಕಾರ ಇಲಾಖೆಯೊಂದಿಗೆ ಕೊಡಗು ಜಿಲ್ಲಾ ಸಹಕಾರ ಯೂನಿಯನ್‌ನ ಸಿಇಓ ಸಮನ್ವಯ ಸಾಧಿಸಿ ಇಲಾಖೆ ಕಾರ್ಯಕ್ರಮ, ತರಬೇತಿ ನಡೆಸಬೇಕು. ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಸಿಬ್ಬಂದಿ, ಪ್ರಾಥಮಿಕ ಕೃಷಿ ಪತ್ತಿನ, ಹಾಲು ಉತ್ಪಾದಕರ ಸಹಕಾರ ಸಂಘ ಹಾಗೂ ಇತರೆ ಸಹಕಾರ ಸಂಘಗಳ ಸಿಬ್ಬಂದಿಗೆ ಅಗತ್ಯ ತರಬೇತಿ ನೀಡಬೇಕು.
> –ಕೆ.ಎನ್.ರಾಜಣ್ಣ, ಸಹಕಾರ ಸಚಿವ

ನಗರದ ಡಿಸಿಸಿ ಬ್ಯಾಂಕ್ ಸಭಾಂಗಣದಲ್ಲಿ ಶುಕ್ರವಾರ ನಡೆದ ಸಹಕಾರ ಹಾಗೂ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಕೊಡಗಿನಂತಹ ಜಿಲ್ಲೆಯಲ್ಲಿ ಸಹಕಾರ ಸಂಘಗಳು ನಷ್ಟದಲ್ಲಿರುವುದು ಬೇಸರದ ಸಂಗತಿ. ಆದ್ದರಿಂದ ನಷ್ಟದಲ್ಲಿರುವ ಸಂಘಗಳನ್ನು ಬಲಪಡಿಸಲು ಮುಂದಾಗಬೇಕು ಎಂದು ನಿರ್ದೇಶಿಸಿದರು.

ನಷ್ಟದಲ್ಲಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಸಮಸ್ಯೆಗಳನ್ನು ಗುರುತಿಸಿ, ಅವುಗಳನ್ನು ಲಾಭಕ್ಕೆ ತರುವ ನಿಟ್ಟಿನಲ್ಲಿ ಕ್ರಮವಹಿಸಬೇಕು. ಸಹಕಾರ ಸಂಘಗಳ ಉಪನಿಬಂಧಕರು ಮತ್ತು ಸಹಾಯಕ ನಿಬಂಧಕರು ನ್ಯಾಯಾಲಯದ ದಾವೆ ಹಾಗೂ ಹಣ ದುರುಪಯೋಗ ಪ್ರಕರಣಗಳನ್ನು ಶೀಘ್ರವಾಗಿ ನಿಯಮಾನುಸಾರ ಇತ್ಯರ್ಥ ಪಡಿಸಬೇಕು. ಜಿಲ್ಲೆಯಲ್ಲಿ ಸ್ಥಗಿತಗೊಂಡಿರುವ ಹಾಗೂ ಸಮಾಪನಾ ಸಹಕಾರ ಸಂಘಗಳ ಪುನಶ್ಚೇತನಕ್ಕೆ ಅಗತ್ಯ ಕ್ರಮ ವಹಿಸಬೇಕು. ಸಹಕಾರ ಸಂಘಗಳು ಕ್ಷೇಮನಿಧಿ ಸೇರಿದಂತೆ ಇತರೆ ಬ್ಯಾಂಕ್‌ಗಳಲ್ಲಿ ಠೇವಣಿ ಮಾಡದೆ, ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನಲ್ಲಿ ಹೂಡಿಕೆ ಮಾಡಬೇಕು ಎಂದು ತಿಳಿಸಿದರು.

ಬ್ಯಾಂಕ್‌ಗಳು ಶೇ.50ರಷ್ಟು ಕೃಷಿಯೇತರ ಸಾಲ ನೀಡಿ, ಲಾಭ ಗಳಿಸುವತ್ತ ಗಮನಹರಿಸಿ ದೃಢತೆ ಕಾಯ್ದುಕೊಳ್ಳಬೇಕು. ನಬಾರ್ಡ್‌ನಿಂದ ರಿಯಾಯಿತಿ ಬಡ್ಡಿ ದರದಲ್ಲಿ ನೀಡುತ್ತಿದ್ದ ಅಲ್ಪಾವಧಿ ಕೃಷಿ ಸಾಲದ ಪ್ರಮಾಣ ಕಡಿತಗೊಳಿಸಿರುವ ಬಗ್ಗೆ ಮನವರಿಕೆ ಮಾಡಿದರು. ಸಹಕಾರ ಸಂಘಗಳ ಲೆಕ್ಕಪರಿಶೋಧನೆಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪನಿರ್ದೇಶಕರಿಗೆ ಸೂಚಿಸಿದರು.

ಸಭೆಯಲ್ಲಿ ಸಚಿವರು ಜಿಲ್ಲೆಯ ಮೂರು ಪಿಕಾರ್ಡ್ ಬ್ಯಾಂಕ್‌ಗಳ ಸಾಲ ವಿತರಣೆ ಹಾಗೂ ಇತರೆ ಯೋಜನೆಗಳ ಪ್ರಗತಿ ಪರಿಶೀಲಿಸಿದರು. ಹಾಲು ಉತ್ಪಾದಕ ಸಹಕಾರ ಸಂಘಗಳ ಸದಸ್ಯರಿಗೆ ನಿಗದಿತ ದರವನ್ನು ಕಾಲಮಿತಿಯಲ್ಲಿ ಪಾವತಿಸಲು ಸದಸ್ಯರಾಗದಿರುವ ಹಾಲು ಉತ್ಪಾದಕರನ್ನು ಆಯಾ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಕ್ರಮ ವಹಿಸುವಂತೆ ಆದೇಶಿಸಿದರು.

ಸಭೆಯಲ್ಲಿ ಕೊಡಗು ಡಿಸಿಸಿ ಬ್ಯಾಂಕ್ ನಿರ್ದೇಶಕ ಮುಂಡಂಡ ಸಿ.ನಾಣಯ್ಯ, ಸಹಕಾರ ಸಚಿವರ ವಿಶೇಷ ಕರ್ತವ್ಯಾಧಿಕಾರಿ ಜಿ.ಎಸ್.ರಮಣರೆಡ್ಡಿ, ಬೆಂಗಳೂರು ಅಪೆಕ್ಸ್ ಬ್ಯಾಂಕ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಿ.ಎನ್.ದೇವರಾಜು, ಸಹಕಾರ ಸಂಘಗಳ ಅಪರ ನಿಬಂಧಕರಾದ(ಪತ್ತು) ಎಚ್.ಬಾಲಶೇಖರ್, ಕೊಡಗು ಡಿಸಿಸಿ ಬ್ಯಾಂಕ್ ಸಿಇಓ ಪ್ರವೀಣ್ ನಾಯಕ್, ಸಹಕಾರ ಸಂಘಗಳ ಉಪನಿಬಂಧಕ ಜಿ.ಆರ್.ವಿಜಯಕುಮಾರ್, ಲೆಕ್ಕಪರಿಶೋಧನಾ ಉಪನಿರ್ದೇಶಕಿ ಹೇಮಾವತಿ, ಉಪ ವಿಭಾಗದ ಸಹಾಯಕ ನಿಬಂಧಕಿ ಶೈಲಜಾ, ಸಹಕಾರ ತರಬೇತಿ ಸಂಸ್ಥೆ ಪ್ರಾಂಶುಪಾಲ ಆರ್.ಎಸ್. ರೇಣುಕಾ, ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಸಿಇಓ ಯೋಗೇಂದ್ರ ನಾಯಕ್, ಡಿಸಿಸಿ ಬ್ಯಾಂಕ್ ಮಹಾಪ್ರಬಂಧಕಿ ಭೋಜಮ್ಮ, ಕೊಡಗು ಕಾಸ್ಕಾರ್ಡ್ ಬ್ಯಾಂಕ್ ಜಿಲ್ಲಾ, ಹಾಸನ ಹಾಲು ಒಕ್ಕೂಟದ ವ್ಯವಸ್ಥಾಪಕರು ಇತರರಿದ್ದರು.

ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ



ಮಡಿಕೇರಿ ಡಿಸಿ ಕಚೇರಿ ಎದುರು ರಾಜ್ಯ ಸರ್ಕಾರ ವಿರುದ್ಧ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮಡಿಕೇರಿ, ನ.22–ವಕ್ಫ್ ಕಾಯ್ದೆ ಮೂಲಕ ಬಡ ರೈತಾಪಿ ವರ್ಗ ಸೇರಿದಂತೆ ಮಠ–ಮಾನ್ಯಗಳ ಭೂಮಿಯನ್ನು ಕಸಿಯುವ ಪ್ರಯತ್ನಕ್ಕೆ ರಾಜ್ಯ ಸರ್ಕಾರ ಮುಂದಾಗಿದೆ ಎಂದು ಆರೋಪಿಸಿ ಕೊಡಗು ಜಿಲ್ಲಾ ಬಿಜೆಪಿ ಕಾರ್ಯಕರ್ತರು ನಗರದಲ್ಲಿ ಶುಕ್ರವಾರ ಬೃಹತ್ ಪ್ರತಿಭಟನೆ ನಡೆಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಎಂಎಲ್‌ಸಿ ಸುಜಾ ಕುಶಾಲಪ್ಪ, ಮಾಜಿ ಶಾಸಕರಾದ ಎಂ.ಪಿ.ಅಪ್ಪಚ್ಚು ರಂಜನ್, ಕೆ.ಜಿ.ಬೋಪಯ್ಯ, ಮಾಜಿ ಸಂಸದ ಪ್ರತಾಪ ಸಿಂಹ, ಮಾಜಿ ಎಂಎಲ್‌ಸಿ ಸುನೀಲ್ ಸುಬ್ರಮಣಿ ನೇತೃತ್ವದಲ್ಲಿ ನಗರದ ಶ್ರೀ ಚೌಡೇಶ್ವರಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಮೆರವಣಿಗೆ ಆರಂಭಗೊಂಡಿತು.

ಕೊಡಗಿನ ಜನತೆ ಸಹಿಸಲಾರರು: ಹಲವಾರು ದಶಕಗಳಿಂದ ಕೃಷಿ ಮಾಡಿಕೊಂಡು ಬಂದ ಬಡ ರೈತರ ಜಮೀನು, ಸಹಸ್ರಾರು ಮಂದಿಗೆ ಶಿಕ್ಷಣ, ಅನ್ನದಾಸೋಹ ಕಲ್ಪಿಸುವ ಮಠದ ಆಸ್ತಿಗಳನ್ನು ವಕ್ಫ್ ಕಾಯ್ದೆ ಮೂಲಕ ಕಬಳಿಸುವ ಹುನ್ನಾರಕ್ಕೆ ರಾಜ್ಯ ಸರ್ಕಾರ ಮುಂದಾಗಿದೆ. ಜಿಲ್ಲೆಯಲ್ಲೂ ಇಂತಹ ಕೆಲವೊಂದು ಪ್ರಕರಣಗಳು ನಡೆದಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಕೊಡಗಿನ ಜನತೆ ಶಾಂತಿ ಪ್ರಿಯರಾದರು, ವಕ್ಫ್ ಮೂಲಕ ಅವರ ಶಾಂತಿಗೆ ಭಂಗ ತಂದಲ್ಲಿ ಜನತೆ ಸಹಿಸಲಾರರು. ವಕ್ಫ್ ಸಂಬಂಧಿಸಿದಂತೆ ಕೇಂದ್ರ ಜಂಟಿ ಸಮಿತಿ ರಚಿಸಿದ್ದು, ಅದು ಸೂಚಿಸುವ ಬದಲಾವಣೆಗಳಿಗೆ ರಾಜ್ಯ ಒಪ್ಪಿಗೆ ನೀಡಬೇಕು. ಮಡಿಕೇರಿ ರಾಜರ ಗದ್ದುಗೆ ಆಸ್ತಿ ಅತಿಕ್ರಮಣ ತೆರವುಗೊಳಿಸಬೇಕು. ಜಿಲ್ಲೆಯ ಸಿ ಮತ್ತು ಡಿ ಜಮೀನನ್ನು ಅರಣ್ಯ ಎಂದು ಘೋಷಣೆ ಮಾಡುವ ಪ್ರಯತ್ನವನ್ನು ಸರ್ಕಾರ ಕೈಬಿಡಬೇಕೆಂದು ಆಗ್ರಹಿಸಿದರು.

ಡಿಸಿ ಕಚೇರಿ ಎದುರು ಧರಣಿ: ಬಿಜೆಪಿ ಪ್ರಮುಖರು, ಕಾರ್ಯಕರ್ತರು ಮೆರವಣಿಗೆ ಮೂಲಕ ಡಿಸಿ ಕಚೇರಿಗೆ ತೆರಳಿ ಸಂಜೆ ವರೆಗೆ ಧರಣಿ ನಡೆಸಿದರು. ಬಳಿಕ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಪಕ್ಷದ ಪ್ರಮುಖರಾದ ಸುವಿನ್ ಗಣಪತಿ, ಮಹೇಶ್ ಜೈನಿ, ಮನು ಮುತ್ತಪ್ಪ, ರೀನಾ ಪ್ರಕಾಶ್, ಅರುಣ್ ಶೆಟ್ಟಿ, ಆರ್.ಕೆ.ಚಂದ್ರು, ನಾಗೇಶ್ ಕುಂದಲ್ಪಾಡಿ, ಸತೀಶ್ ಜೋಯಪ್ಪ, ನೆಲ್ಲೀರ ಚಲನ್, ಕೆ.ಎಂ.ಲೋಕೇಶ್, ಪಿ.ಎಂ.ರವಿ, ಬಿ.ಕೆ.ಅರುಣ್ ಕುಮಾರ್, ಬಿ.ಕೆ.ಜಗದೀಶ್, ಕಾಂಗೀರ ಸತೀಶ್, ಮನು ಮಂಜುನಾಥ್, ಡೀನ್ ಬೋಪಣ್ಣ, ಉಮೇಶ್ ಸುಬ್ರಮಣಿ, ಕನ್ನಂಡ ಸಂಪತ್, ಹಿಂದೂ ಪರ ಸಂಘಟನೆಗಳ ಪ್ರಮುಖರು ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.

ವಕೀಲ ಕಣ್ಣನ್ ಹತ್ಯೆ ಖಂಡಿಸಿ ಪ್ರತಿಭಟನೆ

ಮಡಿಕೇರಿ: ಹೊಸೂರು ವಕೀಲ ಕಣ್ಣನ್ ಹತ್ಯೆ ಖಂಡಿಸಿ ಮಡಿಕೇರಿ ವಕೀಲರ ಸಂಘದಿಂದ ನಗರದ ನ್ಯಾಯಾಲಯ ಸಂಕೀರ್ಣದ ಮುಂದೆ ಪ್ರತಿಭಟನೆ ನಡೆಸಲಾಯಿತು.

ವಕೀಲರ ಸಂಘದ ಅಧ್ಯಕ್ಷ ಎಂ.ಎ ನಿರಂಜನ್ ಮಾತನಾಡಿ, ಎರಡು ದಿನಗಳ ಹಿಂದೆ ರಾಜ್ಯದ ಗಡಿಗೆ ಹೊಂದಿಕೊಂಡಿರುವ ಹೊಸೂರು ನ್ಯಾಯಾಲಯ ಆವರಣದಲ್ಲಿ ವಕೀಲ ಕಣ್ಣನ್‌ನ್ನು ಬರ್ಬರವಾಗಿ ಕೊಲೆ ಮಾಡಲಾಗಿದೆ ಇಂದಿನ ದಿನಗಳಲ್ಲಿ ವಕೀಲರು ಭಯದಲ್ಲಿ ಕೆಲಸ ನಿರ್ವಹಿಸುವಂತಾಗಿದೆ ವಕೀಲರಿಗೆ ಸೂಕ್ತ ರಕ್ಷಣೆ ಕೊರತೆಯಿಂದಾಗಿ ಇಂಥ ಘಟನೆಗಳು ಮರುಕಳುಹಿಸುತ್ತಿದ್ದು, ಕಾನೂನು ಸುವ್ಯವಸ್ಥೆ ಕಾಪಾಡುವವರು ಈ ದಿಸೆಯಲ್ಲಿ ವಕೀಲರಿಗೆ ಸೂಕ್ತ ರಕ್ಷಣೆ ನೀಡುವಂತಾಗಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘದ ಕಾರ್ಯದರ್ಶಿ ಡಿ.ಎಂ.ಕೇಶವ, ಉಪಾಧ್ಯಕ್ಷ ಎಂ.ಪಿ.ನಾಗರಾಜ್, ಜಂಟಿ ಕಾರ್ಯದರ್ಶಿ ಪವನ್ ಪೆಮ್ಮಯ್ಯ, ಖಜಾಂಚಿ ಜಿ.ಆರ್.ರವಿಶಂಕರ್ ಭಾಗವಹಿಸಿದ್ದರು.



ವಕೀಲ ಕಣ್ಣನ್ ಹತ್ಯೆ ಖಂಡಿಸಿ ಮಡಿಕೇರಿ ವಕೀಲರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಕಲಿಯಂಡ ಸಾಬು ಅಯ್ಯಣ್ಣ ನಿಧನ



ನಾಪೋಕ್ಲು: ಮೂಲತಃ ಕೊಳಕೇರಿ ಗ್ರಾಮದವರಾದ ನಾಪೋಕ್ಲುವಿನ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕ್ರೀಡಾ ಅಕಾಡೆಮಿ ಸ್ಥಾಪಕ ಅಧ್ಯಕ್ಷ ಕಲಿಯಂಡ ಸಾಬು ಅಯ್ಯಣ್ಣ(80) ಶುಕ್ರವಾರ ನಿಧನರಾದರು.

ಮೃತರು ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಇವರು ಹಾಕಿ ಎನ್‌ಐಎಸ್ ತರಬೇತುದಾರ ಹಾಗೂ ಬಿಇ ಎಂಎಲ್ ಕ್ರೀಡಾಪಟುವಾಗಿದ್ದರು. ನಾಪೋಕ್ಲು ಕೊಡವ ಸಮಾಜದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ, ಜನರಲ್ ಕೆ.ಎಸ್.ತಿಮ್ಮಯ್ಯ ಬಗ್ಗೆ ಅವಹೇಳನ

ಸಪ್ತಸಾಗರ ವಾಟ್ಸ್‌ಆ್ಯಪ್ ಗ್ರೂಪ್ ಸದಸ್ಯನ ವಿರುದ್ಧ ದೂರು



ಮಡಿಕೇರಿ ಕೊಡವ ಸಮಾಜದಿಂದ ಎಸ್‌ಪಿ ಕೆ.ರಾಮರಾಜನ್ ಅವರಿಗೆ ದೂರು ನೀಡಲಾಯಿತು.

ಮಡಿಕೇರಿ: ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಹಾಗೂ ಪದ್ಮಭೂಷಣ ಜನರಲ್ ಕೆ.ಎಸ್.ತಿಮ್ಮಯ್ಯ ಅವರ ಬಗ್ಗೆ ಅವಹೇಳನಾಕಾರಿ ಪೋಸ್ಟ್ ಮಾಡಿದ ಸಪ್ತಸಾಗರ(ಕಡಲು) ಎಂಬ ವಾಟ್ಸ್‌ಪ್ ಗ್ರೂಪ್‌ನ ಸದಸ್ಯ ಶ್ರೀವತ್ಸ ಭಟ್ ವಿರುದ್ಧ ಸುಂಟಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅವಹೇಳನಕಾರಿ ಸಂದೇಶವನ್ನು ವಾಟ್ಸ್‌ಪ್ ಮೂಲಕ ಹರಿಯಬಿಟ್ಟ ಹಿನ್ನೆಲೆಯಲ್ಲಿ ಗ್ರೂಪ್ ಅಡ್ಮಿನ್‌ನನ್ನು ವಿಚಾರಣೆ ನಡೆಸಿ ಮಾಹಿತಿ ಪಡೆಯಲಾಗಿದೆ. ಈ ರೀತಿಯ ಸಂದೇಶ ಹಂಚಿಕೊಂಡವರ ಮಾಹಿತಿಯನ್ನು ಸ್ಥಳೀಯ ಠಾಣೆಗೆ ನೀಡುವಂತೆ ಸೂಚಿಸಲಾಗಿದೆ. ಆರೋಪಿ ಶ್ರೀವತ್ಸ ಭಟ್‌ನನ್ನು ಶೀಘ್ರ ದಸ್ತಗಿರಿ ಮಾಡಿ ಕ್ರಮ ಕೈಗೊಳ್ಳುವುದಾಗಿ ಪೊಲೀಸರು ತಿಳಿಸಿದ್ದಾರೆ.

ಎಸ್‌ಪಿಗೆ ಮನವಿ ಸಲ್ಲಿಕೆ: ಭಾರತೀಯ ಸೇನೆಯ ಮೊದಲ ಮಹಾದಂಡನಾಯಕರಾಗಿದ್ದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಹಾಗೂ ಧೀಮಂತ ಸೈನಿಕ ಪದ್ಮಭೂಷಣ ಜನರಲ್ ಕೆ.ಎಸ್.ತಿಮ್ಮಯ್ಯ ಮತ್ತು ಕೊಡವ ಜನಾಂಗದ ಬಗ್ಗೆ ಸಪ್ತಸಾಗರ (ಕಡಲು) ಎಂಬ ವಾಟ್ಸ್‌ಪ್ ಗ್ರೂಪ್‌ನಲ್ಲಿ ಶ್ರೀವತ್ಸ ಭಟ್ ಅವಹೇಳನಕಾರಿ ಪೋಸ್ಟ್ ಮಾಡಿದ್ದು, ಆತನನ್ನು ತಕ್ಷಣ ಬಂಧಿಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರಿಗೆ ಕೊಡವ ಸಂಘಟನೆ ಪ್ರಮುಖ ಪ್ರತೀಕ್ ಪೊನ್ನಣ್ಣ ದೂರು ನೀಡಿದ್ದಾರೆ. ವ್ಯಾಟ್ಸ್‌ಪ್ ಗ್ರೂಪ್‌ನಲ್ಲಿ ಸಂದೇಶ ಹಾಕಿರುವುದು, ಅದನ್ನು ಹಂಚಿಕೊಂಡಿರುವುದು ಹಾಗೂ ಅವಹೇಳನಕಾರಿ ಸಂದೇಶ ಬಗ್ಗೆ ಕೊಡಗು ಸೈಬರ್ ಕ್ರೈಂ ಪೊಲೀಸರು ತನಿಖೆ ನಡೆಸಬೇಕು. ಕಿಡಿಗೇಡಿಯನ್ನು ಶೀಘ್ರ ಬಂಧಿಸಬೇಕು ಎಂದು ಆಗ್ರಹಿಸಿದ್ದಾರೆ. ಇದೇ ವೇಳೆ ಬೊಳ್ಳಜಿರ ಅಯ್ಯಪ್ಪ, ಮಡಿಕೇರಿ ಕೊಡವ ಸಮಾಜದ ವಿವಿಧ ಸಂಘಟನೆಗಳ ಮುಖಂಡರು ಇದ್ದರು.

ಉರುಳಿದ ಕಾರು: ಪ್ರಯಾಣಿಕರು ಪಾರು

ಮಡಿಕೇರಿ, ನ.22–ಚಾಲಕನ ನಿಯಂತ್ರಣ ತಪ್ಪಿದ ಕಾರು ರಸ್ತೆಬದಿಯ ಕಾಫಿ ತೋಟದೊಳಗೆ ಉರುಳಿದ್ದು, ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾದ ಘಟನೆ ನಾಪೋಕ್ಲು–ವಿರಾಜಪೇಟೆ ಮುಖ್ಯರಸ್ತೆಯ ಬೇತು ಗ್ರಾಮದಲ್ಲಿ ಗುರುವಾರ ರಾತ್ರಿ ನಡೆದಿದೆ.



ಬೇತು ಗ್ರಾಮದ ಕಾಫಿ ತೋಟದೊಳಗೆ ಉರುಳಿದ ಕಾರು.

ನಾಪೋಕ್ಲು ಕೊಡವ ಸಮಾಜದಲ್ಲಿ ಮದುವೆ ಸಮಾರಂಭ ಮುಗಿಸಿ ವಿರಾಜಪೇಟೆ ಕಡೆಗೆ ನಾಲ್ವರು ಪ್ರಯಾಣಿಸುತ್ತಿದ್ದ ಕಾರು ಬೇತು ಗ್ರಾಮದ ನಾಪೋಕ್ಲು–ವಿರಾಜಪೇಟೆ ಮುಖ್ಯರಸ್ತೆ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಕಾಫಿ ತೋಟದೊಳಗೆ ಉರುಳಿ ಬಿದ್ದಿದೆ. ಅಪಘಾತದಿಂದ ಕಾರು ಜಖಂಗೊಂಡಿದ್ದು, ಅದೃಷ್ಟವಶಾತ್ ಕಾರಿನಲ್ಲಿದ್ದ ಪ್ರಯಾಣಿಕರು ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕಾರನ್ನು ಶುಕ್ರವಾರ ಬೆಳಗ್ಗೆ ಸಾರ್ವಜನಿಕರ ಸಹಕಾರದಿಂದ ಮೇಲೆತ್ತಲಾಯಿತು.

ವಕ್ಫ್ ಕಾಯ್ದೆ ವಿರುದ್ಧ ಬಿಜೆಪಿ ಪ್ರತಿಭಟನೆ



ವಕ್ಫ್ ಕಾಯ್ದೆ ರದ್ದುಪಡಿಸುವಂತೆ ಆಗ್ರಹಿಸಿ ಚಾಮರಾಜನಗರದಲ್ಲಿ ಬಿಜೆಪಿ ಮುಖಂಡರು, ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ನ.22– 'ನಮ್ಮ ಭೂಮಿ ನಮ್ಮ ಹಕ್ಕು' ಘೋಷಣೆಯೊಂದಿಗೆ ವಕ್ಫ್ ಕಾಯ್ದೆ ರದ್ದುಪಡಿಸುವಂತೆ ಆಗ್ರಹಿಸಿ ಜಿಲ್ಲಾ ಬಿಜೆಪಿ ವತಿಯಿಂದ ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಶ್ರೀ ಚಾಮರಾಜೇಶ್ವರ ಉದ್ಯಾನದ ಎದುರು ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಹಾಗೂ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್ ನೇತೃತ್ವದಲ್ಲಿ ಪಕ್ಷದ ಕಾರ್ಯಕರ್ತರು ಧರಣಿ ನಡೆಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಕರ್ನಾಟಕವನ್ನು ಪಾಕಿಸ್ತಾನ ಮಾಡಲು ಹೊರಟಿದ್ದಾರೆ. ಮಠ–ಮಂದಿರ ಜಾಗಕ್ಕೂ ವಕ್ಫ್ ಬೋರ್ಡ್ ಬೇಲಿ ಹಾಕುತ್ತಿದೆ. ರಾಜ್ಯ ಕಾಂಗ್ರೆಸ್ ಸರ್ಕಾರ ರೈತರ ಪಾಲಿಗೆ ಮರಣಶಾಸನ ಬರೆಯುತ್ತಿದೆ ಎಂದು ಆರೋಪಿಸಿದರು.

ಜಮೀರ್ ಅಹಮ್ಮದ್ ಖಾನ್‌ನ್ನು ಸಂಪುಟದಿಂದ ವಜಾಗೊಳಿಸಬೇಕು. ವಕ್ಫ್ ಅದಾಲತ್ ಹೆಸರಿನಲ್ಲಿ ರೈತರ ಬಾಯಿಗೆ ಮಣ್ಣು ಹಾಕಲಾಗುತ್ತಿದೆ. ವಕ್ಫ್‌ನಿಂದ ರೈತರ ಆಸ್ತಿ ಕಬಳಿಕೆ, ಮುಡಾ, ವಾಲ್ಮೀಕಿ ನಿಗಮದ ಹಗರಣ, ಭ್ರಷ್ಟ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡಲೇ ರಾಜೀನಾಮೆ ನೀಡಬೇಕು. ನಾನು ಕಳಂಕ ರಹಿತ ರಾಜಕಾರಣಿ ಎಂದು ಬೊಬ್ಬೆ ಹೊಡೆಯುತ್ತಿದ್ದ ಸಿದ್ದರಾಮಯ್ಯ ರಾಜ್ಯದ ಜನತೆಗೆ ಉತ್ತರಿಸಬೇಕು ಎಂದು ಆಗ್ರಹಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಜಮೀರ್ ಅಹಮ್ಮದ್ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನಾಕಾರರು ಭಿತ್ತಿಪತ್ರ ಪ್ರದರ್ಶಿಸಿ, ಆಕ್ರೋಶ ವ್ಯಕ್ತಪಡಿಸಿದರು. ನಂತರ ತಹಸೀಲ್ದಾರ್ ಗಿರಿಜಾ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪಿ.ವೃಷಭೇಂದ್ರಪ್ಪ, ಮೂಡ್ನಾಕೂಡು ಪ್ರಕಾಶ್, ಹೊನ್ನೂರು ಮಹದೇವಸ್ವಾಮಿ, ಮಾಜಿ ಅಧ್ಯಕ್ಷ ಆರ್.ಸುಂದರ್, ನೂರೊಂದು ಶೆಟ್ಟಿ, ಜಿಲ್ಲಾ ಉಪಾಧ್ಯಕ್ಷ ಶಿವುವಿರಾಟ್, ನಗರ ಮಂಡಲ ಅಧ್ಯಕ್ಷ ಶಿವರಾಜ್, ಹನೂರು ನಿಶಾಂತ್, ಕೂಡ್ಲೂರು ಶ್ರೀಧರಮೂರ್ತಿ, ಕುಲಗಾಣ ಶಾಂತಮೂರ್ತಿ, ಶಿವರಾಜ್, ಕಮಲಮ್ಮ ಮೂಡಹಳ್ಳಿ ಮೂರ್ತಿ, ಹೆಚ್.ಎಂ.ಬಸಪ್ಪಣ್ಣ ಅರಕಲವಾಡಿ ನಾಗೇಂದ್ರ, ನಗರಸಭಾ ಉಪಾಧ್ಯಕ್ಷ ಮಮತಾ, ಬಾಲಸುಬ್ರಮಣ್ಯಂ. ಜಿಲ್ಲಾ ವಕ್ತಾರ ಕಾಡಹಳ್ಳಿ ಕುಮಾರ್, ಜಿಪಂ ಮಾಜಿ ಸದಸ್ಯ ಬಾಲರಾಜು, ಕಮರಹಳ್ಳಿ ರವಿ, ಆಗತಗೌಡನಹಳ್ಳಿ ಬಸವರಾಜು, ಎಸ್‌ಟಿ ಮೋರ್ಚಾ ರಾಜ್ಯ ಕಾರ್ಯದರ್ಶಿ ಜಯಸುಂದರ್, ಜಿಲ್ಲಾಧ್ಯಕ್ಷ ಚಂದ್ರು ಇತರರು ಭಾಗವಹಿಸಿದ್ದರು.

ಕುಡಿಯುವ ನೀರು ಕಾಮಗಾರಿ ಅನುಷ್ಠಾನಗೊಳಿಸಿ

ಜಿಲ್ಲಾ ಅಭಿವೃದ್ಧಿ ಸಮನ್ವಯ ಸಮಿತಿ ಸಭೆಯಲ್ಲಿ ಅಧಿಕಾರಿಗಳಿಗೆ ಸಂಸದ ಸುನೀಲ್ ಬೋಸ್ ಸೂಚನೆ

ಚಾಮರಾಜನಗರ, ನ.22–ಕೇಂದ್ರ ಪುರಸ್ಕೃತ ಅಮೃತ್ 2.0 ಯೋಜನೆಯಡಿ ಜಿಲ್ಲೆಯ ಗ್ರಾಮೀಣ ಹಾಗೂ ನಗರ ಪ್ರದೇಶಗಳಿಗೆ ಕುಡಿಯುವ ನೀರು ಸರಬರಾಜು ಕಾಮಗಾರಿಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವಂತೆ ಸಂಸದ ಸುನೀಲ್ ಬೋಸ್ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.



ಚಾಮರಾಜನಗರ ಜಿಲ್ಲಾ ಪಂಚಾಯಿತಿ ಕೆಡಿಪಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಅಭಿವೃದ್ಧಿ ಸಮನ್ವಯ ಸಮಿತಿ ಸಭೆಯಲ್ಲಿ ಸಂಸದ ಸುನೀಲ್ ಬೋಸ್ ಮಾತನಾಡಿದರು.

ನಗರದ ಜಿಲ್ಲಾ ಪಂಚಾಯಿತಿ ಕೆಡಿಪಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಅಮೃತ್ 2.0 ಹಾಗೂ ಜಲಜೀವನ್ ಮಿಷನ್ ಯೋಜನೆಯಡಿ ಕುಡಿಯುವ ನೀರು ಕಾಮಗಾರಿ ನಡೆಯುವ ಸಂದರ್ಭದಲ್ಲಿ ಅಧಿಕಾರಿಗಳು ಕ್ಷೇತ್ರ ಪ್ರವಾಸ ಕೈಗೊಂಡು ಖುದ್ದು ಸ್ಥಳ ಪರಿಶೀಲಿಸಬೇಕು. ಸಮರ್ಪಕವಾಗಿ ಪೈಪ್‌ಲೈನ್ ಅಳವಡಿಸಬೇಕು. ಕಾಮಗಾರಿ ಗುಣಮಟ್ಟದಿಂದ ಕೂಡಿರಬೇಕು. ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಬಗ್ಗೆ ಜನರಿಂದ ದೂರು ಬರದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

> ಎಲ್ಲಾ ತಾಲೂಕು ಕಚೇರಿ, ನಾಡಕಚೇರಿ ಹಾಗೂ ಉಪನೋಂದಣಾಧಿಕಾರಿ ಕಚೇರಿಗಳಲ್ಲಿ ಮಧ್ಯವರ್ತಿಗಳನ್ನು ನಿಯಂತ್ರಿಸಲು ಅವಶ್ಯ ನಾಮಫಲಕ ಅಳವಡಿಸಲಾಗಿದೆ. ಸಕಾಲದಲ್ಲಿ ಪಿಂಚಣಿಗಳನ್ನು ಅರ್ಹರಿಗೆ ತಲುಪಿಸಲಾಗುತ್ತಿದೆ. ಪೌತಿ ಆಂದೋಲನವನ್ನು ಅಭಿಯಾನ ಮಾದರಿಯಲ್ಲಿ ಹಮ್ಮಿಕೊಳ್ಳಲಾಗಿದೆ.
> –ಶಿಲ್ಪನಾಗ್, ಜಿಲ್ಲಾಧಿಕಾರಿ

ಕೃಷಿ ಮತ್ತು ತೋಟಗಾರಿಕೆ ಇಲಾಖೆ ಕೇಂದ್ರ ಪುರಸ್ಕೃತ ಯೋಜನೆಗಳನ್ನು ಜನರಿಗೆ ತಲುಪಿಸಲು ಮುಂದಾಗಬೇಕು. ರೈತರಿಗೆ ಸೌಲಭ್ಯಗಳ ಮಾಹಿತಿ ನೀಡಬೇಕು. ಅರ್ಹ ರೈತರಿಗೆ ಸವಲತ್ತು ದೊರೆಯಬೇಕು. ಫಲಾನುಭವಿಗಳ ಆಯ್ಕೆ ಪಾರದರ್ಶಕವಾಗಿರಬೇಕು. ಅಧಿಕಾರಿಗಳು ಕ್ಷೇತ್ರದಾದ್ಯಂತ ಪ್ರವಾಸ ಮಾಡಿ, ಯೋಜನೆಗಳ ಬಗ್ಗೆ ರೈತರಿಗೆ ಅರಿವು ಮೂಡಿಸಬೇಕು. ಕೃಷಿ ಯಾಂತ್ರೀಕರಣ ಯೋಜನೆಗಳ ಸವಲತ್ತು ವಿತರಣೆ ಕುರಿತು ಆಯಾ ಕ್ಷೇತ್ರದ ಶಾಸಕರ ಗಮನಕ್ಕೆ ತರಬೇಕು ಎಂದರು.

ನಗರದ ಸಂತೇಮರಹಳ್ಳಿ ರಸ್ತೆಯ ದೊಡ್ಡರಾಯಪೇಟೆ ಜಂಕ್ಷನ್‌ನಲ್ಲಿ ಸಾಕಷ್ಟು ಅಪಘಾತಗಳು ಸಂಭವಿಸುತ್ತಿದ್ದು, ರಾಷ್ಟ್ರೀಯ ಹೆದ್ದಾರಿ ಯೋಜನೆಯಡಿ ಅಲ್ಲಿ ವೃತ್ತ ನಿರ್ಮಿಸಬೇಕು. ನೂತನವಾಗಿ ಬೈಪಾಸ್ ರಸ್ತೆಯಾಗಿರುವುದರಿಂದ ಅಲ್ಲಿ ಸೂಚನಾಫಲಕಗಳು ಅವಶ್ಯವಾಗಿವೆ. ಪ್ರತಿ 3 ತಿಂಗಳಿಗೊಮ್ಮೆ ರಸ್ತೆ ಸುರಕ್ಷತಾ ಸಭೆ ಏರ್ಪಡಿಸಿ, ಅಗತ್ಯ ಕ್ರಮ ಕೈಗೊಳ್ಳಬೇಕು. ಗುಂಡ್ಲುಪೇಟೆ ಪಟ್ಟಣದಲ್ಲಿ ರಸ್ತೆ ಕಾಮಗಾರಿ ಶೀಘ್ರವಾಗಿ ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶಿಸಿದರು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಹರದನಹಳ್ಳಿಯ ಬಂಡಿಗೆರೆಯಿಂದ ಅಮಚವಾಡಿಗೆ ಹೋಗುವ ರಸ್ತೆಯಲ್ಲಿ 250 ಮೀ. ರಸ್ತೆ ಕಾಮಗಾರಿ ಅಂದಾಜು ಪಟ್ಟಿಯಲ್ಲಿ ಅನುಮೋದನೆಗೊಂಡಿದ್ದರೂ ರಸ್ತೆ ಕಾಮಗಾರಿ ಆಗಿಲ್ಲ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಈ ಬಗ್ಗೆ ಗಮನಹರಿಸಬೇಕು. ಅಲ್ಲದೇ ಪ್ರಧಾನಮಂತ್ರಿ ಆದರ್ಶ ಗ್ರಾಮ ಯೋಜನೆಯಡಿ ಚಾಮರಾಜನಗರ ತಾಲೂಕಿನ ವಿವಿಧ ಗ್ರಾಮಗಳ ಅಭಿವೃದ್ಧಿ ಕಾಮಗಾರಿಗಳನ್ನು ಅಧಿಕಾರಿಗಳು ಖುದ್ದಾಗಿ ಪರಿಶೀಲಿಸಿ ವರದಿ ಸಲ್ಲಿಸುವಂತೆ ತಿಳಿಸಿದರು.

ಸಭೆಗೂ ಮೊದಲು ಜಿಲ್ಲಾಡಳಿತ ಭವನದ 2ನೇ ಮಹಡಿಯಲ್ಲಿ ನೂತನ ಲೋಕಸಭಾ ಸದಸ್ಯರ ಕಚೇರಿಯನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ, ಹೆಚ್.ಎಂ.ಗಣೇಶ್‌ಪ್ರಸಾದ್ ಉದ್ಘಾಟಿಸಿದರು. ಸಭೆಯಲ್ಲಿ ಶಾಸಕರಾದ ಎಚ್.ಎಂ.ಗಣೇಶ್ ಪ್ರಸಾದ್, ಎಂ.ಆರ್.ಮಂಜುನಾಥ್, ಜಿಪಂ ಸಿಇಓ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ.ಕವಿತಾ, ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಸಂತೋಷ್ ಕುಮಾರ್, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದಾ ಉಪಸ್ಥಿತರಿದ್ದರು.

ಬಿಸಲವಾಡಿ ಗ್ರಾಮದಲ್ಲಿ ಸಹಕಾರ ಸಪ್ತಾಹ



ಚಾಮರಾಜನಗರ ತಾಲೂಕಿನ ಬಿಸಲವಾಡಿ ಗ್ರಾಮದಲ್ಲಿ ನಡೆದ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ಜಿಲ್ಲಾ ಸಹಕಾರ ಒಕ್ಕೂಟ ಅಧ್ಯಕ್ಷ ನಂಜುಂಡ ಪ್ರಸಾದ್ ಉದ್ಘಾಟಿಸಿದರು

ಚಾಮರಾಜನಗರ, ನ.22–ತಾಲೂಕಿನ ಬಿಸಲವಾಡಿ ಗ್ರಾಮದಲ್ಲಿ ಹಾಲು ಉತ್ಪಾದಕರ ಸಂಘದ ವತಿಯಿಂದ ಗ್ರಾಮದ ಲಕ್ಷ್ಮೀದೇವಿ ದೇವಸ್ಥಾನ ಆವರಣದಲ್ಲಿ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಹೆಚ್.ಎಸ್. ನಂಜುಂಡ ಪಸಾದ್ ಮಾತನಾಡಿ, ಸಹಕಾರ ಸಂಘಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದ ಕೀರ್ತಿ ಮೊದಲ ಪ್ರಧಾನಿ ಜವಹರಲಾಲ್ ನೆಹರು ಅವರಿಗೆ ಸಲ್ಲುತ್ತದೆ ಎಂದು ಹೇಳಿದರು.

ಚಾಮುಲ್ ನಿರ್ದೇಶಕ ಹೆಚ್.ಎಸ್. ಬಸವರಾಜು, ಸದಾಶಿವಮೂರ್ತಿ ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕರಾದ ಎಂ.ಎಂ.ನಾಗರಾಜು, ಮುದ್ದಯ್ಯ, ಹೆಚ್.ಎನ್.ಸುಂದರ್‌ರಾಜ್, ಎಂ.ಎಂ.ಪ್ರಭುಸ್ವಾಮಿ, ಎಂ.ರವಿ, ಹೆಚ್.ಎಂ.ಬಸವಣ್ಣ, ವಿ.ಮಹದೇವಸ್ವಾಮಿ, ನಾಗಸುಂದರ, ಸಹಾಯಕ ಸಂಘಗಳ ಉಪನಿಬಂಧಕರಾದ ಸಿ.ಜ್ಯೋತಿ ಅರಸ್, ಪಿ.ಶೋಭಾ, ಚಾಮುಲ್ ಸಹಾಯಕ ವ್ಯವಸ್ಥಾಪಕ ಅಮರ್, ತಾಲೂಕು ಸಹಕಾರ ಸಂಘಗಳ ಮಾರ್ಗ ವಿಸ್ತರಣಾಧಿಕಾರಿಗಳಾದ ದಯಾನಂದ್, ಭಾಗ್ಯರಾಜ್, ಲಕ್ಷ್ಮೀ, ನಂಜುಂಡಸ್ವಾಮಿ, ರಾಜು, ನಾಗೇಶ್ ಹೇಮಂತ್ ನಾಗೇಶ್ ಅಧ್ಯಕ್ಷ ಎನ್.ಬಸವಣ್ಣ, ಮುಖ್ಯ ನಿರ್ವಹಣಾಧಿಕಾರಿ ಮನುಜ, ಮುಖ್ಯ ಕಾರ್ಯನಿರ್ವಾಹಕ ಮಹೇಶ್, ಸಂಘದ ಸದಸ್ಯರು ಭಾಗವಹಿಸಿದ್ದರು.

ಅಮಾನತುಗೊಂಡ ಪಡಿತರ ಚೀಟಿಗಳು ಮರುಚಾಲನೆ

ಚಾಮರಾಜನಗರ: ಜಿಲ್ಲೆಯಲ್ಲಿ ಅಮಾನತುಗೊಳಿಸಿರುವ ಪಡಿತರ ಚೀಟಿಗಳನ್ನು ಮರುಚಾಲನೆಗೊಳಿಸಲಾಗುತ್ತಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ಯೋಗಾನಂದ ತಿಳಿಸಿದ್ದಾರೆ.

ಇಲಾಖೆ ಆಯುಕ್ತರ ನಿರ್ದೇಶನದಂತೆ ಜಿಲ್ಲಾ ವ್ಯಾಪ್ತಿಯಲ್ಲಿ 6 ತಿಂಗಳು ಪಡಿತರ ತೆಗೆದುಕೊಳ್ಳದವರ 7522 ಪಡಿತರ ಚೀಟಿ, 1.20 ಲಕ್ಷ ರೂ.ಗಳಿಗಿಂತ ಹೆಚ್ಚಿನ ಆದಾಯ ಹೊಂದಿರುವವರಲ್ಲಿ 453 ಕಾರ್ಡ್‌ದಾರರು ಮತ್ತು ಆದಾಯ ತೆರಿಗೆ ಇಲಾಖೆಗೆ ಪಾನ್ ಮತ್ತು ಆಧಾರ್ ಕಾರ್ಡ್ ಲಿಂಕ್‌ಗಾಗಿ 1 ಸಾವಿರ ರೂ. ದಂಡ ಪಾವತಿಸಿರುವ ಪಡಿತರ ಚೀಟಿಗಳನ್ನು ಮರುಚಾಲನೆಗೊಳಿಸಲಾಗುತ್ತಿದೆ.

ಅಮಾನತುಗೊಂಡ ಕಾರ್ಡ್‌ಗಳನ್ನು ಮರುಚಾಲನೆಗೊಳಿಸುವ ಕಾರ್ಯವನ್ನು ನ.23 ಹಾಗೂ 24ರಂದು ಪೂರ್ಣಗೊಳಿಸಲಾಗುವುದು. ಈ ತಿಂಗಳು ಆಹಾರ ಧಾನ್ಯವನ್ನು ಹಂಚಿಕೆ ಮಾಡಲಾಗುವುದು ಎಂದು ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ವಿಶೇಷಚೇತನ ಮಕ್ಕಳ ಕ್ರೀಡಾಕೂಟಕ್ಕೆ ಚಾಲನೆ



ಚಾಮರಾಜನಗರ ಜಿಲ್ಲಾ ಕ್ರೀಡಾಂಗಣದಲ್ಲಿ ಏರ್ಪಡಿಸಿದ್ದ ವಿಶೇಷಚೇತನ ಮಕ್ಕಳ ಕ್ರೀಡಾಕೂಟಕ್ಕೆ ರಾಜಣ್ಣ ಚಾಲನೆ ನೀಡಿದರು.

ಚಾಮರಾಜನಗರ, ನ.22–ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಶಾಲಾ ಶಿಕ್ಷಣ ಇಲಾಖೆ ಸಂಯುಕ್ತಾಶ್ರಯದಲ್ಲಿ ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿಶೇಷಚೇತನ ಮಕ್ಕಳ ಕ್ರೀಡಾಕೂಟಕ್ಕೆ ಚಾಲನೆ ನೀಡಲಾಯಿತು.

ಕ್ರೀಡಾಕೂಟಕ್ಕೆ ಚಾಲನೆ ಮಾತನಾಡಿದ ರಾಜ್ಯ ಅಂಗವಿಕಲ ಅಧಿನಿಯಮ ಮಾಜಿ ಆಯುಕ್ತ ರಾಜಣ್ಣ, ಕ್ರೀಡೆ ವ್ಯಕ್ತಿಗಳಲ್ಲಿ ಸಹಜವಾಗಿ ಬಾಂಧವ್ಯ, ಆತ್ಮೀಯತೆ ಆತ್ಮವಿಶ್ವಾಸ ವೃದ್ಧಿಸುತ್ತದೆ ಹಾಗೂ ವಿಕಲಚೇತನ ಮಕ್ಕಳ ಬೆಳವಣಿಗೆಗೆ ಪೂರಕವಾಗಿದೆ. ವಿಕಲಚೇತನ ಮಕ್ಕಳಿಗೆ ಅಂಗವೈಕಲ್ಯ ನ್ಯೂನತೆ ಕೀಳರಿಮೆಯಿಂದ ಮುಖ್ಯ ವಾಹಿನಿಗೆ ಬರಲು ಸಂಕೋಚವಿರುತ್ತದೆ. ಆದ್ದರಿಂದ ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬಲು ಕ್ರೀಡಾಕೂಟ ಆಯೋಜಿಸಲಾಗಿದೆ ಎಂದರು.

ಸಮನ್ವಯ ಹಾಗೂ ಸಂಯೋಜಿತ ಶಿಕ್ಷಣದಿಂದ ಪೂರ್ಣ ಪ್ರಮಾಣದಲ್ಲಿ ವಿಕಲಚೇತನ ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಹಾಗೂ ಇನ್ನಿತರ ಚಟುವಟಿಕೆಗಳಲ್ಲಿ ಭಾಗವಹಿಸಲು ಸಾಧ್ಯ. ವಿಕಲಚೇತನ ವಿದ್ಯಾರ್ಥಿಗಳು ಯಾವುದೇ ಕ್ರೀಡೆಯಲ್ಲಿ ಭಾಗವಹಿಸದೆ ಹಿಂದೆ ಸರಿಯುತ್ತಿದ್ದರು. ಅವರಿಗೆ ಪ್ರತ್ಯೇಕವಾಗಿ ಕ್ರೀಡಾ ಚಟುವಟಿಕೆಯಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ವಿಕಲಚೇತನ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರಮೇಶ್, ಶಿಕ್ಷಣ ಇಲಾಖೆ ಉಪನಿರ್ದೇಶಕ ಕಚೇರಿ ಶಿಕ್ಷಣಾಧಿಕಾರಿ ಮಲ್ಲಿಕಾರ್ಜುನ್, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಶಂಕರ್, ದೈಹಿಕ ಶಿಕ್ಷಣ ತಾಲೂಕು ಪರಿವೀಕ್ಷಕ ಮಹಾದೇವ ಇತರರು ಉಪಸ್ಥಿತರಿದರು.

ಒಂದನೇ ಪುಟದಿಂದ

ಇಂದು ಫಲಿತಾಂಶ

ಸಂಡೂರಿನಲ್ಲಿ ತಮ್ಮ ಪತ್ನಿ ಅನ್ನಪೂರ್ಣ ಅವರನ್ನು ತುಕರಾಂ ಕಣಕ್ಕಿಳಿಸಿದ್ದಾರೆ.

ಚನ್ನಪಟ್ಟಣ ಕ್ಷೇತ್ರದ ಚುನಾವಣೆ ಪ್ರತಿಷ್ಠಿತ ಕ್ಷೇತ್ರಗಳಲ್ಲಿ ಒಂದಾಗಿದ್ದು, ಆಡಳಿತಾರೂಢ ಕಾಂಗ್ರೆಸ್ ಮತ್ತು ಎನ್‌ಡಿಎ ತಮ್ಮ ವಿರೋಧಿಗಳನ್ನು ಮಣಿಸಲು ಉಪಚುನಾವಣೆಯನ್ನು ಅಸ್ತ್ರವಾಗಿ ಬಳಕೆ ಮಾಡಿಕೊಂಡಿವೆ.

ರಾಜಕೀಯ ಪಕ್ಷಗಳ ಪ್ರತಿಷ್ಠೆಗೆ ಇಲ್ಲಿನ ಮತದಾರರೂ ಸ್ಪಂದಿಸಿ, ಶೇಕಡ 88ಕ್ಕೂ ಹೆಚ್ಚು ದಾಖಲೆ ಮಾತದಾನ ಮಾಡಿದ್ದಾರೆ. ಚನ್ನಪಟ್ಟಣ ಕ್ಷೇತ್ರದ ಚುನಾವಣೆ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ದೊಡ್ಡ ಪ್ರಮಾಣದಲ್ಲಿ ಮತದಾನವಾಗಿದೆ. ಕಾಂಗ್ರೆಸ್ ಹಾಗೂ ಎನ್‌ಡಿಎ ಅಭ್ಯರ್ಥಿ ಇಬ್ಬರೂ ಗೆಲುವು ತಮ್ಮದು ಎನ್ನುತ್ತಿದ್ದಾರೆ. ಆದರೆ, ಮತದಾರ ಪ್ರಭುಗಳು ಯಾರಿಗೆ ವಿಜಯಮಾಲೆ ಹಾಕುತ್ತಾರೆ ಎಂಬುದು ನಾಳೆ ಸ್ಪಷ್ಟವಾಗಲಿದೆ.

ಅತ್ಯಂತ ಬಿಗಿ ಬಂದೋಬಸ್ತ್‌ನಲ್ಲಿ ಮತ ಎಣಿಕೆ ನಡೆಯಲಿದ್ದು, ನಾಳೆ ಬೆಳಗ್ಗೆ 6–45ಕ್ಕೆ ಸ್ಟ್ರಾಂಗ್ ರೂಂ ತೆರೆದು ಮತಯಂತ್ರಗಳನ್ನು ಎಣಿಕೆ ಸ್ಥಳಕ್ಕೆ ರವಾನಿಸಲಿದ್ದು, ಎಣಿಕೆ ಕಾರ್ಯ 8 ಗಂಟೆಗೆ ಆರಂಭವಾಗಿ ಮಧ್ಯಾಹ್ನದ ವೇಳೆಗೆ ಫಲಿತಾಂಶ ಪ್ರಕಟವಾಗಲಿದೆ.

ಚುನಾವಣೆ ಫಲಿತಾಂಶಕ್ಕೂ ಕ್ಷಣಗಣನೆ

ಗಮನ ಸೆಳೆದಿದೆ. ದೇಶದ 14 ರಾಜ್ಯಗಳಲ್ಲಿನ 48 ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯ ಮತ ಎಣಿಕೆ ಸಹ ನಾಳೆ ನಡೆಯಲಿದೆ. ಕರ್ನಾಟಕದ ಚನ್ನಪಟ್ಟಣ, ಶಿಗ್ಗಾವಿ ಹಾಗೂ ಸಂಡೂರು ಕ್ಷೇತ್ರಗಳು ಇದರಲ್ಲಿ ಸೇರಿವೆ. ಉತ್ತರಪ್ರದೇಶ 9, ರಾಜಸ್ಥಾನ 7, ಪಶ್ಚಿಮ ಬಂಗಾಳ 6, ಅಸ್ಸಾಂ 5, ಬಿಹಾರ 4, ಪಂಜಾಂಬ್ 4, ಕರ್ನಾಟಕ 3, ಕೇರಳ 2, ಮಧ್ಯಪ್ರದೇಶ 2, ಸಿಕ್ಕಿಂ 2 ಹಾಗೂ ಛತ್ತೀಸ್‌ಗಢ, ಗುಜರಾತ್, ಮೇಘಾಲಯ, ಉತ್ತರಾಖಂಡ್ ರಾಜ್ಯಗಳ ತಲಾ ಒಂದು ಕ್ಷೇತ್ರಗಳ ಮತ ಎಣಿಕೆ ನಡೆಯಲಿದೆ.

6 ತಿಂಗಳ ಗಡುವು ನೀಡಿದ ಹೈಕೋರ್ಟ್



ಅವರಿದ್ದ ವಿಭಾಗೀಯ ಪೀಠ ಈ ಆದೇಶ ನೀಡಿದೆ. ಜಲಾಶಯದ ಸುತ್ತ 20 ಕಿಮೀ ವ್ಯಾಪ್ತಿಯಲ್ಲಿ ಕಲ್ಲುಕ್ವಾರಿ ಜತೆಗೆ ಸ್ಫೋಟಕ ಚಟುವಟಿಕೆ ನಡೆಸುತ್ತಿರುವ ಘಟಕಗಳನ್ನು ಪರಿಶೀಲಿಸಿ ನಾಲ್ಕು ತಿಂಗಳಲ್ಲಿ ಸಮಗ್ರ ವರದಿ ಸಲ್ಲಿಸಬೇಕೆಂದು 2024ರ ಮಾರ್ಚ್ 5ರಂದು ಸರಕಾರಕ್ಕೆ ಆದೇಶ ನೀಡಿತ್ತು. ಆದರೆ, ಆ ಸಮಯಾವಕಾಶ ಸಾಕಾಗುತ್ತಿಲ್ಲ, ಮತ್ತೆ ಸಮಯ ನೀಡಬೇಕೆಂದು ಅಡ್ವೋಕೇಟ್ ಜನರಲ್ ಮನವಿ ಮಾಡಿದ್ದಾರೆ. ಅವರ ಮನವಿ ಪುರಸ್ಕರಿಸಿ ಜಲಾಶಯ ಸುರಕ್ಷತಾ ಸಮಿತಿಗೆ ಮತ್ತೆ ಆರು ತಿಂಗಳ ಕಾಲಾವಕಾಶ ನೀಡಲಾಗುತ್ತಿದೆ. ಅಷ್ಟರಲ್ಲಿ ಪರಿಶೀಲನೆ ಕಾರ್ಯ ಪೂರ್ಣಗೊಳಿಸಿ ವರದಿ ಸಲ್ಲಿಸಬೇಕು ಎಂದು ನ್ಯಾಯಪೀಠ ಆದೇಶ ನೀಡಿದೆ.

ಜಲಾಶಯ ಸುರಕ್ಷತೆ ಕುರಿತಂತೆ ಮೂರನೇ ಶೆಡ್ಯೂಲ್‌ನ ಸೆಕ್ಷನ್ 12ರಲ್ಲಿ ಉಲ್ಲೇಖಿಸಿರುವಂತೆ ಯಾವುದೇ ರೀತಿಯ ವಿಪತ್ತುಗಳನ್ನು ತಡೆಯಲು ಮತ್ತು ಅಣೆಕಟ್ಟೆಯಿಂದ ಸುರಕ್ಷತೆ ದೃಷ್ಟಿಯಿಂದ ರಾಜ್ಯ ಮಟ್ಟದ ಸಮಿತಿ ನಿರ್ಧಾರಗಳನ್ನು ಕೈಗೊಳ್ಳಬಹುದಾಗಿದೆ. ಹಾಗಾಗಿ, ನ್ಯಾಯಾಲಯ ನಿರ್ದೇಶನ ನೀಡಿದ್ದರೂ ಸಮಿತಿ ಗಣಿಗಾರಿಕೆ ಪುನಾರಂಭ ಕೋರಿ ಸಲ್ಲಿಸಿರುವ ಅರ್ಜಿಗಳನ್ನು ಪರಿಗಣಿಸಲು ನಿರಾಕರಿಸಿದೆ ಎಂದು ನ್ಯಾಯಾಲಯ ಹೇಳಿದೆ. ಆದ್ದರಿಂದ ಗಣಿಗಾರಿಕೆ ಪುನಾರಂಭಿಸಲು ಅನುಮತಿ ಕೋರಿರುವ ಎಲ್ಲಾ ಅರ್ಜಿಗಳನ್ನು ಪರಿ ಶೀಲಿಸಲಾಗುವುದು. ಅರ್ಜಿ ದಾರರು ಯಾವುದೇ ಸ್ಫೋಟಕ ಚಟುವಟಿಕೆ ನಡೆಸುವುದಿಲ್ಲ ವೆಂದು ಮುಚ್ಚಳಿಕೆ ನೀಡಬೇಕು. ಸಮಿತಿ ಗಣಿಗಾರಿಕೆ ಇಲಾಖೆಯ ತಜ್ಞರನ್ನೂ ಸೇರಿಸಿಕೊಂಡು ಪರಿಶೀಲಿಸಿ ನಿರ್ಧಾರ ಕೈಗೊಳ್ಳಲಿದೆ ಎಂದು ಅಡ್ವೋಕೇಟ್ ಜನರಲ್ ತಿಳಿಸಿದ್ದಾರೆ. ಅದು ನ್ಯಾಯಯುತ ಹೇಳಿಕೆಯಾಗಿದೆ. ಹಾಗಾಗಿ ಗಣಿಗಾರಿಕೆ ಪುನಾರಂಭಿಸಲು ಅನುಮತಿ ಕೋರಿರುವ ಅರ್ಜಿದಾರರು ಸಮಿತಿ ಮುಂದೆ ಹಾಜರಾಗಿ ವಿವರಣೆ ನೀಡಬೇಕು. ಸಮಿತಿ ಎಲ್ಲಾ ಅಂಶಗಳನ್ನು ಪರಿಶೀಲಿಸಿದ ಬಳಿಕ ಕಾನೂನು ರೀತಿಯಲ್ಲಿ ನಿರ್ಧಾರ ಕೈಗೊಳ್ಳಬೇಕು. ಕೈಗೊಂಡ ನಿರ್ಧಾರವನ್ನು ಅರ್ಜಿದಾರರಿಗೆ ತಿಳಿಸಬೇಕು ಎಂದು ನ್ಯಾಯಪೀಠ ಸೂಚನೆ ನೀಡಿದೆ.

ಈ ಮಧ್ಯೆ, ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಸಹಕರಿಸಲು ನೇಮಕಗೊಂಡಿದ್ದ ಅಮಿಕಸ್ ಕ್ಯೂರಿ, ಒಟ್ಟು ಜಲಾಶಯದ ಸುತ್ತ 20 ಕಿಮೀ ವ್ಯಾಪ್ತಿಯಲ್ಲಿ ಕಲ್ಲು ಗಣಿಕಾರಿಕೆ ಲೈಸೆನ್ಸ್‌ಗಳು ಕಾರ್ಯನಿರ್ವಹಿಸುತ್ತಿದ್ದವು. ಆದರೆ, ಅವುಗಳಲ್ಲಿ 38 ಕ್ವಾರಿಗಳ ಗುತ್ತಿಗೆ ಅವಧಿ ಮುಗಿದಿದೆ. ಹಾಗಾಗಿ, ಕೇವಲ 12 ಘಟಕಗಳು ಮಾತ್ರ ಕಾರ್ಯಾಚರಣೆ ನಡೆಸುತ್ತಿದ್ದು, ಅದರಲ್ಲಿ 4 ಕ್ವಾರಿಗಳು ಸ್ಫೋಟಕ ಚಟುವಟಿಕೆಗಳನ್ನು ನಡೆಸುತ್ತಿವೆ. ಉಳಿದ 8 ಘಟಕಗಳು ಯಾವುದೇ ರೀತಿಯ ಸ್ಫೋಟಕ ಚಟುವಟಿಕೆ ನಡೆಸುತ್ತಿಲ್ಲ ಎಂದು ವಿವರಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

SITES FOR SALE
30x40 (2 Sites)
Hemmanahalli 2nd Stage
60x40 (2 Sites)
Saptamatruka Layout
(Brokers Excuse)
9901080314

ಸಿಪಾಯಿ ಪ್ರಾಪರ್ಟೀಸ್
1) ಕಬೀರಾನಂದ ಸಾಗರ ಲೇಔಟ್‌ನಲ್ಲಿ ಈಸ್ಟ್ ಫೇಸ್ 30x40 ಅಳತೆಯ ಸೈಟ್ ಮಾರಾಟಕ್ಕಿದೆ. ಬೆಲೆ 25 ಲಕ್ಷ, ನೆಗೋಷಿಯೆಬಲ್
2) ಇಲವಾಲ ಬಸ್ ನಿಲ್ದಾಣ ಹಿಂಭಾಗದಲ್ಲಿರುವ ಬಸವಸಾಗರ ಫೇಸ್ 2ನೇ ಹಂತದಲ್ಲಿ 60 ಅಡಿ ರಸ್ತೆಯಲ್ಲಿ 40x60 ಅಳತೆಯ ಸೈಟ್‌ಗಳು ಮಾರಾಟಕ್ಕಿವೆ. ಬೆಲೆ 55 ಲಕ್ಷ ನೆಗೋಷಿಬಲ್
ನಂಜುಂಡಸ್ವಾಮಿ ಹೆಚ್.ಎಸ್. ಮಾಜಿ ಸೈನಿಕರು
9483862050

FLAT FOR SALE
2 BHK
Tulip Apartment
at Vijayanagar 2nd stage High Tenstion Road Mysore
9741535999

MUDA APPROVED SITES FOR SALE
Bogadi Road
suvarna layout attached
Sanvi layout (G9 Project)
30x40 & 30x43
Per sqft 1900/-
JK 895114420

S.K.CONSTRUCTION
ನಿಮ್ಮ ಕನಸು ನಮ್ಮ ನನಸು ಅತಿ ಉತ್ತಮ ಗುಣಮಟ್ಟದಲ್ಲಿ ನಿಮ್ಮ ಕೈಗೆಟುಕುವ ಬೆಲೆಯಲ್ಲಿ Plan-3D Elievation ಸಹಿತ ಉತ್ತಮ ಅನುಭವವುಳ್ಳ ಇಂಜಿನಿಯರ್ Cum ಕನ್‌ಸ್ಟ್ರಕ್ಷನ್ ಮಾಡಿ ಕೊಡುತ್ತೇವೆ.
9620528490

ಬೇಕಾಗಿದ್ದಾರೆ
ಕೊರಿಯರ್ಸ್ ಸಂಸ್ಥೆಯಲ್ಲಿ ಆಫೀಸ್ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ. ಎನ್.ಆರ್.ಮೊಹಲ್ಲಾ ಹಾಗೂ ಕೆ.ಆರ್.ಮೊಹಲ್ಲಾ ಶಾಖೆಗೆ ಬೇಕಾಗಿದ್ದಾರೆ. (ಕಂಪ್ಯೂಟರ್ ಜ್ಞಾನ ಹೊಂದಿರಬೇಕು) ಹಾಗೂ ಎನ್.ಆರ್.ಮೊಹಲ್ಲಾ ಮತ್ತು ಬೇರೆ ಶಾಖೆಗಳಿಗೆ ಡೆಲಿವರಿ ಬಾಯ್ಸ್ ಅಥವಾ Pick up ಬಾಯ್ಸ್ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ: ಬೆ.10.30 ರಿಂದ ಸಂಜೆ 5.30
9449871790

V-GUARD
10 ವರ್ಷಗಳ ವ್ಯಾರಂಟಿ
ದಸರಾ ಹಬ್ಬದ ಶುಭಾಶಯಗಳು
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಸೋಲಾರ್ ವಾಟರ್ ಹೀಟರ್
Solar Water Heater
ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

FOR SALE
1. 20x30, 30x40, Sites @ Bogadi. Duplex House @ 53L
2. 40x50 SE Crnr 2BHK 4 Houses Near ISKCON Temple
3. 30x40 House at Vijaya Nagar 4th Stage.
4. Commercial Properties @ Kuvempu Nagar, Saraswati Puram & More.
5. 20x30, Sites & House near Yelwala
30x40 Sites attached to Brahmins Lyt
PRAKRUTHI PROPERTIES
95386 90359, 90359 90359

MUDA APPROVED SITES FOR SALE
30x40
Near Infosys & BEML
Call Now @
88614 40528 / 97314 00249

ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಹಿನಕಲ್, ಕೆ.ಆರ್.ಎಸ್., ಮೇಟಗಳ್ಳಿ, ಶ್ರೀರಾಂಪುರ, ಜೆ.ಪಿ. ನಗರ, ಸಿದ್ಧಾರ್ಥ ಲೇಔಟ್, ನಂಜನಗೂಡು, ಮೈಸೂರಿನ ಸುತ್ತಮುತ್ತ. ವಿದ್ಯಾರ್ಹತೆ: SSLC Pass or Fail.
Mob: 9590909005, 9980755056, 9538886328

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

SITE FOR SALE
30X50 WEST FACING PRICE – 63 LAKHS
30X40 SITE – 51 LAKHS PLACE : NEAR INFOSYS
MUDA APPROVALS 90% LOAN AVAILABLE
Ph: 9538003006

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

Site Engineer Vacancy
Dip / BE (Civil)
Fresher / 1 yr. exp.
Mob: 8762567411

ಸುವರ್ಣ ಯಾತ್ರಾ
8 ದಿನಗಳ ಕಾಮಾಕ್ಯ ಪ್ರವಾಸ ಶಿಲಾಂಗ್ ಚಿರಾಪುಂಜಿ ಗುವಾಹಟಿ ಅಸ್ಸಾಂ 11/12/24, 7 ದಿನಗಳ ಕಾಶಿ ಪ್ರವಾಸ ಗಯ ಬಾಬಾ ಬೈದ್ಯನಾಥ್ ನೈಮಿಶರಣ್ಯ ಅಯೋಧ್ಯ ಪ್ರಯಾಗರಾಜ್ 12/12/2024
8660233673
8970949434

DIRECT 10TH / 12TH
IPUC Fail / SSLC Pass
Direct II PUC
(Science, Arts & Commerce)
6,7,8,9,10th Fail Direct SSLC Exams online
Valid For All Govt & Private Jobs
limited seats only
9986492001

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

SITE FOR SALE
30x40 site for sale in Koppaluru, near JP Nagar Ring Road 30x40 site for sale in Prakruthi Layout, Dadadahalli.
Mob: 9880344263

HOUSE FOR RENT
20x30, 2 BHK, 2nd Floor with solar at #199, 'M' Block, 2nd Stage, 9th Cross, Kuvempu-nagar, Mysore.
Mob: 9900565053

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9113601866

Dreams Enterprises, Mysore
* Passport assistance * White board spare driver * Placement service * All types of vehicle rental * Holiday packages * Star Health Insurance * Any real estate Enquire * Home Nursing service * Home loan * Personal loan * Vehicle loan * All types of Emergency services* (within 20kms) Applicable only for Groceries, medicines, food and fuel. *Service charge applicable*. For more details contact
9964297083, 7019320478

ಸೈಟು ಬೇಕಾಗಿದೆ
ವರುಣ, ವಾಜಮಂಗಲ ATME ಕಾಲೇಜು, ಬ್ಯಾಂಕರ್ಸ್ ಲೇಔಟ್, ಮಹಾಲಕ್ಷ್ಮೀ ಲೇಔಟ್ ಹಾಗೂ ಇತರೆ ಅಕ್ಕಪಕ್ಕದ ಬಡಾವಣೆಗಳಲ್ಲಿ ಟಿ. ನರಸೀಪುರ ರಸ್ತೆ, ಬನ್ನೂರು ರಸ್ತೆ.
Mob: 9686071750

Office / Commercial space for rent at J.P. Nagar, Mysuru.
Contact:
Mob: 9448208361

JOB OPENING FOR FEMALE (DAY SHIFT)
Paid intership work for Engineers & other Degree. Data Entry Operator. Salary upto 15,000. Location: Hebbal 1st Stage, Mysore.
Mob: 7338224174

ಕಡಿಮೆ ಬಂಡವಾಳದ ಸೈಟು ಮಾರಾಟಕ್ಕಿದೆ
30x30
DTCP Approved
ಯಶ್ ಮೆಗಾ ಸಿಟಿ
ಹುಣಸೂರು ಮುಖ್ಯ ರಸ್ತೆ
7338445412

ವಾಣಿಜ್ಯ ನಿವೇಶನ ಮಾರಾಟಕ್ಕಿದೆ
1) 45x60 ಉತ್ತರಮುಖ N ಬ್ಲಾಕ್ KSRTC ಡಿಪೋ ಹತ್ತಿರ ಆದಿ ಚುಂಚನಗಿರಿ ಮುಖ್ಯ ರಸ್ತೆ 80 ಅಡಿರಸ್ತೆ ಕುವೆಂಪುನಗರ, ಮೈಸೂರು ಸಿಟಿ
2) 50x80 ಅಡಿ ಪಶ್ಚಿಮ ಮುಖ KHB 5ನೇ ಫೇಸ್ ಆದಿಚುಂಚನಗಿರಿ 80 ಅಡಿ ಮುಖ್ಯ ರಸ್ತೆ, ಅಪೋಲೋ ಆಸ್ಪತ್ರೆ ಹತ್ತಿರ ಕುವೆಂಪುನಗರ ಮೈಸೂರು ಸಿಟಿ.
9448166798

MUDA APPROVED SITES FOR SALE
30x40, N facing, 30 Ft. Road.
30x40, S. facing 30 Ft. Road
30x52, N/E Corner, 30 Ft. Road.
T.S.K. Serenty Layout. Belavadi Village, Near Hunsur Main Road.
Mob: 9845525434

HOUSE FOR SALE
Newly built house for sale, 3 BHK, East facing, Alanahalli, Ring Road Junction, Mysuru. Contact:
Mob: 9986971822

HOUSE FOR SALE
Newly built house for sale 4 BHK, South West corner, KNS Ethos, Mysore.
Mob: 7760902091

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

SITE FOR SALE
30x50 East site for sale at Treasury Layout, Near Christ Public School (Attach Dattagalli).
Call: 9880273834

ಬೇಕಾಗಿದ್ದಾರೆ
ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 45
ಸಂಬಳ: 17000+ESI+PF=22000 ಒಳಗೊಂಡು Week Off ಹಾಗೂ 3 Shift ಗಳು ಇರುತ್ತದೆ.
ಹೆಚ್ಚಿನ ಮಾಹಿತಿಗಾಗಿ ಬೆಳಿಗ್ಗೆ 9 ಗಂಟೆಗೆ ಬಂದು ಸಂಪರ್ಕಿಸಿ
ಸ್ಥಳ: CIPET ಕಾಲೇಜ್ ಹತ್ತಿರ, ಮೇಟಗಳ್ಳಿ, ರಿಂಗ್ ರೋಡ್, ಮೈಸೂರು
9986874574

FOR NEWLY OPEN RESTAURANT IN MYSURU
WANTED
Manager -1,
Kitchen Supervisor-1,
Captain -4, Steward -5,
Cleaning-4,
Kichen Helpers-4
9449646645

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

SITES FOR SALE
30x40 measuring sites in Hale Kesare main road, adjacent to Army Layout from city only 6.5 kms. Bookings open. Contact:
Mob: 9535601201

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8861401315

SITE FOR SALE
30x40
SUVARNA NAGAR
(Gaddige Road, Bogadi)
Call: 9880273834

20x30 DUPLEX NEW HOUSE FOR SALE
3 BHK, Opp to St. Joseph's Central School, After Belavadi, Hunsur Road, Mysuru. Rs. 69 Lakhs.
*30*40 site KBL silicon City - Rs. 59 Lakh (East)*
MUDA APPROVED
Mob: 9986675044

ತಕ್ಷಣ ಬೇಕಾಗಿದ್ದಾರೆ/Wanted
Sri Sapthagiri Builders & Developers
1) Tele Caller-3
Basic Salary 10K + Incentive
Earn up to 15+
2) Marketing Executives-3
Basic Salary 14K + incentive
3) Driver-2
9980534544
9591828444, 9731667555

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ನಾರಾಯಣ ಹೃದಯಾಲಯ ಆಸ್ಪತ್ರೆಯಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡ್‌ಗಳು ಮತ್ತು ಜೆಎಸ್‌ಎಸ್ ಆಸ್ಪತ್ರೆಗೆ ಪುರುಷ/ಮಹಿಳಾ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ 9ನೇ ತರಗತಿ ಪಾಸ್ ಸಂಪರ್ಕಿಸಿ
9606824074
9481782571

Shops For Rent
Suitable for Hotel, Bar & Business, Shop Nos. 1 & 2, Ground Floor at Calinga Market, Behind Lansdown Building, Santhepet.
Mob: 8123124551

ಬೇಕಾಗಿದ್ದಾರೆ
MARUTHI SUZUKI ARENA AND TATA MOTORS CAR SHOWROOM ಗಳಿಗೆ ಮತ್ತು ಆಫೀಸ್ ಕೆಲಸದ ಉದ್ಯೋಗಗಳಿಗೆ ತಕ್ಷಣ ಯುವಕ ಯುವತಿಯರು ಬೇಕಾಗಿದ್ದಾರೆ ಯಾವುದೇ ಸಂದರ್ಶನ ಇರುವುದಿಲ್ಲ ಪ್ರಸಿದ್ಧ ಕಂಪನಿಗಳಲ್ಲಿ, ಅಕೌಂಟೆಂಟ್, ಡೇಟಾ ಆಪರೇಟರ್, ಟೆಲಿಕಾಲರ್, ಕ್ಯಾಶಿಯರ್, ಆಫೀಸ್ ಬಾಯ್, ಮತ್ತು ಮ್ಯಾನುಫ್ಯಾಕ್ಚರಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ, ಶಿಕ್ಷಣ 4ನೇ ತರಗತಿ ಇಂದ ಯಾವುದೇ ಪದವೀಧರರು, (*ಸಂಬಳ: 18000rs ಇಂದ 30000rs + ಇನ್ಸೆಂಟಿವ್ಸ್*) ಹೆಚ್ಚಿನ ಮಾಹಿತಿಗಾಗಿ ಇಂದೇ ಸಂಪರ್ಕಿಸಿ.
9535849148, 7411273440

Document Lost
I, Nadeem Ulla, No. 11, 2nd Cross, AG Block, N.R. Mohalla, Mysore-570 007, have lost allotment letter (Document No. / Identification: No. 11).
Finders please contact:
Mob: 9008888629

ಬೇಕಾಗಿದ್ದಾರೆ
ಮೈಸೂರಿನ ಟ್ರಾವೆಲ್ಸ್ ಕಂಪನಿಗೆ
ಕ್ಯಾಬ್ ಡ್ರೈವರ್ಸ್ ಬೇಕಾಗಿದ್ದಾರೆ
ಸಂಪರ್ಕಿಸಿ:
98806 86345

ಬೇಕಾಗಿದ್ದಾರೆ
ಪುರುಷ ಸಸ್ಯಹಾರಿ ಅಡುಗೆ ತಯಾರಕರು ESI, PF ಮತ್ತು ವಸತಿ ಸೌಲಭ್ಯವಿರುತ್ತದೆ. ವಿಕ್ರಂ ಕಾಲೇಜ್ ಆಫ್ ನರ್ಸಿಂಗ್, ಮೈಸೂರು
8310846772
9535096161

ಸೈಟುಗಳು ಮಾರಾಟಕ್ಕಿವೆ
20x30, 30x40
ಶ್ರೀರಾಂಪುರ ರಿಂಗ್ ರೋಡ್, ಮೈಸೂರು
9945321020

ಬೇಕಾಗಿದ್ದಾರೆ
ನವನಿಧಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ.,
ಹುದ್ದೆ : ಮುಖ್ಯ ಕಾರ್ಯನಿರ್ವಾಹಕರು
ಸ್ಥಳ: ನಂ.291/1, ಕಾಂಟೂರು ರಸ್ತೆ, 3ನೇ ಹಂತ, ತ್ರಿನೇತ್ರ ಸರ್ಕಲ್, ಗೋಕುಲಂ, ಮೈಸೂರು
ಖುದ್ದಾಗಿ ಸಂಪರ್ಕಿಸಿ:
9606976767

30x46 N/F ಸೊಸೈಟಿ ಸೈಟು ಮಾರಾಟಕ್ಕಿದೆ
28x40 S/W ಕಾರ್ನರ್ ಸೈಟು ಮಾರಾಟಕ್ಕಿದೆ.
GSS ಲೇಔಟ್, ತಳೂರು TVS ಫ್ಯಾಕ್ಟರಿ ಹತ್ತಿರ, ಮೈಸೂರು
9972557534

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು, ಯುವಕ/ಯುವತಿಯರು, ಮಹಿಳೆಯರು, ವಿಧವೆಯರು/ವಿಚ್ಛೇದಿತೆಯರು ಹೋಮ್ ನರ್ಸ್ ಕೆಲಸಕ್ಕೆ ಬೇಕಾಗಿದ್ದಾರೆ. ನಮ್ಮಲ್ಲೇ ಕಡ್ಡಾಯವಾಗಿ ಉಳಿದು ಕೊಳ್ಳುವರಿಗೆ ಮಾತ್ರ ಅವಕಾಶ. ಸಂಬಳ 15,000 ರಿಂದ 20,000ವರೆಗೆ ಉಚಿತ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ.
9591547239, 9632039123

ವೃದ್ಧಾಶ್ರಮ
ನಮ್ಮ ವೃದ್ಧಾಶ್ರಮದಲ್ಲಿ ಹಿರಿಯ ನಾಗರಿಕರು, ಹಾಸಿಗೆ ಹಿಡಿದವರು, ಪಾರ್ಶ್ವ ವಾಯು ಪೀಡಿತರು, ಮರೆಗುಳಿ ರೋಗಿಗಳನ್ನು, ಮಾರಣಾಂತಿಕ ಸ್ಥಿತಿಯಲ್ಲಿರುವ ರೋಗಿಗಳಿಗೆ ಪ್ರವೇಶವಕಾಶವಿರುತ್ತದೆ. ನಮ್ಮಲ್ಲಿ 24ಗಂಟೆಗಳ ನರ್ಸಿಂಗ್ ಸೇವೆ, ಹಾಗೂ ಮೂಲಭೂತ ವೈದ್ಯಕೀಯ ಸೇವೆ ಹಾಗೂ ಹೋಂ ನರ್ಸಿಂಗ್ ಸೇವೆ ಸಹ ಲಭ್ಯವಿದೆ
9591547239

ಮಾರುವವರು/ಕೊಳ್ಳುವವರು
20X30 ಡ್ಯೂಪ್ಲೆಕ್ಸ್ ಮನೆ 72 ಲಕ್ಷ, 3 ಬೆಡ್ ರೂಂ
ಸೈಟ್, ಮನೆ, ಹಳೆ ಮನೆ, ಹೊಸ ಮನೆ ಕೊಳ್ಳುವವರು ಮಾರುವವರು ಸಂಪರ್ಕಿಸಿ
9945042875

ಸದ್ಗುರು ಮ್ಯಾರೇಜಸ್
1) ಒಕ್ಕಲಿಗ BE MTech ವರನಿಗೆ ವಧುಬೇಕು
2) ಕುರುಬ BE MBA ವರನಿಗೆ ವಧುಬೇಕು
3) ಲಿಂಗಾಯತ MBBS MD ವರನಿಗೆ ವಧುಬೇಕು
4) ಬ್ರಾಹ್ಮಣ MBA ವರನಿಗೆ ವಧುಬೇಕು
5) ನಾಯಕ BE MBA ವರನಿಗೆ ವಧುಬೇಕು
6) ಕೂರ್ಗ ಸುಂದರ ಶ್ರೀಮಂತ ವಿಧವೆಗೆ ವರಬೇಕು ಜಾತಿ ಅಭ್ಯಂತರ ಇಲ್ಲ.
9448229184
7899625268

ತಕ್ಷಣ ಬೇಕಾಗಿದ್ದಾರೆ
ಅಪೋಲೊ ಆಸ್ಪತ್ರೆ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC & ಮೇಲ್ಪಟ್ಟು
ಸಂಬಳ: 20,000/-
ESI & PF ಊಟ ತಿಂಡಿ ಸೌಲಭ್ಯವಿರುತ್ತದೆ.
9620667819
9620777819

ಬೇಕಾಗಿದ್ದಾರೆ
ಹೋಟೆಲ್‌ನಲ್ಲಿ ಕೆಲಸ ಮಾಡಲು ಕಿಚನ್ ಕೌಂಟರ್ ಮತ್ತು ಸಪ್ಲೈಯರ್ಸ್ ಬೇಕಾಗಿದ್ದಾರೆ.
9986669892
6362610799

ಕೆಲಸಕ್ಕೆ ಬೇಕಾಗಿದ್ದಾರೆ ಸೆಕ್ಯೂರಿಟಿ ಗಾರ್ಡ್ (ಪುರುಷರು)
ಬಸ್ತಿಪುರ, ಇನ್ಫೋಸಿಸ್ ಹತ್ತಿರ, ಹೆಬ್ಬಾಳ ಇಂಡಸ್ಟ್ರಿಯಲ್ ಏರಿಯಾ, ದಟ್ಟಗಳ್ಳಿ, ಚಾಮುಂಡಿಬೆಟ್ಟ ಹತ್ತಿರ, ಜೆಸಿನಗರ, ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ, ಬೋಗಾದಿ ಹತ್ತಿರ ಕುವೆಂಪುನಗರ, ಒಂಟಿಕೊಪ್ಪಲ್
9606808975

ಸೈಟ್ ಪ್ರಾಪರ್ಟಿ ಮಾರಾಟಕ್ಕಿದೆ
40x65
ಸಾರ್ವಜನಿಕ ಹಾಸ್ಟೆಲ್ ರಸ್ತೆ ವಿದ್ಯಾರಣ್ಯಪುರಂ, ಮೈಸೂರು
9019494930

ಬಾಡಿಗೆಗೆ ದೊರೆಯುತ್ತದೆ
4000 sqft
ಬಿಲ್ಡಿಂಗ್ ಕಡಕೊಳ ಇಂಡಸ್ಟ್ರೀಯಲ್ ಏರಿಯಾ ಆಟೋಲೈವ್ ಹತ್ತಿರ
9448011470

ಸೈಟು ಮಾರಾಟಕ್ಕಿದೆ
(KBL ಬಡಾವಣೆಗೆ ಹೊಂದಿಕೊಂಡಂತಿರುವ) ಫಾರಂ–3 ಖಾತಾ ಹೊಂದಿರುವ ನಿವೇಶನ ನಂ.9, ದಿಕ್ಕು–ದಕ್ಷಿಣ, ಅಳತೆ 40x60 ಶ್ರೀ ದೇವೇಗೌಡ ಸರ್ಕಲ್ ಹತ್ತಿರ, ಮೈಸೂರು–ಬನ್ನೂರು ರಸ್ತೆ, ಮೈಸೂರು
9113991509
8123776343

ಕ್ರಿಶ್ಚಿಯನ್ ವರ ಬೇಕಾಗಿದೆ
ಕ್ರಿಶ್ಚಿಯನ್ ವಧುವಿನ ವಯಸ್ಸು, 24, SSLC ಕಲಿತಿರುವ/ವಯಸ್ಸು, 29, ಟೀಚರ್ ಉದ್ಯೋಗದಲ್ಲಿರುವ/ವಯಸ್ಸು, 32, ನರ್ಸ್ ಆಸ್ಪತ್ರೆಯಲ್ಲಿ ಉದ್ಯೋಗ/ವಯಸ್ಸು 35, PUC ಕಲಿತಿರುವ ವಧುವಿಗೆ ವರ ಬೇಕಾಗಿದೆ. ಕ್ರಿಶ್ಚಿಯನ್ ವಧು–ವರರಿಗಾಗಿ ಸಂಪರ್ಕಿಸಿ:
8792731562

SITES FOR SALE
30X40 (Two Sites)
Site # 156, 157,
KBL Layout
Mysore Bannur Road
Near Ring road,
Behind Petrol Bunk
9902679231

ಬೇಕಾಗಿದ್ದಾರೆ
ಬೆಂಗಳೂರಿನ ಪ್ರತಿಷ್ಠಿತ ಕಂಪನಿಗೆ ಸೇರಿದ ಮಂಡ್ಯ ಜಿಲ್ಲೆ ಕೆ.ಆರ್.ಎಸ್ ಹೊಸ ಕನ್ನಂಬಾಡಿ ಗ್ರಾಮದ ಹತ್ತಿರವಿರುವ ಶ್ರೀ ವೇಣುಗೋಪಾಲ ಸ್ವಾಮಿ ದೇವಸ್ಥಾನದ ಭದ್ರತೆಗಾಗಿ ನಿವೃತ್ತ Army / BSF /ERPF / EISF (ವಯಸ್ಸು 45ರ ಒಳಗೆ) ಅಭ್ಯರ್ಥಿಗಳು ಬೇಕಾಗಿದ್ದು, ಕಂಪನಿಗೆ ನೇರ ನೇಮಕಾತಿ ಮಾಡಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಗಾಗಿ ಬೆಳಗ್ಗೆ 11 ರಿಂದ ಸಂಜೆ 5 ರ ತನಕ ಸಂಪರ್ಕಿಸಿ
9449178814

ಸೆಕ್ಯೂರಿಟಿ ಗಾರ್ಡುಗಳು
1) ಗಾಯಿತ್ರಿಪುರಂ
2) ಹರ್ಷ ರಸ್ತೆ
3) ಹೂಟಗಳ್ಳಿ 4) ಕಡಕೊಳ
ಮೇಲ್ಕಂಡ ಸ್ಥಳಗಳಿಗೆ ಬೇಕಾಗಿದ್ದಾರೆ.
7204816261
9686422400

ಹೋಂ ನರ್ಸ್ ಬೇಕಾಗಿದ್ದಾರೆ
ವಯಸ್ಸಾದವರನ್ನು, ರೋಗಿಗಳನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಯುವಕ, ಯುವತಿಯರು ಮಹಿಳೆಯರು ಬೇಕಾಗಿದ್ದಾರೆ ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣ ಸಂಪರ್ಕಿಸಿ
9035113222

SITE FOR SALE
(30x40)
Manuganahally Mysore-Hunsur Highway 7KM From Mys Ring Road
Clear Document
15 Lacs
95388-39926

ಸುವರ್ಣಾವಕಾಶ
ಪ್ರಸಿದ್ಧ ಶೋರೂಮ್ ಮತ್ತು ಕಂಪನಿ & ವರ್ಕ್ ಫ್ರಮ್ ಹೋಂ ಕೆಲಸಕ್ಕೆ, ಯುವಕರು ಮತ್ತು ಯುವತಿಯರು, ತಕ್ಷಣ ಬೇಕಾಗಿದ್ದಾರೆ.
100% ಗ್ಯಾರಂಟಿ ಕೆಲಸ
7353049700
7795704282

ಹುಲಿ ಸೆರೆಗೆ ಒತ್ತಾಯಿಸಿ ರೈತರ ಪ್ರತಿಭಟನೆ

ಹುಲಿ ಸೆರೆ ಕಾರ್ಯಾಚರಣೆ ಪುನಾರಂಭದ ಭರವಸೆ ನೀಡಿದ ಆರ್‌ಎಫ್‌ಓ ಪೂಜಾ

ಹೆಚ್.ಡಿ.ಕೋಟೆ, ನ.22– ಹುಲಿ ಸೆರೆ ಹಿಡಿಯುವಂತೆ ಒತ್ತಾಯಿಸಿ ಪಟ್ಟಣದ ವಲಯ ಅರಣ್ಯ ಅಧಿಕಾರಿ ಕಚೇರಿ ಎದುರು ಶುಕ್ರವಾರ ರೈತರು ಪ್ರತಿಭಟನೆ ನಡೆಸಿದರು.

ಪಟ್ಟಣ ವ್ಯಾಪ್ತಿಯಲ್ಲಿ ಕಳೆದ ಮೂರ್‍ನಾಕು ತಿಂಗಳಿಂದ ಬೋಚಿಕಟ್ಟೆ, ಕೆ.ಜಿ.ಹುಂಡಿ, ಹೆಬ್ಬಾಳ, ಸ್ಟೇಡಿಯಂ ಬಡಾವಣೆ ಹಾಗೂ ಪಟ್ಟಣದ ಹೊರ ವಲಯದಲ್ಲಿ ಆಗಿಂದಾಗೆ ಹುಲಿ ಕಾಣಿಸಿಕೊಂಡು ಈ ಭಾಗದ ಜನರಲ್ಲಿ ಆತಂಕ ಮೂಡಿಸಿದೆ. ಆರ್‌ಎಫ್‌ಓ ಪೂಜಾ ಅವರು ಹುಲಿ ಸೆರೆ ಹಿಡಿಯಲು ನಿರ್ಲಕ್ಷ್ಯ ಮಾಡುತ್ತಿದ್ದಾರೆ ಎಂದು ಆರೋಪಿಸಿ ಶಾಂತಿಪುರ, ಬೋಚಿಕಟ್ಟೆ, ಕೆ.ಜಿ.ಹುಂಡಿ, ಟೈಗರ್ ಬ್ಲಾಕ್ ಸೇರಿದಂತೆ ಹಲವು ಗ್ರಾಮಗಳ ರೈತರು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ರೈತ ಲೋಕೇಶ್ ಮಾತನಾಡಿ, ಗುರುವಾರ ಬೆಳಗ್ಗೆ ಶಾಂತಿಪುರ ಗ್ರಾಮದ ಯುವಕ ರಘು ಅವರು ತಮ್ಮ ಜಮೀನಿನಲ್ಲಿ ಬಾಳೆ ಬೆಳೆಗೆ ನೀರು ಹಾಯಿಸಲು ಪೈಪ್‌ಗಳನ್ನು ಜೋಡಿಸುತ್ತಿದ್ದ ವೇಳೆ ಆತನ ಮೇಲೆ ಏಕಾಏಕಿ ಹುಲಿ ದಾಳಿ ನಡೆಸಿದೆ. ಈ ವೇಳೆ ರಘು ಚೀರಾಡಿದ್ದರಿಂದ ಹುಲಿ ಆತನನ್ನು ಬಿಟ್ಟು ಪರಾರಿಯಾಗಿದ್ದು, ರಘು ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅಲ್ಲದೇ ಇಂದು ಬೆಳಗ್ಗೆ ಹುಲಿ ನನ್ನ ಮೇಲೆ ದಾಳಿ ಮಾಡಿದ್ದು, ಅದೃಷ್ಟವಶಾತ್ ನಾನೂ ಪ್ರಾಣಾಪಾಯದಿಂದ ಪಾರಾಗಿದ್ದೇನೆ ಎಂದರು.

ಕಳೆದ 15 ದಿನಗಳ ಹಿಂದೆ ಹುಲಿ ಹೆಬ್ಬಾಳ, ಸ್ಟೇಡಿಯಂ ಬಡಾವಣೆ ಬಳಿಯ ನಾಗಮ್ಮ ಬಸವರಾಜು ಅವರ ಜಮೀನಿನಲ್ಲಿ ಕಾಣಿಸಿಕೊಂಡು ಜಮೀನು ನೋಡಿಕೊಳ್ಳುವ ಚಂದ್ರು ಅವರ ಮೇಲೆ ಏಕಾಏಕಿ ದಾಳಿ ಮಾಡಿತ್ತು. ಈ ವೇಳೆ ತಂತಬೇಲಿ ಅಡ್ಡ ಇದ್ದ ಕಾರಣ ಅವರು ಅಪಾಯದಿಂದ ಪಾರಾದರು. ಈ ವೇಳೆ ದಸರಾ ಆನೆಗಳಾದ ಮಹೇಂದ್ರ, ಭೀಮನೊಂದಿಗೆ ಅರಣ್ಯ ಇಲಾಖೆ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದರಾದರೂ, ಹುಲಿ ಚೆಳ್ಳೆಹಣ್ಣು ತಿನ್ನಿಸಿ ತಪ್ಪಿಸಿಕೊಂಡಿತ್ತು. ಈ ವೇಳೆ ಅರಣ್ಯ ಇಲಾಖೆ ಹುಲಿ ಸೆರೆ ಕಾರ್ಯಾಚರಣೆ ಸ್ಥಗಿತಗೊಳಿಸಿದರು ಎಂದರು.

ಇದೀಗ ಮತ್ತೆ ಕಳೆದ 2 ದಿನಗಳಿಂದ ಶಾಂತಿಪುರ ಸೇರಿದಂತೆ ಅಕ್ಕಪಕ್ಕದ ಗ್ರಾಮಗಳಲ್ಲಿ ಹುಲಿ ಕಾಣಿಸಿಕೊಂಡು ರೈತರ ಮೇಲೆ ದಾಳಿಗೆ ಮುಂದಾಗುತ್ತಿದೆ. ಹೀಗಾಗಿ ಮತ್ತೆ ಕಾರ್ಯಾಚರಣೆ ಆರಂಭಿಸಿ ಹುಲಿ ಸೆರೆಗೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ತಡವಾಗಿ ಪ್ರತಿಭಟನಾ ಸ್ಥಳಕ್ಕಾಗಮಿಸಿದ ಆರ್‌ಎಫ್‌ಓ ಪೂಜಾ ಅವರನ್ನು ಇದೇ ವೇಳೆ ರೈತರು ತರಾಟೆ ತೆಗೆದುಕೊಂಡರು. ನೀವು ಹುಲಿ ಸೆರೆ ಹಿಡಿಯುತ್ತೇವೆ ಎಂದು ಭರವಸೆ ನೀಡಿದರೆ ಮಾತ್ರ ನಾವು ಪ್ರತಿಭಟನೆ ಕೈಬಿಡುತ್ತೇವೆ. ಇಲ್ಲದಿದ್ದರೆ ಈ ಜಾಗ ಬಿಟ್ಟು ಕದಲುವುದಿಲ್ಲ ಎಂದು ಪಟ್ಟು ಹಿಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಆರ್‌ಎಫ್‌ಓ ಪೂಜಾ ಹುಲಿ ಸೆರೆ ಕಾರ್ಯಾಚರಣೆ ಆರಂಭಿಸುತ್ತೇವೆ ಎಂದು ಭರವಸೆ ನೀಡಿದ ಹಿನ್ನೆಲೆಯಲ್ಲಿ ರೈತರು ಪ್ರತಿಭಟನೆ ಹಿಂಪಡೆದರು.

ಪ್ರತಿಭಟನೆಯಲ್ಲಿ ಪುರಸಭಾ ಸದಸ್ಯರಾದ ರಾಜು, ಲೋಕೇಶ್, ರೈತ ಸಂಘದ ಉಪಾಧ್ಯಕ್ಷ ಮಹದೇವಯ್ಯ, ರೈತ ಮುಖಂಡರಾದ ನಾಗರಾಜು, ಚಾಕಳ್ಳಿ ಕೃಷ್ಣ, ಸಂತೋಷ್, ಸಾದಿಕ್, ಸಿಕಂದರ್, ಶಫಿ, ಕಲಂದರ್, ಅಬ್ದುಲ್ ರೆಹಮಾನ್, ದೊರೆರಾಜ್, ಚೆನ್ನನಾಯಕ, ಶಿವರಾಜು, ಭೈರನಾಯಕ, ಮಂಜು ನಾಯಕ, ಸಣ್ಣಸ್ವಾಮಿ, ಸುರೇಶ್, ರಾಜು, ಶಿವು, ಪ್ರವೀಣ, ಅಜರುದ್ದೀನ್, ಶಿವಮೂರ್ತಿ, ಸೀಗ ನಾಯಕ, ಅವಿನಾಶ್, ಆನಂದ, ಪ್ರತಾಪ್, ಶಿಮೂರ್ತಿ, ದೊರೆರಾಜು, ಗುರು, ಶಿವರಾಜು, ಭೈರಪ್ಪ ಇನ್ನಿತರರಿದ್ದರು.


ಹುಲಿ ಸೆರೆ ಹಿಡಿಯುವಂತೆ ರೈತರು ಪ್ರತಿಭಟನೆ ನಡೆಸಿದರು.

ಬೆಟ್ಟದಪುರದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ


ಬೆಟ್ಟದಪುರದಲ್ಲಿ ಕನ್ನಡ ರಾಜ್ಯೋತ್ಸವ ನಡೆಯಿತು.

ಬೆಟ್ಟದಪುರ, ನ.22– ಗ್ರಾಮದಲ್ಲಿ ಆಟೋ ಚಾಲಕರು ಹಾಗೂ ಮಾಲೀಕರ ಸಂಘದಿಂದ ಶುಕ್ರವಾರ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷ ರಾಜಶೇಖರ್ ಧ್ವಜಾರೋಹಣ ನೆರವೇರಿಸಿದರು. ಎಸ್‌ಐ ಶಿವಶಂಕರ್ ಕಾರ್ಯಕ್ರಮ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಎಸ್‌ಐ ಶಿವಶಂಕರ್, ನಾಡು ನುಡಿಗಾಗಿ ಹೆಮ್ಮೆಪಡುವ ಕನ್ನಡಿಗರ ಸಂತೋಷದ ಹಬ್ಬವಾಗಿ ಕನ್ನಡ ರಾಜ್ಯೋತ್ಸವವನ್ನು ಪ್ರತಿವರ್ಷ ಹೆಮ್ಮೆಯಿಂದ ಆಚರಿಸಬೇಕೆಂದು ತಿಳಿಸಿದರು

ಸಮಾಜ ಸೇವಕ ಗಗನ್ ಮಾತನಾಡಿ, ಪ್ರತಿಯೊಬ್ಬರೂ ಕನ್ನಡ ನಾಡು, ನುಡಿ ಬಗ್ಗೆ ಹೆಚ್ಚಿನ ಅಭಿಮಾನ ಹೊಂದುವ ಮೂಲಕ ಕನ್ನಡವನ್ನು ಉಳಿಸಿ ಬೆಳೆಸುವ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಯುವಕರು ರಕ್ತದಾನ ಮಾಡಿದರು. ಶಾಲಾ ಮಕ್ಕಳು ನಾಡ ಗೀತೆ ಹಾಡಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಸಂಘದಿಂದ ಅನ್ನದಾನ ಹಮ್ಮಿಕೊಳ್ಳಲಾಗಿತ್ತು. ಆಟೋ ಚಾಲಕರ ಸಂಘದ ಸಂತೋಷ್, ನಂಜುಂಡ, ಗಿರೀಶ್, ಮಾದೇಶ್, ಮಲ್ಲೇಶ್, ಶಿವು, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಪಟೇಲ್, ನಟೇಶ್, ರಾಜು, ರಕ್ತದಾನ ಬಳಗದ ಅಧ್ಯಕ್ಷ ಪ್ರಿಟಿಂಗ್ ಪ್ರೆಸ್ ಮಂಜುನಾಥ್, ಎಸ್.ಮಲ್ಲೇಶ್, ಸಾರ್ವಜನಿಕರು ಭಾಗವಹಿಸಿದ್ದರು.

ದೇವಾಲಯಗಳ ನಿರ್ಮಾಣ ಕಾರ್ಯಕ್ಕೆ ಸಹಕರಿಸಿ


ತಾಯೂರು ಪ್ರಕಾಶ್ ಮನವಿ

ತಿ.ನರಸೀಪುರ, ನ.22– ಗ್ರಾಮದಲ್ಲಿ ಕೋಟಿ ರೂ. ವೆಚ್ಚದಲ್ಲಿ ಶಿವಪಂಚಾಕ್ಷರಿ ಸ್ವಾಮಿಗಳ ಮೂಲ ಗದ್ದುಗೆ ಜೀರ್ಣೋದ್ಧಾರ ಹಾಗೂ ಮಹಾಗಣಪತಿ, ಮಂಚಮ್ಮ ದೇವಾಲಯಗಳ ನಿರ್ಮಾಣ ಕಾರ್ಯ ನಡೆಯುತ್ತಿದ್ದು, ಭಕ್ತರು ಕಟ್ಟಡ ಕಾಮಗಾರಿಗೆ ಸಾಮಾಗ್ರಿ ನೀಡುವ ಮೂಲಕ ಸತ್ಕಾರ್ಯಕ್ಕೆ ಸಹಕಾರ ನೀಡುವಂತೆ ರಾಜ್ಯ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ಮೈಸೂರು ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್ ಮನವಿ ಮಾಡಿದರು.

ತಾಯೂರು ಗ್ರಾಮದ ಶ್ರೀಶಿವಪಂಚಾಕ್ಷರಿ ಮಹಾಸ್ವಾಮಿ ಹಾಗೂ ಶಿವ ಶಕ್ತ್ಯಾತ್ಮಿಕೆ ಮಂಚಮ್ಮ ದೇವಿ ಸನ್ನಿಧಿಯ ಪಂಚಾಕ್ಷರಿ ಗವಿ ಮಠದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಪಂಚಾಕ್ಷರಿ ಗವಿಮಠದಲ್ಲಿ ಪಂಚಾಕ್ಷರಿ ಮಹಾಸ್ವಾಮಿಗಳು ಜೀವಂತ ಲಿಂಗೈಕ್ಯರಾಗಿದ್ದಾರೆ. ಶತಮಾನಗಳಷ್ಟು ಹಳೆಯ ಮಠದಲ್ಲಿ ನಿತ್ಯ ಪೂಜಾ ಕೈಂಕರ್ಯ ಹಾಗೂ ವಿಶೇಷ ಸಂದರ್ಭದಲ್ಲಿ ಭಕ್ತರಿಗೆ ದಾಸೋಹ ನಡೆಯುತ್ತದೆ. ಶ್ರೀಮಠವು ಚನ್ನಪಟ್ಟಣ ತಾಲೂಕು ಚಳ್ಳಕೆರೆ ಗ್ರಾಮದ ಒಕ್ಕಲಿಗ ಗೌಡ ಜನಾಂಗದವರನ್ನು ಶಿಷ್ಯ ವರ್ಗವಾಗಿ ಹೊಂದಿರುವುದು ವಿಶೇಷ ಎಂದರು.

ತಾಯೂರು, ಸುತ್ತಮುತ್ತಲಿನ ಗ್ರಾಮಗಳು ಹಾಗೂ ಚನ್ನಪಟ್ಟಣದ ಗೋವಿಂದನಹಳ್ಳಿ ಗ್ರಾಮ ಸೇರಿದಂತೆ 21 ಗ್ರಾಮಗಳ ಶಿಷ್ಯ ವರ್ಗ ಮಠಕ್ಕಿದೆ. ಬೆಳಕೆರೆ ಗ್ರಾಮದ ಮಂಚಮ್ಮ ದೇವಿ ದೇವಾಲಯಕ್ಕೆ ತಾಯೂರು ಮಠದ ಗುರುಗಳು ಗುರುಗಳಾಗಿದ್ದು, ಈಗ ಕೋಟಿ ರೂ. ವೆಚ್ಚದಲ್ಲಿ ಮೂಲಗದ್ದುಗೆ ಹಾಗೂ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯ ನಡೆಯಬೇಕಿರುವುದರಿಂದ ಭಕ್ತರು ಹೆಚ್ಚಿನ ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಈ ವೇಳೆ ಪಂಚಾಕ್ಷರಿ ಗುರು ಮಠದ ಉತ್ತರ ಮಠಾಧಿಪತಿ ಶ್ರೀನಂಜುಂಡಾರಾಧ್ಯ ಸ್ವಾಮೀಜಿ, ಬೆಳಕೆರೆ ಗ್ರಾಮದ ಜೆಡಿಎಸ್ ಮುಖಂಡ ಬಿ.ಎಂ.ಕುಮಾರ್, ಯಜಮಾನರಾದ ಗೋವಿಂದಹಳ್ಳಿ ಚಿಕ್ಕಣ್ಣ, ಯಜಮಾನ್ ಓದೇಶ್, ನಾಗೇಶ್, ಶಿವಪ್ಪ ನಾಗೇಂದ್ರ, ನಾಗಪ್ಪ ಹಾಗೂ ಮಲ್ಲಣ್ಣ, ಮಾದಪ್ಪ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.


ತಾಯೂರು ಪಂಚಾಕ್ಷರಿ ಗವಿ ಮಠದಲ್ಲಿ ತಾಯೂರು ಪ್ರಕಾಶ್ ಅವರನ್ನು ಸನ್ಮಾನಿಸಲಾಯಿತು.

ಎನ್‌ಎಸ್‌ಎಸ್‌ನಿಂದ ನಾಯಕತ್ವ ಗುಣ ಬೆಳವಣಿಗೆ

ಪ್ರಾಚಾರ್ಯ ರವೀಶ್ ಅಭಿಪ್ರಾಯ

ಬನ್ನೂರು, ನ.22– ರಾಷ್ಟ್ರೀಯ ಸೇವಾ ಯೋಜನೆ ವಿದ್ಯಾರ್ಥಿಗಳಲ್ಲಿ ಶಿಸ್ತು, ಸಮಯ ಪಾಲನೆ, ನಾಯಕತ್ವ ಗುಣಗಳನ್ನು ಬೆಳೆಸುತ್ತದೆ ಎಂದು ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ರವೀಶ್ ತಿಳಿಸಿದರು.

ಪಟ್ಟಣ ಸಮೀಪದ ಹನುಮನಾಳು ಗ್ರಾಮದಲ್ಲಿ ಶುಕ್ರವಾರ ಎನ್‌ಎಸ್‌ಎಸ್ ವಾರ್ಷಿಕ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಕಲಿಕಾ ಹಂತದಲ್ಲಿ ಇಂತಹ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಭಾಗವಹಿಸುವ ಮೂಲಕ ಸೇವಾ ಮನೋಭಾವ ಬೆಳಸಿಕೊಳ್ಳುವ ಜೊತೆಗೆ ದೇಶ ಕಟ್ಟುವ ಕೆಲಸದಲ್ಲಿ ತೊಡಗಿಕೊಳ್ಳುತ್ತಾರೆ ಎಂದರು.

ಕಾಲೇಜಿನ ಪ್ರಾಂಶುಪಾಲ ಗೂಳೇಗೌಡ ಮಾತನಾಡಿ, ಹನುಮನಾಳು ಗ್ರಾಮದಲ್ಲಿ ನಡೆದ ಶಿಬಿರದಲ್ಲಿ ವಿದ್ಯಾರ್ಥಿಗಳು ಬಹಳಷ್ಟು ವಿಚಾರಗಳನ್ನು ತಿಳಿದಿದ್ದು, ಗ್ರಾಮದ ಅಭಿವೃದ್ಧಿಗೆ ಯಾವ ಕ್ರಮ ತೆಗೆದುಕೊಳ್ಳಬೇಕು. ಹಳ್ಳಿ ಜೀವನ ಹೇಗಿರುತ್ತದೆ. ಪರಿಸರದ ಕಾಳಜಿ ಯಾವ ರೀತಿ ಮಾಡಬೇಕು. ಸ್ವಚ್ಛತೆಗೆ ಹೇಗೆ ಗಮನ ನೀಡಬೇಕು ಎನ್ನುವ ವಿಚಾರ ತಿಳಿದು ಗ್ರಾಮದ ಸೊಗಡನ್ನು ಕಂಡಿದ್ದಾರೆ. ಮುಂದಿನ ದಿನದಲ್ಲಿ ಇದು ಬದಲಾವಣೆಗೆ ನಾಂದಿ ಆಗಲಿದೆ ಎಂದರು.

ಗ್ರಾಪಂ, ಬೆಂಗಳೂರು ನಿಧಿ ಕೇಬಲ್ಸ್, ರೋಟರಿ ಸಂಸ್ಥೆಯಿಂದ ಶಿಬಿರಾರ್ಥಿಗಳಿಗೆ ನೆನಪಿನ ಕಾಣಿಕೆ ನೀಡಲಾಯಿತು. ರೋಟರಿ ಅಧ್ಯಕ್ಷ ವೆಂಕಟೇಶ್, ಶಿಬಿರಾಧಿಕಾರಿ ಧರಣೀಶ್, ಪುರಸಭಾಧ್ಯಕ್ಷ ಕೃಷ್ಣೇಗೌಡ, ಉಪಾಧ್ಯಕ್ಷೆ ನಾಗರತ್ನ, ಹನುಮನಾಳು ಗ್ರಾಪಂ ಅಧ್ಯಕ್ಷ ಸುರೇಶ್, ದೀಪಕ್, ನಂದೀಶ್, ಮಹದೇವು, ಮರೀಗೌಡ, ಪಿಡಿಓ ಸೌಮ್ಯಲತಾ ಸೇರಿದಂತೆ ಉಪನ್ಯಾಸಕ ವರ್ಗ, ಹಳೇ ವಿದ್ಯಾರ್ಥಿಗಳು, ಗ್ರಾಮಸ್ಥರು ಉಪಸ್ಥಿತರಿದ್ದರು.


ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಬಿ.ಸಿ.ನಂದೀಶ್, ಹನುಮನಾಳು ಗ್ರಾಮದ ಮರೀಗೌಡ, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಮಹದೇವು ಅವರನ್ನು ಸನ್ಮಾನಿಸಲಾಯಿತು.

ನೇಮಕ



ಹೆಚ್.ಡಿ.ಕೋಟೆ ನ.22– ಕಾಂಗ್ರೆಸ್ ಮೀನುಗಾರರ ಘಟಕದ ಜಿಲ್ಲಾ ಉಪಾಧ್ಯಕ್ಷರಾಗಿ ಗಂಗಡಹೊಸಳ್ಳಿ ಸಿದ್ದನಾಯಕ ಅವರು ನೇಮಕಗೊಂಡಿದ್ದಾರೆ.

ಕುಪ್ಯದಲ್ಲಿ ಸಂಜೆ ಟ್ಯೂಷನ್ ಉದ್ಘಾಟನೆ

ತಿ.ನರಸೀಪುರ, ನ.22– ತಾಲೂಕಿನ ಕುಪ್ಯ ಸರ್ಕಾರಿ ಪ್ರೌಢಶಾಲೆಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಹಯೋಗದೊಂದಿಗೆ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಸಂಜೆ ಟ್ಯೂಷನ್ ಕಾರ್ಯಕ್ರಮ ಉದ್ಘಾಟಿಸಲಾಯಿತು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ಉಮಾವತಿ ಮಾತನಾಡಿ, ವಿದ್ಯಾರ್ಥಿಗಳು ಉತ್ತಮ ವಿದ್ಯಾಭ್ಯಾಸ ಪಡೆದು, ಉನ್ನತ ಹುದ್ದೆಗಳನ್ನು ಪಡೆದರೆ ಅವರ ಕುಟುಂಬದ ಜೊತೆಗೆ ಹಳ್ಳಿಗಳು ಉದ್ಧಾರವಾಗುತ್ತವೆ. ನಮ್ಮ ಸಂಘ ಪ್ರತಿ ಗ್ರಾಮಗಳ ಉದ್ಧಾರಕ್ಕೆ ಬದ್ಧವಾಗಿದೆ ಎಂದರು.

ಮುಖ್ಯಶಿಕ್ಷಕಿ ಶಶಿಕಲಾ ಮಾತನಾಡಿ, ವಿದ್ಯಾರ್ಥಿಗಳು ಸಮಯ ಸದುಪಯೋಗಪಡಿಸಿಕೊಂಡು ಓದಿನತ್ತ ಗಮನ ಕೇಂದ್ರಿಕರಿಸಿ ಮನನ ಮಾಡಿಕೊಂಡರೆ ಯಾವುದು ಕಷ್ಟವಲ್ಲ. ಹಳ್ಳಿಯಿಂದ ಕಲಿತು ಹೋದವರು ಇಂದು ದೇಶದ ವಿವಿಧ ಉನ್ನತ ಹುದ್ದೆಗಳಲ್ಲಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ನಾಗರಾಜ್, ಪ್ರಮೀಳಾ, ಗವಿಸಿದ್ಧಯ್ಯ, ಗೋವಿಂದ, ಮುಖಂಡರಾದ ಬಸವರಾಜು, ಚೆನ್ನರಾಜು, ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕಿ ಮಮತಾಬಾಯಿ ಬೋಂಸ್ಲೆ, ಶಿಕ್ಷಕರಾದ ಜ್ಯೋತಿ, ರೂಪ, ಟ್ಯೂಷನ್ ಅಧ್ಯಾಪಕ ನವೀನ್ ಹಾಜರಿದ್ದರು.


ಕುಪ್ಯ ಸರ್ಕಾರಿ ಪ್ರೌಢಶಾಲೆಯಲ್ಲಿ ಸಂಜೆ ಟ್ಯೂಷನ್ ಉದ್ಘಾಟಿಸಲಾಯಿತು.

ಹುಣಸೂರಲ್ಲಿ ಗ್ರಂಥಾಲಯ ಸಪ್ತಾಹ


ಹುಣಸೂರು, ನ.22– ನಗರದ ಗ್ರಂಥಾಲಯದಲ್ಲಿ ಗ್ರಂಥಾಲಯ ಸಪ್ತಾಹ ಸಮಾರೋಪ ಸಮಾರಂಭ ನಡೆಯಿತು.

ಪೌರಾಯುಕ್ತೆ ಮಾನಸ ಮಾತನಾಡಿ, ಓದುವುದು ಹವ್ಯಾಸ ಆಗಬೇಕು. ಓದಿನಿಂದ ಜ್ಞಾನ ವೃದ್ಧಿಸುತ್ತದೆ ಎಂದರು. ಗ್ರಂಥಪಾಲಕ ಕರುಣಾಕರ ಮಾತನಾಡಿ, ಗ್ರಂಥಾಲಯಗಳಲ್ಲಿ ಮೂರು ವಿಧ. ಶೈಕ್ಷಣಿಕ, ಸಾರ್ವಜನಿಕ ಹಾಗೂ ಡಿಜಿಟಲ್ ಗ್ರಂಥಾಲಯ. ಇವುಗಳ ಬಳಕೆ ನಿಮ್ಮಲ್ಲಿ ಸಾಮರ್ಥ್ಯ ಹೆಚ್ಚಿಸುತ್ತದೆ ಎಂದರು.

ಪ್ರಭಾರ ಗ್ರಂಥಪಾಲಕ ಸತೀಶ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಜಾನಪದ ಗೀತೆ, ಭಾವಗೀತೆ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಗಣ್ಯರು ಬಹುಮಾನ ಮತ್ತು ಪ್ರಶಸ್ತಿ ಪತ್ರ ವಿತರಿಸಿದರು. ವಿವಿಧ ಸ್ಪರ್ಧೆಗಳಲ್ಲಿ ಪಾಲ್ಗೊಂಡ ಮಕ್ಕಳಿಗೆ ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಗ್ರಂಥಾಲಯದ ಸಿಬ್ಬಂದಿ ಭಾಮಿನಿ, ಸವಿತಾ ಹಾಗೂ ಓದುಗರು ಶ್ರಮಿಸಿದರು. ರಾಷ್ಟ್ರೀಯ ಹಬ್ಬಗಳ ಸಮಿತಿ ಅಧ್ಯಕ್ಷ ಎಸ್.ಜಯರಾಂ, ಕಸಾಪ ಅಧ್ಯಕ್ಷ ಮಹದೇವ್, ಅಕ್ಮಲ್ ಅಹಮದ್, ನಟರಾಜ್, ಸಂಪತ್ ಕುಮಾರ್, ಭೈರಪ್ಪ ಗೌಡ, ರಮೇಶ್ ಸೇರಿದಂತೆ ಇನ್ನಿತರರಿದ್ದರು.


ಹುಣಸೂರಿನ ಗ್ರಂಥಾಲಯದಲ್ಲಿ ಗ್ರಂಥಾಲಯ ಸಪ್ತಾಹ ಸಮಾರೋಪ ನಡೆಯಿತು.

ಶಾಸಕ ಜಿಟಿಡಿಗೆ ಸನ್ಮಾನ


ಮಲೆಯಋಷಿ ಕೋಣಪ್ಪಸ್ವಾಮಿ ದೇವಾಲಯಕ್ಕೆ ಆಗಮಿಸಿ ದೇವರ ದರ್ಶನ ಪಡೆದ ಶಾಸಕ ಜಿ.ಟಿ.ದೇವೇಗೌಡರನ್ನು ಪರಶಿವಮೂರ್ತಿ ಸ್ವಾಮೀಜಿ ಹಾಗೂ ಬರಡನಪುರ ಬಸವಣ್ಣ ಸನ್ಮಾನಿಸಿದರು.

ಅನಿಮಿಯಾ ಮುಕ್ತ ಪೌಷ್ಟಿಕ ಕರ್ನಾಟಕ ಕಾರ್ಯಾಗಾರ

ಪಿರಿಯಾಪಟ್ಟಣ, ನ.22– ಪಟ್ಟಣದ ತಾಪಂ ಸಭಾಂಗಣದಲ್ಲಿ ಪಂಚಾಯತ್ ರಾಜ್ ಇಲಾಖೆ, ಆರೋಗ್ಯ ಇಲಾಖೆ ಹಾಗೂ ಕರ್ನಾಟಕ ಹೆಲ್ತ್ ಪ್ರಮೋಷನ್ ಟ್ರಸ್ಟ್ ಮತ್ತು ಐಟಿಸಿ ಕಂಪನಿ ವತಿಯಿಂದ ನಡೆದ ಅನಿಮಿಯಾ ಮುಕ್ತ ಪೌಷ್ಟಿಕ ಕರ್ನಾಟಕದ ಬಗ್ಗೆ ಒಂದು ದಿನದ ಕಾರ್ಯಾಗಾರ ಆಯೋಜಿಸಲಾಯಿತು.

ತಾಲೂಕು ಆರೋಗ್ಯಾಧಿಕಾರಿ ಡಾ.ಶ್ರೀನಿವಾಸ್ ಅನಿಮಿಯಾ ರೋಗಲಕ್ಷಣಗಳು ಹಾಗೂ ರೋಗಿ ತೆಗೆದುಕೊಳ್ಳಬೇಕಾಗುವ ಮುಂಜಾಗ್ರತ ಕ್ರಮಗಳ ಬಗ್ಗೆ ತಿಳಿಸಿ ಸ್ವಾಸ್ಥ್ಯ ಸಮಾಜದ ನಿರ್ಮಾಣಕ್ಕೆ ಸಾರ್ವಜನಿಕ ಸಹಕಾರ ಅತ್ಯಗತ್ಯ ಎಂದರು.

ಸಂಪನ್ಮೂಲ ವ್ಯಕ್ತಿ ಡಾ.ಸುನೀಲ್ ಅವರು ಅನಿಮಿಯಾ ಬಗ್ಗೆ ಸಂಪೂರ್ಣ ಮಾಹಿತಿ ನೀಡಿ ಪೋಷಕರು ಮಕ್ಕಳಿಗೆ ಈ ರೋಗದ ಬಗ್ಗೆ ಅರಿವು ಮೂಡಿಸುವ ಜೊತೆಗೆ ರೋಗ ತಡೆಗಟ್ಟುವ ನಿಟ್ಟಿನಲ್ಲಿ ನಿಗಾ ವಹಿಸುವುದು ಅತ್ಯವಶ್ಯಕ ಎಂದರು.

ಕಾರ್ಯಕ್ರಮದಲ್ಲಿ ರಾಜ್ಯಮಟ್ಟದ ಸಂಯೋಜಕ ರಾಜೀವ್, ತಾಪಂ ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಧಿಕಾರಿಗಳು. ಸಮುದಾಯ ಆರೋಗ್ಯ ಅಧಿಕಾರಿಗಳು, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿಗಳು, ಅಂಗನವಾಡಿ ಮೇಲ್ವಿಚಾರಕರು ಸೇರಿದಂತೆ ಕರ್ನಾಟಕ ಹೆಲ್ತ್ ಪ್ರಮೋಷನ್ ಟ್ರಸ್ಟ್ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.


ಅನಿಮಿಯಾ ಮುಕ್ತ ಪೌಷ್ಟಿಕ ಕರ್ನಾಟಕದ ಕುರಿತು ಕಾರ್ಯಾಗಾರ ನಡೆಯಿತು.

ಗ್ರಾಪಂ ಸದಸ್ಯೆಗೆ ಪ್ರಮಾಣ ಪತ್ರ ವಿತರಣೆ


ಬೆಟ್ಟದಪುರದ ನೂತನ ಗ್ರಾಪಂ ಸದಸ್ಯೆ ರೋಜಾ ಅವರಿಗೆ ಚುನಾವಣಾಧಿಕಾರಿ, ಗ್ರಾಮೀಣ ಕುಡಿಯುವ ನೀರು ಯೋಜನೆ ಸಹಾಯಕ ನಿರ್ದೇಶಕ ಕೃಷ್ಣಮೂರ್ತಿ ಚುನಾಯಿತ ಪ್ರಮಾಣ ಪತ್ರ ವಿತರಿಸಿದರು. ಪಿಡಿಓ ಮಂಜುನಾಥ್, ಕಾರ್ಯದರ್ಶಿ ಪಾಂಡು ಇತರರಿದ್ದರು.

ಫೆ.8, 9ಕ್ಕೆ, ವಾಲ್ಮೀಕಿ ಜಾತ್ರಾ ಮಹೋತ್ಸವ

- ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಜಾತ್ರೆ ಯಶಸ್ವಿಗೊಳಿಸಿ
- ಜಾತ್ರೆ ಪೋಸ್ಟರ್ ಬಿಡುಗಡೆ ಮಾಡಿದ ಶ್ರೀಪ್ರಸನ್ನಾನಂದಪುರಿ ಸ್ವಾಮೀಜಿ


ನಂಜನಗೂಡಲ್ಲಿ ವಾಲ್ಮೀಕಿ ಜಾತ್ರಾ ಮಹೋತ್ಸವದ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ನಂಜನಗೂಡು, ನ.22– ಮುಂಬರುವ ಫೆ.8 ಮತ್ತು 9 ರಂದು ದಾವಣಗೆರೆಯ ರಾಜನಹಳ್ಳಿಯಲ್ಲಿ 7ನೇ ವರ್ಷದ ವಾಲ್ಮೀಕಿ ಜಾತ್ರಾ ಮಹೋತ್ಸವ ಜರುಗಲಿದ್ದು, ಸಮಾಜದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಜಾತ್ರಾ ಮಹೋತ್ಸವ ಯಶಸ್ವಿಗೊಳಿಸಬೇಕು ಎಂದು ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ ತಿಳಿಸಿದರು.

7ನೇ ವರ್ಷದ ವಾಲ್ಮೀಕಿ ಜಾತ್ರಾ ಮಹೋತ್ಸವ ಹಿನ್ನೆಲೆಯಲ್ಲಿ ನಗರದ ಗೌರಿಘಟ್ಟ ಬೀದಿಯಲ್ಲಿರುವ ನಾಯಕರ ಸಮದಾಯ ಭವನದಲ್ಲಿ ಜಾತ್ರಾ ಮಹೋತ್ಸವದ ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಜಾತ್ರಾ ಮಹೋತ್ಸವ ಅಂಗವಾಗಿ ರಾಜ್ಯಾದ್ಯಂತ ಪ್ರವಾಸ ಕೈಗೊಂಡಿದ್ದು ಇಂದು ನಂಜನಗೂಡಿಗೆ ಆಗಮಿಸಿ ಜಾತ್ರಾ ಮಹೋತ್ಸವಕ್ಕೆ ಆಹ್ವಾನ ನೀಡಲಾಗಿದೆ. ಜಾತ್ರೆಯಲ್ಲಿ ಜನಪ್ರತಿನಿಧಿಗಳು, ಹರಗುರು ಚರಮೂರ್ತಿಗಳು ಭಾಗಿಯಾಗಲಿದ್ದಾರೆ. ತಾಲೂಕಿನ ಎಲ್ಲಾ ಗ್ರಾಮದ ಸಮಾಜದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಜಾತ್ರಾ ಮಹೋತ್ಸವ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ನಮ್ಮ ಹೋರಾಟದ ಫಲವಾಗಿ ಮೀಸಲಾತಿ ಪ್ರಮಾಣ ಶೇ.4ರಿಂದ ಶೇ.7ಕ್ಕೆ ಹೆಚ್ಚಳವಾಗಿದೆ. ಆದ್ದರಿಂದ ಸಮುದಾಯದ ಬಂಧುಗಳು ಭಿನ್ನಾಭಿಪ್ರಾಯ ಮರೆತು ಒಗ್ಗಟ್ಟಾಗಿರಬೇಕು. ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ನಿಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು ಎಂದು ಕರೆ ನೀಡಿದರು.

ಈ ವೇಳೆ ತಾಲೂಕು ನಾಯಕರ ಸಂಘದ ಅಧ್ಯಕ್ಷ ಬಂಗಾರಸ್ವಾಮಿ, ಕಾರ್ಯದರ್ಶಿ ನಾಗೇಂದ್ರ ಖಜಾಂಚಿ ರಂಗಸ್ವಾಮಿ, ಕಾಂಗ್ರೆಸ್ ಎಸ್.ಟಿ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ಹೆಡತಲೆ ದೊರೆಸ್ವಾಮಿನಾಯಕ, ಮಂಜುನಾಥ್, ನಾಗರಾಜು, ರಮೇಶ್, ಅರುಣ್, ನಾಗೇಶ್, ಹನುಮಂತನಾಯಕ, ಸೇರಿದಂತೆ ಇತರರಿದ್ದರು.

ಸರಗೂರಲ್ಲೂ ವಾಲ್ಮೀಕಿ ಜಾತ್ರೆ ಪೂರ್ವಭಾವಿ ಸಭೆ


ಸರಗೂರಲ್ಲಿ ವಾಲ್ಮೀಕಿ ಜಾತ್ರಾ ಮಹೋತ್ಸವದ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಸರಗೂರು, ನ.22– ರಾಜನಹಳ್ಳಿ ಗುರುಪೀಠದಲ್ಲಿ 2025ರ ಫೆ.8 ಮತ್ತು 9ರಂದು ನಡೆಯುವ ವಾಲ್ಮೀಕಿ ಜಾತ್ರೆಗೆ ತಾಲೂಕಿನ ನಾಯಕ ಸಮುದಾಯದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ರಾಜನಹಳ್ಳಿ ಗುರುಪೀಠದ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಆಹ್ವಾನಿಸಿದರು.

ಪಟ್ಟಣದ ನಾಯಕ ಸಮುದಾಯ ಭವನದಲ್ಲಿ ನಡೆದ ಮಹರ್ಷಿ ವಾಲ್ಮೀಕಿ ಜಾತ್ರೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ವಾಲ್ಮೀಕಿ ಜಾತ್ರೆ ಹಾಗೂ ಶ್ರೀಮಠದ 27ನೇ ವಾರ್ಷಿಕೋತ್ಸವ, ಲಿಂಗೈಕ್ಯ ಶ್ರೀಪುಣ್ಯಾನಂದ ಸ್ವಾಮೀಜಿ ಅವರ 18ನೇ ಪುಣ್ಯಾರಾಧನೆ, ಶ್ರೀಮಠದ ಪ್ರಸನ್ನಾನಂದ ಸ್ವಾಮೀಜಿಯವರ 17ನೇ ವರ್ಷದ ಪಟ್ಟಾಧಿಕಾರ ಮಹೋತ್ಸವ ಮತ್ತು ಮಹಾರಥೋತ್ಸವ ನಡೆಯಲಿದ್ದು, ಸಮುದಾಯದ ಬಂಧುಗಳು ಆಗಮಿಸಿ ಜಾತ್ರೆ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಪ್ರಸನ್ನಾನಂದ ಸ್ವಾಮೀಜಿ ಅವರನ್ನು ಅಭಿನಂದಿಸಲಾಯಿತು. ಈ ಸಂದರ್ಭ ಕೋಟೆ ತಾಲೂಕು ನಾಯಕ ಸಮಾಜದ ಅಧ್ಯಕ್ಷ ದೊಡ್ಡನಾಯಕ, ಮುಖಂಡರಾದ ಜಯಪ್ರಕಾಶ್ ಮಾತನಾಡಿದರು. ಸರಗೂರು ನಾಯಕ ಸಮಾಜದ ಯಜಮಾನ ಬೆಟ್ಟನಾಯಕ, ನವೀನ್, ವೆಂಕಟೇಶ್ ನಾಯಕ, ತಾಲೂಕು ನಾಯಕ ಸಂಘದ ಅಧ್ಯಕ್ಷ ಬಸವರಾಜು, ಉಪಾಧ್ಯಕ್ಷ ಶ್ರೀನಿವಾಸ್, ಗೌರವಾಧ್ಯಕ್ಷ ಬಸವನಾಯಕ, ಖಜಾಂಚಿ ಎಸ್.ಎ.ನಾಗೇಂದ್ರ ಕಾರ್ಯದರ್ಶಿ ಸಿದ್ದರಾಜು, ರತ್ನಾಕರ ವಾಲ್ಮೀಕಿ ಸಂಘದ ಅಧ್ಯಕ್ಷ ವೆಂಕಟಚಲ ನಾಯಕ, ಖಜಾಂಚಿ ಎಂ.ರವಿಕುಮಾರ್, ಕನ್ನಡ ರಾಜೋತ್ಸವ ಪ್ರಶಸ್ತಿ ಪುರಸ್ಕೃತ ಪಿ.ಜವರನಾಯ, ಹಿರಿಯ ಮುಖಂಡರಾದ ರಂಗಪ್ಪಣ್ಣ ಸಿ.ಬಸವರಾಜು, ಚನ್ನಪ್ಪನಾಯಕ, ವಾಹನ ಚಾಲಕರ ಸಂಘದ ಗೌರವಾಧ್ಯಕ್ಷ ಎಸ್.ಹೆಚ್.ಲಿಂಗರಾಜು, ವೈಕುಂಠ ನಾಯಕ, ಶೇಷ, ಗುರು, ಚನ್ನಪ್ಪ, ಸಿದ್ದಪ್ಪ, ಸೋಮನಾಯಕ, ತಿಮ್ಮನಾಯಕ, ಮಂಜು ಇತರರಿದ್ದರು.

ನ.25ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ನ.22– ನಿರ್ವಹಣಾ ಕಾಮಗಾರಿ ನಿಮಿತ್ತ ನ.25 ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಬಂಡಿಪಾಳ್ಯ, ಹೊಸಹುಂಡಿ, ಏಳಿಗೆಹುಂಡಿ, ಗುಡು ಮಾದನಹಳ್ಳಿ, ಹಡಜನ ಗ್ರಾಮ, APMC, ಪ್ರಶಾಂತ್ ಛಾಯ ಲೇಔಟ್, ಹಾಲನಹಳ್ಳಿ ರಿಂಗ್ ರಸ್ತೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಪುಟ್ಟರಾಜು ನಿಧನ



ಹೆಚ್.ಡಿ.ಕೋಟೆ, ನ.22– ತಾಲೂಕಿನ ಕೆ.ಜಿ.ಹುಂಡಿ ಗ್ರಾಮದ ನಿವಾಸಿ ಲಾರಿ ಪುಟ್ಟರಾಜು(40) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಬೋಚಿಕಟ್ಟೆ ಗ್ರಾಮದ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬ ವರ್ಗ ತಿಳಿಸಿದೆ.

ನಮ್ಮ ಭೂಮಿ, ನಮ್ಮ ಹಕ್ಕಿಗಾಗಿ ಬಿಜೆಪಿ ಹೋರಾಟ

ರಾಜ್ಯ ಸರ್ಕಾರದ ವಕ್ಫ್ ನೀತಿ ವಿರೋಧಿಸಿ ಮೈಸೂರು ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ



ರಾಜ್ಯ ಸರ್ಕಾರದ ವಕ್ಫ್ ನೀತಿ ವಿರೋಧಿಸಿ ಮೈಸೂರಿನ ಸಿದ್ಧಾರ್ಥ ನಗರದ ಜಿಲ್ಲಾಧಿಕಾರಿ ಕಚೇರಿ ಬಳಿ ಬಿಜೆಪಿ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದರು.

ಮೈಸೂರು, ನ.22(ಬಿಎಲ್‌ಯು)– ರಾಜ್ಯ ಸರ್ಕಾರದ ವಕ್ಫ್ ನೀತಿ ವಿರುದ್ಧ ಮೈಸೂರು ಜಿಲ್ಲಾಧಿಕಾರಿ ಕಚೇರಿ ಬಳಿ ಇಂದು ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ನಮ್ಮ ಭೂಮಿ, ನಮ್ಮ ಹಕ್ಕು ಎಂಬ ಘೋಷ ವಾಕ್ಯದೊಂದಿಗೆ ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತರು, ವಕ್ಫ್ ಹೆಸರಿನಲ್ಲಿ ರೈತರ ಜಮೀನು ಕಬಳಿಸಲು ಯತ್ನಿಸುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸಿದ್ಧಾರ್ಥ ನಗರದ ಹೊಸ ಜಿಲ್ಲಾಧಿಕಾರಿ ಕಚೇರಿ ಪಕ್ಕದ ಪೆಂಡಾಲ್‌ನಲ್ಲಿ ಬೆಳಿಗ್ಗೆಯಿಂದ ಸಂಜೆ ತನಕ ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತರು, ರಾಜ್ಯ ಕಾಂಗ್ರೆಸ್ ಸರ್ಕಾರದ ಅಲ್ಪ ಸಂಖ್ಯಾತರ ತುಷ್ಟೀಕರಣ ಹಾಗೂ ಮತ ರಾಜಕಾರಣದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ವಕ್ಫ್ ಹೆಸರಿನಲ್ಲಿ ರೈತರ ಆಸ್ತಿ ಕಬಳಿಕೆಗೆ ಕಾರಣರಾಗಿರುವ ಮುಡಾ ಹಾಗೂ ವಾಲ್ಮೀಕಿ ಹಗರಣದ ಆರೋಪಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡಲೇ ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಬೇಕು ಎಂದು ಇದೇ ವೇಳೆ ಆಗ್ರಹಿಸಿದರು.

ಇನ್ನು ಮುಂದೆ ಯಾವುದೇ ವಕ್ಫ್ ಆದಾಲತ್ ನಡೆಸದಂತೆ ಸರ್ಕಾರ ಆದೇಶ ಹೊರಡಿಸಬೇಕು, ಇದಕ್ಕೆ ಸಂಬಂಧಿಸಿದಂತೆ ಗೆಜೆಟ್ ನೋಟಿಫಿಕೇಷನ್ ರದ್ದು ಮಾಡಬೇಕು. ಕೇಂದ್ರ ಸರ್ಕಾರ ತರುತ್ತಿರುವ ವಕ್ಫ್ ತಿದ್ದುಪಡಿ ಕಾಯ್ದೆ ಅನುಮೋದಿಸಿ ರಾಜ್ಯ ಸರ್ಕಾರ ಮುಂದಿನ ಅಧಿವೇಶನದಲ್ಲಿ ಒಮ್ಮತದಿಂದ ನಿರ್ಣಯ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ರೈತರ ಜಮೀನು ಕಬಳಿಸುತ್ತಿರುವ ವಕ್ಫ್ ಗೂಂಡಾಗಿರಿಗೆ ಧಿಕ್ಕಾರ, ಸಿಂದಗಿ ವಿರಕ್ತ ಮಠದ ಭೂಮಿ ನುಂಗಿದ ವಕ್ಫ್‌ಗೆ ಧಿಕ್ಕಾರ, ಅಲ್ಪ ಸಂಖ್ಯಾತರ ಓಲೈಕೆಗಾಗಿ ರೈತರ ಬದುಕಿಗೆ ಕೊಳ್ಳಿ ಇಟ್ಟ ಸಿದ್ದರಾಮಯ್ಯಗೆ ಧಿಕ್ಕಾರ, ಮಠ ಮಂದಿರದ ಜಾಗಕ್ಕೂ ಬೇಲಿ ಹಾಕಿದ ವಕ್ಫ್ ಬೋರ್ಡ್‌ಗೆ ಧಿಕ್ಕಾರ ಘೋಷಣೆಗಳನ್ನು ಕೂಗಿದರು.

ಈ ಸಂದರ್ಭದಲ್ಲಿ ಶಾಸಕ ಟಿ.ಎಸ್. ಶ್ರೀವತ್ಸ, ವಕ್ಫ್ ವಿವಾದದ ಬಗ್ಗೆ ವಿಡಂಬನಾತ್ಮಕ ಹಾಡು ಹಾಡಿ ರಂಜಿಸಿದರು.

ನಮ್ಮ ಬೇಡಿಕೆಗಳನ್ನು ಕೂಡಲೇ ಈಡೇರಿಸದಿದ್ದರೆ ತೀವ್ರ ರೀತಿಯ ಹೋರಾಟ ಮಾಡಬೇಕಾಗುತ್ತದೆ ಎಂದು ಪ್ರತಿಭಟನಾಕಾರರು ಈ ಸಂದರ್ಭದಲ್ಲಿ ಎಚ್ಚರಿಸಿದರು.

ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ಆರ್.ರಘು ಕೌಟಿಲ್ಯ, ಅಲ್ಪ ಸಂಖ್ಯಾತ ಮೋರ್ಚಾ ರಾಜ್ಯಾಧ್ಯಕ್ಷ ಡಾ.ಅನಿಲ್ ಥಾಮಸ್, ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್ ಗೌಡ, ಓಬಿಸಿ ಮೋರ್ಚಾ ನಗರಾಧ್ಯಕ್ಷ ಜೋಗಿ ಮಂಜು ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಬಿಜೆಪಿಯಲ್ಲಿ ಇರುವುದು ಒಂದೇ ಬಣ; ಅದು ಕೇಸರಿ ಬಣ

ಬಿಜೆಪಿಯಲ್ಲಿರುವುದು ಒಂದೇ ಬಣ; ಅದು ಕೇಸರಿ ಬಣ ಎಂದು ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ಆರ್.ರಘು ಕೌಟಿಲ್ಯ ಸ್ಪಷ್ಟಪಡಿಸಿದರು.

ಪ್ರಧಾನಿ ನರೇಂದ್ರ ಮೋದಿ ದೇಶದ ಏಕೈಕ ಸಿಂಹವಾದರೆ, ರಾಜಾಹುಲಿ ಯಡಿಯೂರಪ್ಪ ಕರ್ನಾಟಕದ ಏಕೈಕ ಹುಲಿ ಎಂದು ಪ್ರತಿಪಾದಿಸಿದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ ಬಿಜೆಪಿಯಲ್ಲಿ ಯಾವ ಬಣವೂ ಇಲ್ಲ. ಇರುವುದೊಂದೆ ಕೇಸರಿ ಬಣ ಎಂದು ಹೇಳಿದರು.

ವಕ್ಫ್ ತಿದ್ದುಪಡಿ ವಿರೋಧಿಸಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ನೇತೃತ್ವದ ಬಣದ ಹೋರಾಟಕ್ಕೆ ತಿರುಗೇಟು ನೀಡಿದ ರಘು ಕೌಟಿಲ್ಯ, ಕರ್ನಾಟಕದಲ್ಲಿ ಯಾವುದೇ ಬಣ ರಾಜಕೀಯ ನಡೆಯುವುದಿಲ್ಲ ಎಂದು ಎಚ್ಚರಿಸಿದರು.

ಮುಡಾ ಹಗರಣದಲ್ಲಿ ಕಾನೂನು ಕುಣಿಕೆ ಬಿಗಿಯಾಗಿರುವ ಕಾರಣ ರಾಜ್ಯದ ಜನರ ಗಮನ ಬೇರೆಡೆ ಸೆಳೆಯಲು ತಮ್ಮ ಬಲಗೈ ಭಂಟ ಜಮೀರ್ ಅಹಮ್ಮದ್ ಮೂಲಕ ವಕ್ಫ್ ಆಸ್ತಿ ಕಬಳಿಸಲು ಸಿದ್ದರಾಮಯ್ಯ ಕುತಂತ್ರ ರೂಪಿಸಿದ್ದಾರೆ. ಒಂದು ಧರ್ಮದ ಜನರ ಓಲೈಕೆಗಾಗಿ ಬಹು ಸಂಖ್ಯಾತರ ಹಿತಾಸಕ್ತಿ ಬಲಿ ಕೊಡುತ್ತಿದ್ದಾರೆ ಎಂದು ಆರೋಪಿಸಿದರು.

ಕೇಂದ್ರ ಸರ್ಕಾರದ ವಕ್ಫ್ ತಿದ್ದುಪಡಿಯೊಂದೆ ಈ ಎಲ್ಲಾ ಸಮಸ್ಯೆ ಪರಿಹಾರಕ್ಕೆ ಮಾರ್ಗೋಪಾಯವಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಕೂಡ ಕೇಂದ್ರ ಸರ್ಕಾರದ ವಕ್ಫ್ ತಿದ್ದುಪಡಿ ಒಪ್ಪಬೇಕು ಎಂದು ರಘು ಕೌಟಿಲ್ಯ ಆಗ್ರಹಿಸಿದರು.

ಬಿಪಿಎಲ್ ಕಾರ್ಡ್ ರದ್ದು ವಿರೋಧಿಸಿ ಪ್ರತಿಭಟನೆ



ಮೈಸೂರು, ನ22(ಬಿಎಲ್‌ಯು)– ಬಿಪಿಎಲ್ ಕಾರ್ಡ್ ರದ್ದು ಮಾಡಿರುವ ರಾಜ್ಯ ಸರ್ಕಾರದ ಕ್ರಮ ವಿರೋಧಿಸಿ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು ನಗರದಲ್ಲಿ ಇಂದು ಪ್ರತಿಭಟನೆ ನಡೆಸಿದರು.

ನಗರದ ಹಳೇ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು, ಬಿಪಿಎಲ್ ಕಾರ್ಡ್ ರದ್ದು ಮಾಡಿ ಬಡವರಿಗೆ ಅನ್ಯಾಯ ಎಸಗುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ರದ್ದು ಮಾಡಿರುವ ಬಿಪಿಎಲ್ ಕಾರ್ಡ್‌ಗಳನ್ನು ಮತ್ತೆ ಸಕ್ರಿಯಗೊಳಿಸಬೇಕು. ಬಡವರ ವಿರೋಧಿಯಾದ ಇಂತಹ ಯಾವುದೇ ಕ್ರಮ ಕೈಗೊಳ್ಳಬಾರದು ಎಂದು ಸರ್ಕಾರಕ್ಕೆ ಎಚ್ಚರಿಸಿದರು.

ಕರ್ನಾಟಕ ಸೇನಾ ಪಡೆ ಅಧ್ಯಕ್ಷ ತೇಜಸ್ ಗೌಡ, ಉಪಾಧ್ಯಕ್ಷ ಸಿ.ಎಸ್. ಕೃಷ್ಣಪ್ಪ, ಎಂ.ಬಿ.ಪ್ರಭುಶಂಕರ್, ಖಜಾಂಚಿ ಹನುಮಂತಯ್ಯ ಸೇರಿದಂತೆ ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಅಂಗವಿಕಲರಿಗೆ ತ್ರಿಚಕ್ರ ವಾಹನಗಳ ಹಸ್ತಾಂತರ



ಮೈಸೂರು ಮಹಾನಗರ ಪಾಲಿಕೆಯ ಬಡತನ ನಿರ್ಮೂಲನಾ ಯೋಜನೆಯಡಿ ವಿಶೇಷ ಚೇತನರಿಗೆ ಶಾಸಕ ಕೆ.ಹರೀಶ್‌ಗೌಡ ಜಲದರ್ಶಿನಿ ಅತಿಥಿ ಗೃಹದ ಆವರಣದಲ್ಲಿರುವ ತಮ್ಮ ಕಚೇರಿ ಮುಂಭಾಗ 18 ಮಂದಿ ವಿಶೇಷ ಚೇತನರಿಗೆ ತ್ರಿಚಕ್ರ ವಾಹನಗಳನ್ನು ಹಸ್ತಾಂತರಿಸಿದರು.

ಆಪತ್ಕಾಲದಲ್ಲಿ ಜನರ ರಕ್ಷಕರೇ ಅಪಾಯದಲ್ಲಿ!

● ಕುಸಿದು ಬೀಳುವ ಸ್ಥಿತಿಯಲ್ಲಿರುವ ಅಗ್ನಿಶಾಮಕ ದಳದ ಕಟ್ಟಡದಲ್ಲಿ ಜೀವ ಕೈಯ್ಯಲ್ಲಿಡಿದು ಕಾರ್ಯ ನಿರ್ವಹಿಸುತ್ತಿರುವ ಅಗ್ನಿಶಾಮಕ ಸಿಬ್ಬಂದಿ ● ಘಟಾನುಘಟಿ ನಾಯಕರು, ಪಾರಂಪರಿಕ ತಜ್ಞರಿಂದ ಬರೀ ಸ್ಥಳ ಪರಿಶೀಲನೆ ಶಾಸ್ತ್ರ; ಇನ್ನೂ ದುರಸ್ತಿ ಕಾಣದ ಕಟ್ಟಡ



2019ರ ಆಗಸ್ಟ್‌ನಲ್ಲಿ ಸುರಿದ ಮಳೆಗೆ ಸರಸ್ವತಿಪುರಂನಲ್ಲಿರುವ ಅಗ್ನಿಶಾಮಕ ದಳ ಠಾಣೆಯ ಮುಂಭಾಗದ ಕಮಾನು ಕುಸಿದ ಚಿತ್ರ



ಮೈಸೂರಿನ ಸರಸ್ವತಿಪುರಂನಲ್ಲಿರುವ ಅಗ್ನಿಶಾಮಕ ದಳ ಠಾಣೆಗೆ ಸಂಸದ ಯದುವೀರ್ ಕೃಷ್ಣದತ್ತಚಾಮರಾಜ ಒಡೆಯರ್ ಹಾಗೂ ಪಾರಂಪರಿಕ ತಜ್ಞರ ಸಮಿತಿ ತಂಡವು ಇತ್ತೀಚೆಗೆ ಭೇಟಿ ನೀಡಿ ಕಟ್ಟಡ ಪರಿಶೀಲನೆ ನಡೆಸಿತು.

● ಗಣೇಶ್.ಎ

ಮೈಸೂರು, ನ.22–ಬೆಂಕಿ ಅನಾಹುತ ಸೇರಿದಂತೆ ಹಲವಾರು ಅವಘಡಗಳಿಂದ ಸಾರ್ವಜನಿಕರ ಜೀವಗಳನ್ನು ರಕ್ಷಿಸುವ ಅಗ್ನಿಶಾಮಕ ದಳದ ಸಿಬ್ಬಂದಿ ಜೀವ ಕೈಯ್ಯಲ್ಲಿ ಹಿಡಿದು ಕಾರ್ಯ ನಿರ್ವಹಿಸುವ ಸ್ಥಿತಿ ನಿರ್ಮಾಣವಾಗಿದೆ.

ಜನಪ್ರತಿನಿಧಿಗಳ ಬದ್ಧತೆಯ ಕೊರತೆ ಮತ್ತು ಪಾರಂಪರಿಕ ತಜ್ಞರ ಪ್ರತಿಷ್ಠೆಯಿಂದ ಇಂತಹ ಸ್ಥಿತಿ ನಿರ್ಮಾಣವಾಗಿದ್ದು, ಮೈಸೂರಲ್ಲಿ ಕುಸಿದು ಬೀಳುವ ಸ್ಥಿತಿಯಲ್ಲಿರುವ ಅಗ್ನಿಶಾಮಕ ದಳದ ಕಟ್ಟಡದಲ್ಲಿ ಸಿಬ್ಬಂದಿ ಕೆಲಸ ಮಾಡುವಂತಾಗಿದೆ.

ಮೈಸೂರಿನ ಸರಸ್ವತಿ ಪುರಂನಲ್ಲಿರುವ 120 ವರ್ಷಗಳಷ್ಟು ಹಳೆಯದಾದ ಅಗ್ನಿಶಾಮಕ ದಳದ ಕಟ್ಟಡದ ಮುಂಭಾಗ ಮತ್ತು ಕಮಾನುಗಳು 2019ರ ಆಗಸ್ಟ್ ತಿಂಗಳಿನಲ್ಲಿ ಸುರಿದ ಮಳೆಗೆ ಕುಸಿದು ಬಿದ್ದಿದೆ. ಅಂದಿನಿಂದ ಇಲ್ಲಿಯವರೆಗೂ ಎಲ್ಲಾ ಘಟಾನುಘಟಿ ಜನಪ್ರತಿನಿಧಿಗಳು ಮತ್ತು ಪಾರಂಪರಿಕ ತಜ್ಞರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ಮಾಡುವುದರಲ್ಲಿಯೇ ಕಾಲ ಕಳೆದಿದ್ದಾರೆ ಹೊರತು ಯಾರು ಸಹ ಇದಕ್ಕೆ ಸೂಕ್ತ ಪರಿಹಾರ ದೊರಕಿಸುವಲ್ಲಿ ವಿಫಲರಾಗಿದ್ದಾರೆ.

5 ವರ್ಷಗಳ ಹಿಂದೆ ಕಟ್ಟಡದ ಒಂದು ಭಾಗ ಕುಸಿದಾಗ ಮುಖ್ಯಮಂತ್ರಿ, ಮಾಜಿ ಮುಖ್ಯಮಂತ್ರಿ, ಕೆಲವು ಸಚಿವರು ಮತ್ತು ಸ್ಥಳೀಯ ಶಾಸಕರು ಸೇರಿದಂತೆ ಘಟಾನುಘಟಿಗಳು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಶೀಘ್ರ ದುರಸ್ತಿ ಭರವಸೆ ನೀಡಿದ್ದು, ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣಗಳಿಗೆ ಫೋಸ್ ನೀಡಲು ಸೀಮಿತವಾಯಿತೇ ಹೊರತು ಯಾವುದು ಕಾರ್ಯ ರೂಪಕ್ಕೆ ಬರಲಿಲ್ಲ.

ಈಗಲೂ ಅಗ್ನಿಶಾಮಕ ಠಾಣೆಯ 60 ಮಂದಿ ಸಿಬ್ಬಂದಿ ಶಿಥಿಲವಾದ ಕಟ್ಟಡದಲ್ಲಿ ಜೀವ ಕೈಯ್ಯಲ್ಲಿ ಹಿಡಿದು ಅವಘಡಗಳಿಂದ ಸಾರ್ವಜನಿಕರ ಜೀವವನ್ನು ರಕ್ಷಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಕೊನೆಗೆ ಬೇಸತ್ತ ಅಗ್ನಿಶಾಮಕ ದಳದ ಅಧಿಕಾರಿಗಳು ಕಟ್ಟಡದ ಮೂಲ ಸ್ವರೂಪಕ್ಕೆ ಧಕ್ಕೆಯಾಗದಂತೆ ದುರಸ್ತಿ ಮಾಡಿಸುವ ನಿಟ್ಟಿನಲ್ಲಿ ಲೋಕೋಪಯೋಗಿ ಇಲಾಖೆಗೆ ಪತ್ರ ಬರೆದರು. ಆಗ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಅಗ್ನಿಶಾಮಕ ದಳದ ಕಚೇರಿಯ ಮುಂಭಾಗವನ್ನು ದುರಸ್ತಿ ಮಾಡಲು 45 ಲಕ್ಷ ರೂ. ವೆಚ್ಚ ತಗುಲಲಿದೆ ಎಂದು ಅಂದಾಜಿಸಿದ್ದರು. ಅದಕ್ಕೆ ಸ್ಪಂದಿಸಿದ ಅಗ್ನಿಶಾಮಕ ದಳದ ಅಧಿಕಾರಿಗಳು ತಕ್ಷಣ ಇಲಾಖೆಯ ಖಾತೆಯಲ್ಲಿದ್ದ 22 ಲಕ್ಷ ರೂ.ಗಳನ್ನು ಲೋಕೋಪಯೋಗಿ ಇಲಾಖೆಗೆ ಜಮಾ ಮಾಡಿದರು.

> ಅಗ್ನಿಶಾಮಕ ದಳದ ಕಚೇರಿಯ ಮುಂಭಾಗ ಮಾತ್ರವಲ್ಲದೆ, ಇಡೀ ಕಟ್ಟಡವನ್ನು ದುರಸ್ತಿ ಮಾಡಲು ಇಲಾಖೆ ವತಿಯಿಂದ ವರದಿಯನ್ನು ಸಿದ್ಧಪಡಿಸಿ, ಈಗಾಗಲೇ ಜಿಲ್ಲಾಡಳಿತಕ್ಕೆ ಸಲ್ಲಿಸಲಾಗಿದೆ. ಅದರಂತೆ ಅನುದಾನ ನೀಡಿದರೆ, ಪಾರಂಪರಿಕ ಶೈಲಿಯಲ್ಲಿ ದುರಸ್ತಿ ಕಾರ್ಯ ಆರಂಭಿಸುತ್ತೇವೆ.
> -ಎ.ದೇವರಾಜು, ಆಯುಕ್ತ, ಪುರಾತತ್ವ, ವಸ್ತು ಸಂಗ್ರಹಾಲಯ ಹಾಗೂ ಪರಂಪರೆ ಇಲಾಖೆ

ಇನ್ನೇನು ಲೋಕೋಪಯೋಗಿ ಇಲಾಖೆ ದುರಸ್ತಿ ಕಾರ್ಯ ಪ್ರಾರಂಭಿಸಬೇಕು ಎನ್ನುವಷ್ಟರಲ್ಲಿ ಪಾರಂಪರಿಕ ಸಮಿತಿ ತಜ್ಞರು ಇದಕ್ಕೆ ತಡೆಯೊಡ್ಡಿ ನೀವು ಇದನ್ನು ಮಾಡುವಂತಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ದುರಸ್ತಿ ಕಾರ್ಯ ಆರಂಭಕ್ಕೆ ವಿಘ್ನ ಎದುರಾಯಿತು.

ನಂತರ ಅಗ್ನಿಶಾಮಕ ದಳದ ಕಟ್ಟಡ ನವೀಕರಣಕ್ಕೆ ಪುರಾತತ್ವ ವಸ್ತು ಸಂಗ್ರಹಾಲಯ ಹಾಗೂ ಪರಂಪರೆ ಇಲಾಖೆಯು ಅಂದಾಜು 3.90ಕೋಟಿ ರೂ. ವೆಚ್ಚದ ವರದಿಯನ್ನು ಜಿಲ್ಲಾಡಳಿತಕ್ಕೆ ಸಲ್ಲಿಸಲು ಮುಂದಾಗಿತ್ತು. ಆದರೆ, ಈ ವರದಿ ಯಾವ ಹಂತದಲ್ಲಿದೆ ಎಂಬುದು ಯಾರಿಗೂ ತಿಳಿದಿಲ್ಲ.

ಇತ್ತೀಚೆಗೆ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮತ್ತು ಪಾರಂಪರಿಕ ಸಮಿತಿಯ ತಜ್ಞರ ತಂಡವು ಮತ್ತೊಮ್ಮೆ ಭೇಟಿ ನೀಡಿ ಅಗ್ನಿಶಾಮಕ ದಳದ ಕಟ್ಟಡ ವೀಕ್ಷಿಸಿ, ನಂತರ ಮೂಲ ಸ್ವರೂಪಕ್ಕೆ ಧಕ್ಕೆ ಆಗದಂತೆ ದುರಸ್ತಿ ಮಾಡಲು ನಿರ್ಧರಿಸಿದ್ದರು. ಆದರೆ, ಅದೇ ದಿನ ಮಧ್ಯಾಹ್ನ ಶಾಸಕ ಕೆ.ಹರೀಶ್ ಗೌಡ ನೂತನ ಕಟ್ಟಡ ನಿರ್ಮಾಣ ಮಾಡಲು ಉತ್ಸಾಹ ತೋರಿಸಿದ್ದಾರೆ. ಆದರೆ, ಯಾರು ಹೋದರು ಕೆಲಸ ಮಾತ್ರ ಆಗಲಿಲ್ಲ. ಇದರಿಂದ ಅಗ್ನಿಶಾಮಕ ದಳದ ಸಿಬ್ಬಂದಿಗಳು ಮಾತ್ರ ಅತಂತ್ರ ಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಮೂಲ ಸ್ವರೂಪಕ್ಕೆ ಧಕ್ಕೆ ಆಗದಂತೆ ಸಂರಕ್ಷಣೆ ಮಾಡುವುದು ಉತ್ತಮ. ಲೋಕೋಪಯೋಗಿ ಇಲಾಖೆಗೆ ಕಟ್ಟಡ ದುರಸ್ತಿ ಕಾರ್ಯ ಮಾಡಲು ನೀಡಿದರೆ, ಅವರು ಮೂಲ ಸ್ವರೂಪವನ್ನು ಹಾಳು ಮಾಡುತ್ತಾರೆ ಎಂಬ ಆತಂಕವಿದೆ. ಕಟ್ಟಡದ ಹಿಂಭಾಗದ ಗೋಡೆಗಳಿಗೆ ಪ್ಲಾಸ್ಟರಿಂಗ್ ಮಾಡಿ ವೈರಿಂಗ್ ಮಾಡಬೇಕು. ಗೋಡೆ ವೀಕ್ ಆಗಿದ್ದರೆ, ಅವುಗಳಿಗೆ ಹೋಲಿಗೆ ಹಾಕಿ ಎರಡು ವಾರ ಬಿಟ್ಟು ನಂತರ ಪ್ಲಾಸ್ಟರಿಂಗ್ ಮಾಡಬಹುದು. ಕಟ್ಟಡದಲ್ಲಿರುವ ಮಂಗಳೂರಿನ ಅಂಚುಗಳು ಹೋಗಿವೆ ಅದನ್ನು ಬದಲಿಸಬೇಕು ಎಂದು ಪಾರಂಪರಿಕ ಸಮಿತಿಯ ತಜ್ಞ ಪ್ರೊ.ರಂಗರಾಜು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

> ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಮತ್ತು ಕೊಡಗು ಸೇರಿದಂತೆ ಐದು ಜಿಲ್ಲೆಗಳಿಗೆ, ಸರಸ್ವತಿಪುರಂ ಅಗ್ನಿಶಾಮಕ ದಳ ಕೇಂದ್ರ ಕಚೇರಿಯಾಗಿದ್ದು, ಕಟ್ಟಡ ಭಾಗಶಃ ಕುಸಿತದ ನಂತರ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಮುಖ್ಯ ಕಚೇರಿಯನ್ನು ಹೆಬ್ಬಾಳ ಅಗ್ನಿಶಾಮಕ ಠಾಣೆಗೆ ಸ್ಥಳಾಂತರಿಸಲಾಯಿತು ಮತ್ತು ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ಮತ್ತು ಜಿಲ್ಲಾ ಅಗ್ನಿಶಾಮಕ ಅಧಿಕಾರಿಯ ಕಚೇರಿಗಳನ್ನು ಬನ್ನಿಮಂಟಪದ ಅಗ್ನಿಶಾಮಕ ಠಾಣೆಗೆ ಸ್ಥಳಾಂತರಿಸಲಾಯಿತು. ಆದರೆ, ಈಗಲೂ 60 ಮಂದಿ ಸಿಬ್ಬಂದಿ ಈ ಕಟ್ಟಡದಲ್ಲಿ ತಮ್ಮ ಜೀವವನ್ನು ಕೈಯ್ಯಲಿಡಿದು ಕೆಲಸ ಮಾಡುತ್ತಿದ್ದಾರೆ.

> ಇತ್ತೀಚೆಗೆ ಪರಿಶೀಲನೆಗೆ ತೆರಳಿದಾಗ ಕಟ್ಟಡ ಬಹುತೇಕ ಶಿಥಿಲವಾಗಿರುವುದು ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ನೂತನವಾಗಿ ಕಟ್ಟಡ ನಿರ್ಮಿಸಬೇಕಿದೆ. ಆದರೆ, ಸಂಸದರು ಹಾಗೂ ಪಾರಂಪರಿಕ ಸಮಿತಿಯೂ ಕಟ್ಟಡ ಸಂರಕ್ಷಿಸಲು ಆಸಕ್ತಿ ತೋರಿದ್ದಾರೆ. ಅವರೊಟ್ಟಿಗೆ ಚರ್ಚಿಸಿ, ಶೀಘ್ರದಲ್ಲಿಯೇ ಕಾಮಗಾರಿ ಆರಂಭಿಸಲು ಪ್ರಯತ್ನಿಸುತ್ತೇನೆ.
> -ಕೆ.ಹರೀಶ್ ಗೌಡ, ಶಾಸಕ

> ಸರಸ್ವತಿಪುರಂನಲ್ಲಿರುವ ಅಗ್ನಿಶಾಮಕ ದಳದ ಆವರಣದಲ್ಲಿರುವ ಪಾರಂಪರಿಕ ಕಟ್ಟಡವನ್ನು ಬಿಟ್ಟು ಬಾಕಿ ಇರುವ ಸ್ಥಳದಲ್ಲಿ ಪ್ರಾದೇಶಿಕ ತರಬೇತಿ ಕೇಂದ್ರ ಮತ್ತು ಕ್ವಾರ್ಟಸ್ ನಿರ್ಮಾಣ ಮಾಡಲು ಅಗ್ನಿಶಾಮಕ ದಳದ ಅಧಿಕಾರಿಗಳು ಚಿಂತಿಸಿದ್ದಾರೆ.
> -ಪಿ.ಎಸ್.ಜಯರಾಮಯ್ಯ, ಮುಖ್ಯ ಅಗ್ನಿಶಾಮಕ ಅಧಿಕಾರಿ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಪ್ರಭುತ್ವ (ಕ) + ಮರ್ಯಾದೆ ಪ್ರಶ್ನೆ (ಕ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಜೀಬ್ರಾ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಕಂಗುವಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ವಿಶ್ವಂ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಅಮರನ್ (ತ)	4 ಪ್ರದರ್ಶನಗಳು
ಸಂಗಂ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಲಿಡೋ	
ಸಂಗೊಳ್ಳಿ ರಾಯಣ್ಣ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಅಮರನ್ (ತ)	4 ಪ್ರದರ್ಶನಗಳು
ಪ್ರಭಾ	
ಬಘೀರಾ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಂಗುವಾ (3ಡಿ) (ತ): ಬೆ.10ಕ್ಕೆ, ಮ.1ಕ್ಕೆ, ರಾ.7.15ಕ್ಕೆ, ಅಮರನ್ (ತ): ಸಂ.4ಕ್ಕೆ, ಆನಂದ್ ಶ್ರೀಬಾಲ (ಮ): ರಾ.10.20ಕ್ಕೆ
ಸ್ಕ್ರೀನ್ 2	ಅಮರನ್ (ತ): ಬೆ.9.40ಕ್ಕೆ, ಮ.1ಕ್ಕೆ, ಬಘೀರ (ಕ): ಸಂ.4.15ಕ್ಕೆ, ಗ್ಲಾಡಿಯೇಟರ್ 2 (ಇಂ): ರಾ.7.20ಕ್ಕೆ, ರಾ.10.20ಕ್ಕೆ
ಸ್ಕ್ರೀನ್ 3	ದಿ ಸಬರ್‌ಮತಿ ರಿಪೋರ್ಟ್ (ಹಿಂ): ಬೆ.10.35ಕ್ಕೆ, ರಾ.7.15ಕ್ಕೆ, ಬಘೀರ (ಕ): ಮ.1.10ಕ್ಕೆ, ಲಕ್ಕಿ ಭಾಸ್ಕರ್ (ಮ): ಸಂ.4.15ಕ್ಕೆ, ಮಟ್ಕಾ (ತೆ): ರಾ.9.55ಕ್ಕೆ.
ಸ್ಕ್ರೀನ್ 4	ಭೈರತಿ ರಣಗಲ್ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಬಘೀರ (ಕ): ಬೆ.10ಕ್ಕೆ, ಮ.3.55ಕ್ಕೆ, ಕಂಗುವಾ (ಕ): ಮ.1ಕ್ಕೆ, ಕಂಗುವಾ (ತ): ಸಂ.6.55ಕ್ಕೆ, ಅಮರನ್ (ತ): ರಾ.9.50ಕ್ಕೆ.
ಸ್ಕ್ರೀನ್ 2	ಅಮರನ್ (ಕ): ಬೆ.10.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಭೈರತಿ ರಣಗಲ್ (ಕ): ಬೆ.10ಕ್ಕೆ, ಸಂ.6.30ಕ್ಕೆ, ಅಮರನ್ (ಕ): ಮ.12.40ಕ್ಕೆ, ಕಂಗುವಾ (3ಡಿ)(ತ): ಮ.3.55ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಕಂಗುವಾ (ತ): ಬೆ.10.30ಕ್ಕೆ, ಸಂ.5.20ಕ್ಕೆ, ಅಮರನ್ (ತ): ಮ.2.10ಕ್ಕೆ, ಅಮರನ್ (ಕ): ರಾ.8.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಅಂಬೇಡ್ಕರ್ ಭವನದ ಕಾಮಗಾರಿ ಪುನರಾರಂಭಿಸದಿದ್ದರೆ ಪರಿ ನಿರ್ವಾಣದ ಸರ್ಕಾರಿ ಕಾರ್ಯಕ್ರಮಕ್ಕೆ ಅಡ್ಡಿ

ದಲಿತ ಸಂಘರ್ಷ ಸಮಿತಿ ಜಿಲ್ಲಾ ಶಾಖೆ ಎಚ್ಚರಿಕೆ

ಮೈಸೂರು, ನ.22(ಜಿಎ)–ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಡಾ.ಬಿ. ಆರ್.ಅಂಬೇಡ್ಕರ್ ಭವನ ಕಾಮಗಾರಿಯನ್ನು ಡಿ.6ರ ಅಂಬೇಡ್ಕರ್ ಪರಿನಿರ್ವಾಣದ ದಿನದೊಳಗೆ ಪುನರಾರಂಭಿಸದಿದ್ದರೆ ಅಂದಿನ ಸರ್ಕಾರಿ ಕಾರ್ಯಕ್ರಮಕ್ಕೆ ತಡೆಯೊಡ್ಡುವುದಾಗಿ ದಲಿತ ಸಂಘರ್ಷ ಸಮಿತಿ ಜಿಲ್ಲಾ ಶಾಖೆ ಎಚ್ಚರಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಸಂಚಾಲಕ ಬೆಟ್ಟಯ್ಯಕೋಟೆ ಮಾತನಾಡಿ, ಜಿಲ್ಲೆಯ ದಲಿತ ಸಮುದಾಯಗಳ ಸಾಮಾಜಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಚಟುವಟಿಕೆಗಳಿಗಾಗಿ ಈ ಸಮುದಾಯ ಭವನ ನಿರ್ಮಾಣ ಆರಂಭಿಸಲಾಗಿತ್ತು. 2012ರಲ್ಲಿ ಅಂದಿನ ಸಿಎಂ ಜಗದೀಶ್ ಶೆಟ್ಟರ್ ಅಡಿಗಲ್ಲು ಹಾಕಿದ್ದರು. ಆದರೆ ಅಂದಿನಿಂದಲೂ ಕಾಮಗಾರಿ ಕುಂಟುತ್ತಲೇ ಸಾಗಿದೆ. 15 ಕೋಟಿಗೆ ಮುಗಿಯಬೇಕಾಗಿದ್ದ ಕಾಮಗಾರಿ 34 ಕೋಟಿಗೆ ಏರಿಕೆ ಆಗಿದೆ. ದಲಿತ ಸಮುದಾಯದವರ ಬೆಂಬಲದಿಂದ ಅಧಿಕಾರಕ್ಕೆ ಬಂದಿರುವ ಸಿಎಂ ಸಿದ್ದರಾಮಯ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಹೆಚ್.ಸಿ. ಮಹದೇವಪ್ಪ ಕಾಮಗಾರಿ ಪೂರ್ಣಗೊಳಿಸುವ ಬಗ್ಗೆ ಗಮನ ಹರಿಸಿಲ್ಲ ಆದ್ದರಿಂದ ಡಿ.6ರೊಳಗೆ ಕಾಮಗಾರಿ ಪುನರಾರಂಭಿಸಬೇಕು. ಇಲ್ಲದಿದ್ದರೆ ಜಿಲ್ಲೆಯಲ್ಲಿ ನಡೆಯುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಯಾವುದೇ ಕಾರ್ಯಕ್ರಮಗಳಿಗೆ ಸಿಎಂ, ಜಿಲ್ಲಾ ಉಸ್ತುವಾರಿ ಸಚಿವರು ಭಾಗವಹಿಸದಂತೆ ತಡೆಯಲಾಗುವುದೆಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಆಲಗೂಡು ಶಿವಕುಮಾರ್, ಶಂಭುಲಿಂಗಸ್ವಾಮಿ ಉಪಸ್ಥಿತರಿದ್ದರು.

ಬ್ರಾಹ್ಮಣ ಮಹಾಸಮ್ಮೇಳನದ ಪೂರ್ವಭಾವಿ ಸಭೆ

ಮೈಸೂರು, ನ. 22– ಜ. 18, 19 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಸುವರ್ಣ ಸಂಭ್ರಮ–11ನೇ ಬ್ರಾಹ್ಮಣ ಮಹಾಸಮ್ಮೇಳನವನ್ನು ಆಯೋಜಿಸಲಾಗಿದೆ. ಈ ಸಂಬಂಧ ನ. 23 (ಶನಿವಾರ) ರಂದು ಸಂಜೆ 4 ಗಂಟೆಗೆ ಕೃಷ್ಣಮೂರ್ತಿಪುರಂನ ಶ್ರೀ ರಾಮಮಂದಿರದಲ್ಲಿ ಪೂರ್ವಭಾವಿ ಸಭೆಯನ್ನು ಏರ್ಪಡಿಸಲಾಗಿದೆ.

ಸಭೆಯನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯಾಧ್ಯಕ್ಷ ಅಶೋಕ ಹಾರನಹಳ್ಳಿ ಉದ್ಘಾಟಿಸುವರು. ಮಹಾರಾಜ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ. ಎಸ್. ಮುರಳಿ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಶಾಸಕ ಟಿ.ಎಸ್. ಶ್ರೀವತ್ಸ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ವಿಪ್ರ ಮಹಿಳಾ ಸಂಗಮದ ಅಧ್ಯಕ್ಷರಾದ ಡಾ. ಕೆ.ವಿ. ಲಕ್ಷ್ಮೀದೇವಿ ಭಾಗವಹಿಸಲಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ. 9481067333, 9845115470 ಸಂಪರ್ಕಿಸಬಹುದು ಎಂದು ರಾಜ್ಯ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷ ಶ್ರೀಕಂಠಕುಮಾರ್ ತಿಳಿಸಿದ್ದಾರೆ.

ಉಚಿತ ಮೂಳೆ ಖನಿಜ ಸಾಂದ್ರತೆ ತಪಾಸಣಾ ಶಿಬಿರ

ಮೈಸೂರು, ನ. 22– ಮೈಸೂರಿನ ಚಾಮುಂಡಿಪುರಂನ ಶ್ರೀ ಸೂತ್ರ ಆಯುರ್ಧಾಮದ ವತಿಯಿಂದ ನ. 24 (ಭಾನುವಾರ) ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಉಚಿತ ಮೂಳೆ ಖನಿಜ ಸಾಂದ್ರತೆ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 7760613536, 9980123211 ಸಂಪರ್ಕಿಸುವುದು.

MAHENDRA DEVELOPERS
Muda Approved
SITES & HOUSE FOR SALE
Vajamangala: 20x30, 20x40, 30x40
Nagawala : 20x40, 30x40, 30x50, 40x60
Hunsuru : 20x30, 20x40, 30x40
Devagalli: 30x40, 40x60
Uttanahalli : 5.04 Guntas, Farm Land.
8884001233, 9620546347

NEW HOUSE FOR SALE
Ground floor 3BHK and 1st Floor 3BHK in 30/50 J.P.Nagar Ring Road, Mysuru @ affordable Price.
contact for direct owner meeting 79755 53933

ಬೇಕಾಗಿದ್ದಾರೆ
ಫ್ಯಾಷನ್ ಜ್ಯುವೆಲರಿ ಶೋರೂಂನಲ್ಲಿ ಕೆಲಸ ಮಾಡಲು
ಸೇಲ್ಸ್ ಗರ್ಲ್ಸ್
ಕನ್ನಡ ಮತ್ತು ಇಂಗ್ಲೀಷ್ ವಾಕ್‌ಚಾತುರ್ಯ ಇರಬೇಕು. ಉತ್ತಮ ಸಂಬಳ + ಇನ್‌ಸೆಂಟಿವ್ಸ್
NPG Lucky Stones — Ashoka Road, Mysore
ಫೋನ್ : **93 42 42 42 41**

IN THE COURT OF THE V JMFC AT MYSURU
C.MIS. No. 73/2024

Petitioners: 1) Smt. Jyothi GN Wife of Late Nagaraju Aged about 55 years, Residing at EWS 19, 2nd Stage, Kuvempunagar, Mysuru -570023.
2. Vinay N.,Son of Late Nagaraju Aged about 34 years, residing at Siddegowdana Hundi Village, Hura Hobli, Nanjangudu Taluk, Mysuru District - 571315. **VS**
Respondent: The Thasildar, Mysuru Taluk, Mysuru.

NOTICE

WHEREAS the petitioners have filed the above said petition against the Respondent for the issuance of Death Certificate of Late Nagaraju son of late Beeregowda who died on 01-08-1992 at Hinkal Village, Kasaba Hobli, Mysuru Taluk & District. Now, the above case is posted for steps.

If any interested person/s is/are hereby summoned to appear to be fore the Court in person or through a pleader duly instructed and able to answer all material questions relating to the above said petition on 04.12.2024 at 11.00 am. If default of your appearance before the Court on the said date the petition will be heard and determined in your absence as exparte.

Given under my hand and seal of the Court on this the 13th day of November 2024.

By Order of the court
Sd/-Shirastedar
JMFC V Court, Mysuru

Sd/- Sri. S. Somashekara
Advocate, KAR/1792/2015, No. 645, I Floor, N.S. Road,
K.R. Mohalla, Mysuru-570024.

MAHENDRA DEVELOPERS
is looking for a Dynamic and dedicated persons for
Marketing Manager - 1
Marketing Executives - 2
Site Engineers - 2
Cook - 1
8884001233, 9620546347

WANTED ACCOUNTANT
Tally Knowledge / GST/ Income Tax
Preparation or Accounting & Book Keeping
Call : **97400 41903**

DTCP APPROVED
PREMIUM RESIDENTIAL SITES (ಸೈಟ್‌ಗಳು)
on Highway (NH-275)
ಹೆದ್ದಾರಿ–275
Call : 98457 71177

ಹಸಿರು ನಮ್ಮ ಉಸಿರು

ವೈಕುಂಠ ಸಮಾರಾಧನಾ ಆಹ್ವಾನ ಪತ್ರಿಕೆ



157, ದಿವಾನ್ಸ್ ರಸ್ತೆ, ಚಾಮರಾಜ ಮೊಹಲ್ಲಾ, ಮೈಸೂರಿನಲ್ಲಿ ವಾಸವಾಗಿರುವ
ಶ್ರೀಮತಿ ವೃಂದಾ ರಾಜೀವ್ ಇವರು ಮಾಡುವ ವಿಜ್ಞಾಪನೆಗಳು
ದಿನಾಂಕ 13-11-2024ನೇ ಬುಧವಾರದಂದು ನನ್ನ ಪೂಜ್ಯಪತಿಯವರಾದ
ಶ್ರೀ ರಾಜೀವ್. ಕೆ
(ಶ್ರೀಮತಿ ಲಕ್ಷ್ಮಮ್ಮ ಮತ್ತು ಶ್ರೀ ಪಿ .ಕೆಂಪಣ್ಣ ಇವರ ಮಗ)
ದೈವಾದೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ, ತತ್ಸಂಬಂಧವಾಗಿ ವೈಕುಂಠ ಸಮಾರಾಧನೆ ಕಾರ್ಯಕ್ರಮವನ್ನು ತಾ|| 23-11-2024ನೇ ಶನಿವಾರ ಸಂಜೆ 7.00 ಗಂಟೆಗೆ ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ, ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ಭೋಜನ : ಸಂಜೆ 7.30ಕ್ಕೆ
ಇಂತಿ ದುಃಖತಪ್ತರು :
ಮೃತರ ಪತ್ನಿ-ಮಗ, ತಂದೆ-ತಾಯಿ
ಹಾಗೂ ಕುಟುಂಬವರ್ಗದವರು ಮತ್ತು ಬಂಧುಮಿತ್ರರು

WANTED IMMEDIATELY
1) DATA ENTRY OPERATOR
(Experience in MS Word, Excel, Kannada (Nudi) typing)
2) SUPERVISOR / FIELD EXECUTIVES
(Experience in field work)
Work location: #20, 1st Floor, Buddhamarga, Siddhartha Layout, Opp. New DC Office, Mysore.
Office: 0821-3588801, Phone: 9353787677

ಬೇಕಾಗಿದ್ದಾರೆ



ಪ್ರಕಾಶ್ ಟಿ ಏಜೆನ್ಸಿ, ಮೈಸೂರು
ಪ್ರಸ್ತುತ ಸರ್ಕಾರಿ ಸಂಸ್ಥೆಯ
ಮೈಸೂರು ವಿಭಾಗಗಳಲ್ಲಿ: ಮೈಸೂರು, ಕುವೆಂಪುನಗರ, ಸಾತಗಳ್ಳಿ, ವಿಜಯನಗರ, ನಂಜನಗೂಡು, ಎಚ್.ಡಿ ಕೋಟೆ, ಹುಣಸೂರು, ಪಿರಿಯಾಪಟ್ಟಣ, ಕೆ ಆರ್ ನಗರ ಇಲ್ಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಚಾಲಕರು ಮತ್ತು ತಾಂತ್ರಿಕ ಸಹಾಯಕರು ಬೇಕಾಗಿದ್ದಾರೆ.
ಮಂಡ್ಯ ವಿಭಾಗದಲ್ಲಿ: ಮಂಡ್ಯ, ಮಳವಳ್ಳಿ, ಮದ್ದೂರು, ನಾಗಮಂಗಲ, ಪಾಂಡವಪುರ, ಕೆ.ಆರ್.ಪೇಟೆ ಇಲ್ಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಚಾಲಕರು ಮತ್ತು ತಾಂತ್ರಿಕ ಸಹಾಯಕರು ಬೇಕಾಗಿದ್ದಾರೆ.
ಹಾಸನ ವಿಭಾಗದಲ್ಲಿ: ಹಾಸನ ಡಿಪೋ–1, ಹಾಸನ ಡಿಪೋ–2, ರಾಮನಾಥಪುರ, ಅರಕಲಗೂಡು, ಚನ್ನರಾಯಪಟ್ಟಣ, ಹೊಳೆನರಸೀಪುರ ಇಲ್ಲಿಗೆ ಹೊರಗುತ್ತಿಗೆ ಆಧಾರದ ಮೇಲೆ ತಾಂತ್ರಿಕ ಸಹಾಯಕರು ಬೇಕಾಗಿದ್ದಾರೆ.
ಸಂಪರ್ಕಿಸಿ:
0821-3588801, 9110692229, 8618943513
Address: #20, 1st Floor, Buddhamarga, Opp New DC Office, Siddharthanagara, Mysore

ನೈರುತ್ಯ ರೈಲ್ವೆ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಮೈಸೂರು ದಕ್ಷಿಣ, ಮೈಸೂರು - 570 008

ದಿನಾಂಕ 24-11-2024ರಂದು 5 ವರ್ಷಗಳ ಅವಧಿಗೆ ನಡೆಯುವ ಆಡಳಿತ ಮಂಡಳಿಯ ಚುನಾವಣೆ
ಸಮಯ : ಬೆಳಗ್ಗೆ 9.00 ಯಿಂದ ಸಂಜೆ 4.00 ಗಂಟೆಯವರೆಗೆ ಸ್ಥಳ : ನೈರುತ್ಯ ರೈಲ್ವೆ ಕಾರ್ಯಾಗಾರದ ಸಮುದಾಯ ಭವನ



ಪ್ರಕಟಣೆ :
ಎಂ.ಆರ್. ಚಂದ್ರಶೇಖರ್, SSE/TL/ELEC.SHOP/CWS/AP
CHANDRASHEKAR M.R.
ಹಾಲಿ ನಿರ್ದೇಶಕರು, ರೈಲ್ವೆ ಸಹಕಾರ ಬ್ಯಾಂಕ್, ಮೈಸೂರು

ಸನ್ಮಾನ್ಯ ಸದಸ್ಯರುಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಈ ಮೇಲ್ಕಂಡ ಸಹಕಾರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ತಮ್ಮಗಳ ಪರವಾಗಿ ಸ್ಪರ್ಧಿಸಿರುವ ನಮಗೆ ತಮ್ಮ ಅಮೂಲ್ಯವಾದ ಮತಗಳನ್ನು ನೀಡುವುದರ ಮೂಲಕ ಆರಂಭಿಸಿರುವ ಕೆಲಸವನ್ನು ಮುಗಿಸಲು ತಮ್ಮ ಸಹಕಾರವನ್ನು ನೀಡಿ ಬೆಂಬಲಿಸಬೇಕೆಂದು ಈ ಮೂಲಕ ತಮ್ಮುಗಳನ್ನು ಕೋರುತ್ತೇವೆ.

ಕ್ರ.ಸಂ.	ಅಭ್ಯರ್ಥಿಯ ಹೆಸರು		ಚಿಹ್ನೆ
1	ಅನ್ನಪೂರ್ಣ / ANNAPOORNA / ಹಾಲಿ ನಿರ್ದೇಶಕರು	COS/CWM/O/CWS/AP — ಮಹಿಳಾ ಮೀಸಲು	
2	ಅನ್ಬು ಕೆ. / ANBU K. / ಹಾಲಿ ನಿರ್ದೇಶಕರು / ಮಾಜಿ ನಿರ್ದೇಶಕರು ಮತ್ತು ಅಧ್ಯಕ್ಷರು, ರೈಲ್ವೆ ಸಹಕಾರ ಬ್ಯಾಂಕ್, ಮೈಸೂರು	Rtd. SSE Electrical Shop Mob. : 9448676525 — ಸಾಮಾನ್ಯ	
3	ಅಂಬಿಕ ಎ. / AMBIKA A. / ಹಾಲಿ ನಿರ್ದೇಶಕರು	Rtd. COS/CWM/O/CWS/AP Mob. 8550890891 — ಮಹಿಳಾ ಮೀಸಲು	
5	ಕನಕರಾಜು ಕೆ. / KANAKARAJU K. / ಹಾಲಿ ನಿರ್ದೇಶಕರು	SSE/INSPN.CWS/AP Mob. : 9945768844 — ಸಾಮಾನ್ಯ	
10	ದಿವಾಕರ ವೈ. / DIVAKARA Y. / S/o Late S. Yashavantha	T.NO. 2254 SR. TECH/AB SHOP/CWS/AP Mob. : 6364583068 — ಸಾಮಾನ್ಯ	
15	ಬೆಟ್ಟೇಗೌಡ / BETTEGOWDA / ಹಾಲಿ ನಿರ್ದೇಶಕರು	Rtd. CBR SHOP/CWS/AP Mob. : 9964858840 — ಸಾಮಾನ್ಯ	
16	ಭೈರಪ್ಪ ಎಸ್. / BYRAPPA S. / ಮಾಜಿ ನಿರ್ದೇಶಕರು	T.NO. 1972 SR. TECH/BR.SHOP/CWS/AP Mob. : 9886185050 — ಸಾಮಾನ್ಯ	
17	ಮಹದೇವ ಎನ್. / MAHADEVA N. / ಹಾಲಿ ನಿರ್ದೇಶಕರು	Rtd. PTG SHOP CWS/AP Mob. : 9008929056 — ಹಿಂದುಳಿದ ವರ್ಗಗಳ ಪ್ರವರ್ಗ 'ಬ' ಮೀಸಲು	
18	ಡಾ. ಮಂಜೇಗೌಡ ಎಂ.ಬಿ., B.E. / DR. MANJEGOWDA M.B., B.E. / ಹಾಲಿ ಉಪಾಧ್ಯಕ್ಷರು ಮತ್ತು ಹಾಲಿ ನಿರ್ದೇಶಕರು, ರೈಲ್ವೆ ಸಹಕಾರ ಬ್ಯಾಂಕ್, ಮೈಸೂರು	SSE/MC SHOP/CWS/AP Mob. : 9448150422 — ಸಾಮಾನ್ಯ	
20	ರವಿಶಂಕರ್ ಎಂ. / RAVISHANKAR M. / ಹಾಲಿ ನಿರ್ದೇಶಕರು	Rtd. T.NO.548 SMY SHOP/SR.TECH/CWS/AP Mob. : 9738789085 — ಹಿಂದುಳಿದ ವರ್ಗಗಳ ಪ್ರವರ್ಗ 'ಎ' ಮೀಸಲು	
21	ಲಿಂಗರಾಜು / LINGARAJU / ಹಾಲಿ ಅಧ್ಯಕ್ಷರು	Rtd. HCR SHOP/CWS/AP 9448364324 — ಪರಿಶಿಷ್ಟ ಜಾತಿ ಮೀಸಲು	
22	ಡಾ. ವಿಜಯಕುಮಾರ್ ಕೆ. / Dr. VIJAYKUMAR K. / ಹಾಲಿ ನಿರ್ದೇಶಕರು, ರೈಲ್ವೆ ಸಹಕಾರ ಬ್ಯಾಂಕ್, ಮೈಸೂರು	T.NO. 2457 SR.TECH/CBRSHOP/CWS/AP Mob. : 9036623608 — ಸಾಮಾನ್ಯ	
24	ಶ್ರೀನಿವಾಸ್ ಪಿ. / SRINIVAS P. / ಹಾಲಿ ನಿರ್ದೇಶಕರು	Rtd. JE/INSPN/CWS/AP Mob. : 9480166302 — ಸಾಮಾನ್ಯ	
26	ಸೋಮಶೇಖರ ಎನ್. / SOMASHEKARA N. / ಹಾಲಿ ನಿರ್ದೇಶಕರು	T.NO. 3909 SR.TECH/MWSHOP/CWS/AP Mob. : 8050329220 — ಸಾಮಾನ್ಯ	

ಟೆಂಡರ್ ಮಾರಾಟ
ಮಿಶ್ರ ಗಾತ್ರದ GI ಸ್ಕ್ರ್ಯಾಪ್, ಮಿಶ್ರ ಗಾತ್ರ MS ಸ್ಕ್ರ್ಯಾಪ್, SS ಸ್ಕ್ರ್ಯಾಪ್, ಸ್ಕ್ರ್ಯಾಪ್ ಕನ್ವೇ ಬೆಲ್ಟ್, ಉಪಯೋಗಿಸಿದ ಟೈರುಗಳು, ಎಲೆಕ್ಟ್ರಿಕಲ್ ಸ್ಕ್ರ್ಯಾಪ್ ವಸ್ತುಗಳ ವೀಕ್ಷಣೆ ಮತ್ತು ಪರಿಶೀಲನೆ
25.11.2024 ಮತ್ತು 26.11.2024 ರಂದು ಬೆಳಿಗ್ಗೆ 10 ರಿಂದ ಸಂಜೆ 3 ರವರೆಗೆ
ಟೆಂಡರ್ ಮುಕ್ತಾಯ ಸಮಯ 26.11.2024 ರಂದು ಸಂಜೆ 4 ಘಂಟೆ.
(PCB ಲೈಸೆನ್ಸ್ ಕಡ್ಡಾಯ)
ITC ಲಿಮಿಟೆಡ್ - ABD,
ಇಮ್ಮಾವು ಗ್ರಾಮ, ಚಿಕ್ಕಯ್ಯನ ಛತ್ರ ಹೋಬಳಿ, ನಂಜನಗೂಡು ತಾಲೂಕು,
ಮೈಸೂರು ಜಿಲ್ಲೆ–571 302

MAHENDRA DEVELOPERS
WANTED
Commercial / Semi commercial / Residential North - West corner Site or House,
30x40, 40x60, 50x80
or upto 2 acres In and around Mysore and Mysore city.
8884001233, 9620546347

WANTED
- **CASHIER (M/F)**
  Graduate, Knowledge of computer, capable of handling a section Independently.
- **DATA ENTRY OPERATOR (M/F)**
  Working Knowledge of MS Excel & MS Word with good typing speed.
- **SALES BOYS & GIRLS**
  Experienced / Fresher Candidates to look after a section Independently.

Payment will be according to the Experience & Capability

Walk-in for an interview on 24th November 2024, Sunday at 11am at below mentioned address
Mohan Bhandar Annexe
#1217, New Kanthraj Urs Road, Krishnamurthy Puram, Near Ballal circle, Mysuru-570004

ಕಾರ್ಯಕ್ರಮಗಳು ಹಾಗೂ ಸಭೆಗಳಿಗೆ
ವೈದ್ಯರ ಸಮುದಾಯ ಭವನ



ಟಿ. ನರಸೀಪುರ ರಸ್ತೆ - ರಿಂಗ್ ರಸ್ತೆ ಜಂಕ್ಷನ್, ಆಲನಹಳ್ಳಿ, ಮೈಸೂರು
ಸುಸಜ್ಜಿತ ಸಭಾಂಗಣ, ಡೈನಿಂಗ್ ಹಾಲ್, ಜನರೇಟರ್, ಪಾರ್ಕಿಂಗ್ ಸ್ಥಳ, ಇತ್ಯಾದಿ.
Call : 96111 72148, 94495 61722, 98451 29002
Office time 11 am to 6.00 pm on all days

FOR ADVERTISEMENT
STAR OF MYSORE — Please Call: 0821-2496522 / 23 Email: ad@starofmysore.com
ಮೈಸೂರು ಮಿತ್ರ — Please Call: 0821-2496522 / 23 Email: ad@mysurumithra.com

MUDA APPROVED SITES FOR SALE
Premium Gated Community Living at KNS Ethos!
4 West Facing Sites Available (30x40) in a Prime Gated Community
READY FOR REGISTRATION & CONSTRUCTION
BANK LOANS AVAILABLE
Construction Services Also Provided
+91 93422 33113, +91 99801 43847
or visit www.ashokrealtygroup.com

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಸಿ.ಎನ್. ಗುರುಸ್ವಾಮಿ
ನಿಧನ : 22-11-2024
ಪ್ರಕಟಣೆ: ವಿಜಯಶ್ರೀಪುರ ಸರ್ಕಲ್ ಫ್ರೆಂಡ್ಸ್

2K Digital
ಗಾಯತ್ರಿ ಟಾಕೀಸ್
2ನೇ ವಾರ ಯಶಸ್ವಿ ಪ್ರದರ್ಶನ



ಭೈರತಿ ರಣಗಲ್
ದಿನ 4 ಪ್ರದರ್ಶನ
10.30 1.30 4.30 7.30
ಆನ್‌ಲೈನ್ ಟಿಕೆಟ್ಸ್ ಬುಕ್ ಮೈ ಷೋ ನಲ್ಲಿ ಲಭ್ಯವಿದೆ

JOB OPPORTUNITY
URGENTLY REQUIRED
- **Female Duty Doctors**
- **GNM/B.Sc., Female Staff Nurses**
- **Experienced Receptionist:** (Female)
  Any Degree with good computer knowledge and good communication skills.

For a Reputed Hospital in Mysuru.
Attractive Salaries Offered. Free Accommodation Provided
For more details please contact: **9845049079**

Job Opportunity!
- **PURCHASE MANAGER**
  (Min. 5 years experience with FMCG)
- **CASHIER**
  (Min. 2 years experience in Cash Handling & Counter Management)

Walk-in Interview on Sunday: 24th November 2024 (11.00am to 1:30pm)
Only at
Mohan Bhandar Sayyaji Rao Road
mohanbhandar@gmail.com

ಇಂದಿನಿಂದ ಮಾರಾಟ ದಿ ಇನ್ಸ್‌ಟಿಟ್ಯೂಷನ್ ಆಫ್ ಇಂಜನಿಯರ್ಸ್‌ನ ಆಡಿಟೋರಿಯಂ ಹಾಲ್‌ನಲ್ಲಿ
ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್
Upto 90% OFF
ಸರಪ್ಲಸ್ ಫ್ಯಾಕ್ಟರಿ ಸೆಕೆಂಡ್ಸ್ ಸೇಲ್
ಪುರುಷರ ಮತ್ತು ಮಹಿಳೆಯರ ಸಹಸ್ರಾರು ಬಗೆಯ ಬ್ರಾಂಡೆಡ್ ಸಿದ್ಧ ಉಡುಪುಗಳು, ಸೀರೆಗಳು, ಶಾರ್ಟ್ಸ್, ಟಿ–ಶರ್ಟ್ಸ್, ವೆಸ್ಟರ್ನ್ ಟಾಪ್ಸ್, ಟ್ರ್ಯಾಕ್ ಪ್ಯಾಂಟ್, ಪಾಲಝೋ, ಬಾಟಮ್ಸ್, ಕುರ್ತೀ, ಜೀನ್ಸ್, ಶರ್ಟ್, ಜಾಕೆಟ್ಸ್, ಜಿಪ್ಪರ್, ವುಡ್ಡೀಸ್, ಸ್ವೆಟ್‌ಶರ್ಟ್ ಇನ್ನೂ ಹಲವಾರು ಉಡುಪುಗಳು
ಬ್ರಾಂಡೆಡ್ ಶೂಸ್ ಬೃಹತ್ ಮಾರಾಟ
adidas, NIKE, WOODLAND, U.S. POLO ASSN. SINCE 1890, asics, new balance, SKECHERS, CATIA, ANTA, PUMA, campus, cultsport, RED CHIEF, LOUIS PHILIPPE — And many more brands
FLAT 50% to 75% Off

ಪುರುಷರ ಉಡುಪುಗಳ ಭಾರಿ ರಿಯಾಯಿತಿ ಮಾರಾಟ
ರೌಂಡ್ ನೆಕ್ ಟಿ–ಶರ್ಟ್ ರೂ. 200/- | ಕಾಲರ್ ಟಿ–ಶರ್ಟ್ ರೂ. 250/- | ಶರ್ಟ್ ರೂ. 400/- | ಜೀನ್ಸ್ ರೂ. 750/-
ಕಾಟನ್ & ಫಾರ್ಮಲ್ ಪ್ಯಾಂಟ್ ರೂ. 650/- | ಜೀನ್ಸ್ ಜಾಕೆಟ್ ರೂ. 1000/- | ಸ್ವೆಟ್ ಶರ್ಟ್ಸ್ & ಸ್ವೆಟರ್ಸ್ ರೂ. 500/- | ಜಿಪ್ಪರ್ ವುಡೀಸ್ ರೂ. 700/-
ಟ್ರ್ಯಾಕ್ ಪ್ಯಾಂಟ್ ರೂ. 600/- | ಶಾರ್ಟ್ಸ್ ರೂ. 300/- | ಬ್ಲೇಝರ್ಸ್ ರೂ. 800/- | ಸೆಟ್ ರೂ. 1500/-
COMBO OFFER: 1 ಜೀನ್ಸ್, 1 ಶರ್ಟ್, 1 ರೌಂಡ್ ನೆಕ್ ಟಿ ಶರ್ಟ್ 1200/-

ಮಹಿಳೆಯರ ಮತ್ತು ಮಕ್ಕಳ ಉಡುಪುಗಳ ಭಾರಿ ರಿಯಾಯಿತಿ ಮಾರಾಟ
ಕುರ್ತೀಸ್ ರೂ. 400/- | ವೆಸ್ಟರ್ನ್ ಟಾಪ್ ರೂ. 150/- | ಡ್ರೆಸಸ್ ರೂ. 300/- | ಪ್ಲಾಝೋ ರೂ. 300/- | ಜೆಗ್ಗಿನ್ಸ್ ರೂ. 400/-
ಕುರ್ತೀ ಸೆಟ್ ರೂ. 600/- | ಸೀರೆ ರೂ. 300/- | ಸ್ವೆಟ್ ಶರ್ಟ್ಸ್ & ಸ್ವೆಟರ್ಸ್ ರೂ. 350/- | ಜಿಪ್ಪರ್ ವುಡೀಸ್ 500/- | ಜಾಕೆಟ್ ರೂ. 700/- | ವೇಲ್ ರೂ. 100/-
ಯಾವುದೇ ಮಹಿಳೆಯರ ಬ್ಯಾಗ್‌ಗಳು ಅಥವಾ ವ್ಯಾನಿಟಿ ಬ್ಯಾಗ್ಸ್ ರೂ. 500/- | ಮಕ್ಕಳ ಉಡುಪುಗಳು ರೂ. 99/-
COMBO OFFER: 1 ಕುರ್ತೀ, 1 ವೆಸ್ಟರ್ನ್ ಟಾಪ್ (ಜೀನ್ಸ್, ಪ್ಲಾಝೋ, ಲೆಗ್ಗಿನ್ಸ್, ಜಗ್ಗಿನ್ಸ್‌ಗಳಲ್ಲಿ ಯಾವುದಾರೊಂದು) 800/-
ಮಹಿಳೆಯರ ಪ್ಯಾಂಟಿ ರೂ. 60/- ಮಾತ್ರ | ಬ್ರಾಂಡೆಡ್ ಬ್ರಾ Rs. 100/- | ಬ್ರಾಂಡೆಡ್ ಪುರುಷರ ಟ್ರಂಕ್ಸ್ ರೂ. 200/-

ಆಫರ್ **4** ದಿನಗಳು ಮಾತ್ರ ನವೆಂಬರ್ ಶನಿ **23** ಭಾನು **24** ಸೋಮ **25** ಮಂಗಳವಾರ **26** ಕಡೆಯ ದಿನ
ಸ್ಥಳ : ದಿ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್
(ಆಡಿಟೋರಿಯಂ ಹಾಲ್‌ನಲ್ಲಿ), ಜೆ.ಎಲ್.ಬಿ. ರಸ್ತೆ, ಮೈಸೂರು
ಎಲ್ಲ ಪ್ರಮುಖ ಡೆಬಿಟ್/ಕ್ರೆಡಿಟ್ ಕಾರ್ಡ್‌ಗಳು, ಆನ್‌ಲೈನ್ ಪಾವತಿಗಳನ್ನು ಸ್ವೀಕರಿಸಲಾಗುವುದು
ಸಮಯ : ಬೆ.10 ರಿಂದ ರಾತ್ರಿ 10ರವರೆಗೆ ಸಂಪರ್ಕ : 8747869888
ಉಚಿತ ಪ್ರವೇಶ & ಪಾರ್ಕಿಂಗ್

ಬೇಕಾಗಿದ್ದಾರೆ ಶಿಕ್ಷಕ ಶಿಕ್ಷಕೇತರ ಸಿಬ್ಬಂದಿ
ಕರ್ನಾಟಕದಾದ್ಯಂತ ಪ್ರಮುಖ ಶಾಲೆ–ಕಾಲೇಜುಗಳಿಗೆ ಬೇಕಾಗುವ ಎಲ್ಲಾ ವಿಷಯಗಳ ಅಧ್ಯಾಪಕ, ಅಧ್ಯಾಪಕೇತರ ಸಿಬ್ಬಂದಿಗಳು, ದೈಹಿಕ ಶಿಕ್ಷಕರು, ವಿಶೇಷ ಕ್ರೀಡಾ ತರಬೇತುದಾರರು, ಗ್ರಂಥ ಪಾಲಕರು, ಪ್ರಯೋಗಾಲಯ ಸಹಾಯಕರು, ಕ್ರಾಫ್ಟ್, ಸಂಗೀತ, ಸ್ಕೂಲ್ ಬಸ್ ಚಾಲಕರು, ಅಡುಗೆಯವರು, ಮತ್ತಿತರ ಸಹಾಯಕರಾಗಿ ಕೆಲಸ ಮಾಡಲು ಆಸಕ್ತರು ಮತ್ತು ಅರ್ಹ ಅಭ್ಯರ್ಥಿಗಳು ಸಂಪರ್ಕಿಸಿ.
ನಿಮ್ಮ ಸಂಕ್ಷಿಪ್ತ ವಿವರಗಳನ್ನು ಕಳುಹಿಸಿಕೊಡಿ.
Email: sevamys@gmail.com
Whatsapp: **70904 99000** | call : **99722 09967**